




# ನಾಯಕರ ಕೈಪಿಡಿ

ಎಲ್ಲಾ ವಯಸ್ಸಿನವರಿಗೆ

# ಪ್ರೀತಿಯ ಶಿಕ್ಷಕರೇ,

"ಕಳ್ಳ ಪ್ರಮುಖ ಇನ್ಸಪೆಕ್ಟರ್" ರಜಾದಿನಗಳ ಸತ್ಯವೇದ ಶಾಲೆಗೆ ಸ್ವಾಗತ!

ನೀವು ನಿಮ್ಮ ಪ್ರಮುಖ ಇನ್ಸಪೆಕ್ಟರ್ ಟೋಪಿ ಮತ್ತು ಓಡುವ ಬೂಟುಗಳನ್ನು ಧರಿಸಿಕೊಂಡು ಹಿಂದಟ್ಟುವ ಕಾರ್ಯಕ್ಕೆ ಸಿದ್ಧರಾಗಿದ್ದೀರೋ? ನಿಮ್ಮ ಊಹೆ ಸರಿಯಾಗಿದೆ! ನಿಮ್ಮ ಸಭೆಯನ್ನು ಅರಮನೆಯ ಧ್ಯೇಯದ ಚಿತ್ರಗಳೊಂದಿಗೆ ಅಲಂಕಾರ ಮಾಡುವ, ಪ್ರಮುಖ ಇನ್ಸಪೆಕ್ಟರ್ ಬ್ಯಾಡ್ಜ್ ಮತ್ತು ನಕ್ಷತ್ರಗಳನ್ನು ಗೋಡೆಗಳಿಗೆ ಅಂಟಿಸುವ, ಮತ್ತು ಹಿಂದಟ್ಟುವ ಸಂಗೀತದೊಂದಿಗೆ ಸ್ಪೀಕರ್ ಗಳನ್ನು ಹಾಕುವ ಸಮಯ ಇದಾಗಿದೆ.

ರಜಾದಿನದ ಈ ಸತ್ಯವೇದ ಶಾಲೆಯು ಸೌವಾರ್ತಿಕ ಕೇಂದ್ರಬಿಂದುವನ್ನು ಹೊಂದಿದೆ. ನಿಮ್ಮ ವಿದ್ಯಾರ್ಥಿಗಳು ಮನೆಯಲ್ಲಿ ಮಾಡಿದ ಜೇಡಿಮಣ್ಣಿನಿಂದ (ಕ್ಲೇ) ಆಕರ್ಷಕ ರೀತಿಯಲ್ಲಿ ಯೇಸು ಕ್ರಿಸ್ತನ ಜೀವನದ ಕಥೆಗಳನ್ನು ಪ್ರತಿದಿನ ಕಲಿತುಕೊಳ್ಳುತ್ತಾರೆ. ವಾರದ ದಿನಗಳಲ್ಲಿ ರೋಮಾಪುರದ ಪುಸ್ತಕದಿಂದ (ಕೆಲವು ದೇಶಗಳಲ್ಲಿ ಮತ್ತು ಸಂಸ್ಥೆಗಳಲ್ಲಿ "ರೋಮನ್ಸ್ ರೋಡ್" ಎಂದು ಕರೆಯುತ್ತಾರೆ) ರಕ್ಷಣೆಗೆ ಅವಶ್ಯಕವಾಗಿರುವ ಐದು ಪ್ರಮುಖವಾದ ವಚನಗಳ ಮೂಲಕ ದೇವರ ಯೋಜನೆಯನ್ನು ಅವರು ಕಲಿತುಕೊಳ್ಳುತ್ತಾರೆ.

ದೇವರು ಎಲ್ಲರನ್ನು ನೋಡುತ್ತಾನೆ ಮತ್ತು ಜನರು ಯೋಚಿಸುವ, ಹೇಳುವ ಮತ್ತು ಮಾಡುವ ಕೆಟ್ಟ ಕಾರ್ಯಗಳನ್ನು ತಿಳಿದುಕೊಳ್ಳುತ್ತಾನೆ ಎಂಬದನ್ನು ವಿದ್ಯಾರ್ಥಿಗಳು ಕಲಿತುಕೊಳ್ಳುತ್ತಾರೆ. ಪಾಪವು ಜನರನ್ನು ದೇವರಿಂದ ಬೇರ್ಪಡಿಸುತ್ತದೆ ಮತ್ತು ಅದಕ್ಕೆ ತಕ್ಕ ಶಿಕ್ಷೆಯಾಗುತ್ತದೆ. ಜನರು ಮಾಡುವ ಎಲ್ಲಾ ಕೆಟ್ಟ ಕಾರ್ಯಗಳಿಗೆ ಯೇಸು ಕ್ರಿಸ್ತನು ಶಿಕ್ಷೆಯನ್ನು ಅನುಭವಿಸುವ ಆಯ್ಕೆಯನ್ನು ಮಾಡಿಕೊಂಡನು. ಆತನ ಮುಗಿದಿರುವ ಯಜ್ಞವು ಆಯ್ಕೆಯಾಗಿದೆ ಮತ್ತು ಅದನ್ನು ತೆಗೆದುಕೊಳ್ಳುವ ಅಥವಾ ಬಿಟ್ಟುಬಿಡುವ ಆಯ್ಕೆ ಜನರದ್ದಾಗಿದೆ. ತಮ್ಮನ್ನು ಕ್ಷಮಿಸುವಂತೆ ಯೇಸು ಕ್ರಿಸ್ತನನ್ನು ಬೇಡಿಕೊಳ್ಳಲು ಮತ್ತು ತಮಗಾಗಬೇಕಿದ್ದ ಶಿಕ್ಷೆಯನ್ನು ಆತನು ಅನುಭವಿಸಿದ್ದಕ್ಕೆ ಆತನಿಗೆ ಕೃತಜ್ಞತೆಯನ್ನು ಸಲ್ಲಿಸಲು ಮತ್ತು ತಮ್ಮ ಜೀವನದ ಉಳಿದ ದಿನಗಳು ಆತನನ್ನು ಹಿಂಬಾಲಿಸುವ ಪ್ರಮಾಣ ಮಾಡಲು ನೀವು ಮಕ್ಕಳನ್ನು ಮುನ್ನಡೆಸಬಹುದು. ತಾವು ರಜಾದಿನಗಳ ಸತ್ಯವೇದ ಶಾಲೆಯಲ್ಲಿ ಕಲಿತುಕೊಂಡ ಶುಭವಾರ್ತೆಯನ್ನು ತಮಗೆ ಪರಿಚಯವಿರುವವರಿಗೆ ತಿಳಿಸುವ ಸಂದೇಶಕರಾಗುವಂತೆ ನೀವು ನಿಮ್ಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಪಡಿಸಬಹುದು.

ಪ್ರತಿಯೊಂದು ಪಾಠವು ಸೂಪರ್-ತಮಾಷೆಯ ಡ್ರಾಮಾ/ನಾಟಕದಿಂದ ಕೂಡಿದ್ದು ನಿಮ್ಮ ರಜಾದಿನಗಳ ಸತ್ಯವೇದ ಶಾಲೆಯ ಪ್ರತಿಯೊಂದು ದಿನವನ್ನು ನೀವು ನಗುವಿನೊಂದಿಗೆ ಪ್ರಾರಂಭಿಸಲು ಸಹಾಯ ಮಾಡುತ್ತದೆ. ನಿಮ್ಮ ಪಾತ್ರಧಾರಿಗಳು ತಮ್ಮ ವಿಶೇಷವಾದ ವಸ್ತ್ರಗಳಲ್ಲಿ ವಿಬಿಎಸ್ ನ ಎಲ್ಲಾ ಕಡೆಗಳಲ್ಲಿದ್ದು ಮಕ್ಕಳೊಂದಿಗೆ ಸಂಬಂಧಗಳನ್ನು ದೃಢಪಡಿಸಿಕೊಳ್ಳಲು ನಿಮಗೆ ಸಹಾಯಕರಾಗಿರುವರು.

ಸೆರೆಮನೆ, ಪ್ರಮುಖ ಇನ್ಸಪೆಕ್ಟರ್ ಕಾರ್, ಮತ್ತು ಅರಮನೆಯ ಚಿತ್ರಗಳಿಂದ ಸುಲಭವಾಗಿ ಅಲಂಕಾರಮಾಡಬಹುದು. ನಿಮ್ಮ ಸಭೆಯ ವೇದಿಕೆಗೆ ನೀವು ನಿಮ್ಮಿಷ್ಟದ ಅರಮನೆಯ ಚಿತ್ರವನ್ನು ಆಯ್ಕೆ ಮಾಡುವ ಮೂಲಕ ಅಲಂಕಾರದ ಕಾರವನ್ನು ಮತ್ತಷ್ಟು ಸುಲಭ ಮಾಡಿಕೊಳ್ಳಬಹುದು. (ಅಥವಾ ಖಂಡಿತವಾಗಿಯೂ, ನಮ್ಮ ವೆಬ್ ಸೈಟ್ ನಲ್ಲಿ ನೀವು ಇವುಗಳನ್ನು ಡೌನ್ ಲೋಡ್ ಮಾಡಬಹುದು ಮತ್ತು ನಿಮ್ಮ ಪಟ್ಟಣದಲ್ಲಿ ಪ್ರಿಂಟ್ ಮಾಡಿಸಿಕೊಳ್ಳಬಹುದು!) ಹೆಚ್ಚಿನ ಮೋಜಿಗಾಗಿ, ಬೇಕರಿ (ತಿನಿಸುಗಳ ಅಂಗಡಿ) ಹಾಕುವದನ್ನು ಮರೆಯಬೇಡಿರಿ ಯಾಕಂದರೆ ರಜಾದಿನಗಳ ಸತ್ಯವೇದ ಶಾಲೆ ಮುಗಿದ ನಂತರ ನಿಮ್ಮ ಸಭೆಯ ಪ್ರತಿಯೊಬ್ಬರು ಕ್ಯಾಂಡಿ ಅಥವಾ ಊಟವನ್ನು ಖರೀದಿಸಬಹುದು.

ಸತ್ಯವೇದದ ಕಥೆಯಲ್ಲಿರುವ ಜನರಂತೆ ಅವರನ್ನು ಯೋಚಿಸಿಕೊಳ್ಳಲು ಮತ್ತು ಅವರು ಏನನ್ನು ಮಾಡುವ ಆಯ್ಕೆ ಮಾಡಿಕೊಳ್ಳುವರು ಎಂಬದನ್ನು ಮತದ ಮೂಲಕ ತಿಳಿಸುವಂತೆ ಮಕ್ಕಳನ್ನು ಪ್ರೋತ್ಸಾಹಪಡಿಸಲಾಗುವದು. ತಮ್ಮ ಕರಪತ್ರಗಳಲ್ಲಿರುವ ಒಗಟುಗಳನ್ನು ಬಿಡಿಸುವ ಮೂಲಕ ಅವರು ಸಂತೋಷಿಸುವರು, ಜೇಡಿಮಣ್ಣಿನಿಂದ ಸತ್ಯವೇದದ ಕಥೆಯನ್ನು ವಿಮರ್ಶಿಸುವರು, ಮತ್ತು ಸಂತೋಷದ ಆಟದ ಮೂಲಕ ಕಂಠಪಾಠ ವಚನವನ್ನು ಕಲಿತುಕೊಳ್ಳುವರು. ಅಲ್ಲಿಂದ ಅವರು "ಕರಕುಶಲ ಕಾರ್ಯಕ್ಕೆ" ಹೊರಡುತ್ತಾರೆ ಅಲ್ಲಿ ಅವರು ಪ್ರತಿದಿನ ತಮ್ಮ ಮನೆಗೆ ತೆಗೆದುಕೊಂಡು ಹೋಗುವಂಥ ಹೊಸ ಕರಕುಶಲವನ್ನು ಮಾಡುತ್ತಾರೆ. ಆಟದ ಸಮಯಗಳು ಅಚ್ಚುಮೆಚ್ಚಿನವುಗಳಾಗಿ ಇರುತ್ತವೆ ಯಾಕಂದರೆ ಮಕ್ಕಳು ಯಾವಾಗಲೂ ಸ್ಪರ್ಧೆಯನ್ನು ಇಷ್ಟಪಡುತ್ತಾರೆ. ಪ್ರತಿಯೊಂದು ತಂಡವನ್ನು ಅವರ ಹೊಳೆಯುವ ಬಣ್ಣದ ಬಂದನಗಳಿಂದ ಅಥವಾ ರಿಬ್ಬನ್ ಗಳಿಂದ ಗುರುತಿಸಲು ಬಹಳ ಸುಲಭವಾಗಿರುವದು. ಕೆಲವು ಸ್ವಾದಿಷ್ಟ ಅಥವಾ ರುಚಿಕರ ತಿಂಡಿಗಾಗಿ ತಿಂಡಿಯ ಮೇಜಿನ ಬಳಿ ನಿಲ್ಲಲು ಯಾರೂ ಮರೆಯುವದಿಲ್ಲ.

ಸುವಾರ್ತೆ ಸಾರಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳಿರಿ ಯಾಕಂದರೆ ಜನರು ಸುವಾರ್ತೆಯನ್ನು ಕೇಳುವ ಅವಶ್ಯಕತೆಯಿದೆ! ಒಂದುವೇಳೆ ಯಾರಾದರು ರಜಾದಿನಗಳ ಸತ್ಯವೇದ ಶಾಲೆ ನಡೆಸದೆ ಹೋದರೆ, ಅವರು ಸುವಾರ್ತೆ ಕೇಳುವದು ಹೇಗೆ? "ಸಾರಿ ಹೇಳುವವನಿಲ್ಲದೆ ಕೇಳುವದು ಹೇಗೆ? ಸಾರುವವರು ಕಳುಹಿಸಲ್ಪಡದೆ ಸಾರುವದೆಲ್ಲಿ?" ರೋಮಾ 10:14ಬಿ

ನಾವು ನಿಮಗಾಗಿ ಮತ್ತು ನಿಮ್ಮ ಇಡೀ ತಂಡಕ್ಕಾಗಿ ಪ್ರಾರ್ಥನೆ ಮಾಡುತ್ತಾ ಇದ್ದೇವೆ. ಇದನ್ನು ಉಪಯೋಗಿಸಿಕೊಳ್ಳಿರಿ. ದೇವರು ನಿಮ್ಮ ಸಂಗಡ ಇದ್ದಾನೆ.

ದೇವರು ನಿಮ್ಮನ್ನು ಆಶೀರ್ವದಿಸಲಿ
ವಿಕ್ಕಿ ಕಂಗಾಸ್



Equip & Grow
ಮಕ್ಕಳೇ ಪ್ರಮುಖರು

# ಧ್ಯೇಯ ವಚನ

ಆದರೆ ನಾವಿನ್ನೂ ಪಾಪಿಗಳಾಗಿರುವಾಗಲೇ ಕ್ರಿಸ್ತಯೇಸು
ನಮಗೋಸ್ಕರ ಪ್ರಾಣತ್ಯಾಗ ಮಾಡಿದರು. ಇದರಿಂದ ನಮ್ಮ ಮೇಲೆ
ದೇವರಿಗಿರುವ ಪ್ರೀತಿ ಎಷ್ಟೆಂದು ವ್ಯಕ್ತವಾಗುತ್ತದೆ. ರೋಮನರಿಗೆ 5:8


ಪರಿಚಯ ---- 1
ಹೊರನೋಟ ---- 3
ಈ ಪಠ್ಯವನ್ನು ಉಪಯೋಗಿಸುವದು ಹೇಗೆ ---- 4
ಕೇಂದ್ರಗಳು ---- 8
ಛಾಯಾಚಿತ್ರದ ಆಲೋಚನೆಗಳು ---- 11
ಅಲಂಕಾರದ ಆಲೋಚನೆಗಳು ---- 12
ಪಾಠ 1: ವಾಂಟೆಡ್ ---- 15
ಪಾಠ 2: ಕಾರಾಗೃಹ ---- 24
ಪಾಠ 3: ಜಾಮೀನು ---- 32
ಪಾಠ 4: ಮುದ್ರೆ ---- 40
ಪಾಠ 5: ಪ್ರತಿನಿಧಿ ---- 48
ಆಟದ ಸಮಯ ---- 57
ಗಣ್ಯತೆ ---- 61




# ಹೊರನೋಟ

## 1 ವಾಂಟೆಡ್

ಮತ್ತಾಯನು ಕರೆಯಲ್ಪಟ್ಟನು
ರೋಮಾ 3:23
ತಿಂಡಿ: ವಿಶೇಷವಾದ ಸೌತೇಕಾಯಿ ಖಾದ್ಯ
ಕರಕುಶಲ: ಪ್ರಮುಖ ಇನ್ಸಪೆಕ್ಟರ್ ರೇಡಿಯೋ





## 2 ಕಾರಾಗೃಹ

ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀ
ರೋಮಾ 6:23
ತಿಂಡಿ: ಜೆಮ್ಸ್ ನಿಂದ ಕಪ್ ಕೇಕ್
ಕರಕುಶಲ: ಬಾಗಿಲಿಗೆ ಹಾಕುವಂಥದ್ದು





## 3 ಜಾಮೀನು


ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಕೊಟ್ಟನು
ರೋಮಾ 5:8
ತಿಂಡಿ: ಚಿಕ್ಕ ಸ್ಯಾಂಡ್ ವಿಚ್
ಕರಕುಶಲ: ಪ್ರಮುಖ ಇನ್ಸಪೆಕ್ಟರ್ ಕಾರ್





## 4 ಮುದ್ರೆ

ಜಕ್ಕಾಯನು ಮರ ಹತ್ತಿದನು
ರೋಮಾ 10:9
ತಿಂಡಿ: ಹಣ್ಣಿನ ಕಬಾಬ್
ಕರಕುಶಲ: ದುರ್ಬೀನುಗಳು





## 5 ಪ್ರತಿನಿಧಿ

ಶಿಷ್ಯರು ಮನುಷ್ಯರನ್ನು ಹಿಡಿಯುವ ಬೆಸ್ತರಾದರು
ರೋಮಾ 10:4ಬಿ
ತಿಂಡಿ: ಬೇಲ್/ಚುರ್ ಮುರಿ
ಕರಕುಶಲ: ರಾಜನ ಕಿರೀಟ






# ಈ ಪರ್ವವನ್ನು ಉಪಯೋಗಿಸುವದು ಹೇಗೆ

## ಆಹ್ವಾನಿಸುವದು ಹೇಗೆ

ಬಹುತೇಕ ಸಭೆಗಳು ಸಮುದಾಯವನ್ನು ತಮ್ಮ ರಜಾದಿನಗಳ ಸತ್ಯವೇದ ಶಾಲೆಗೆ ಆಹಾವ್ನಿಸುವಾಗ ನಿಜವಾಗಿಯೂ ಉತ್ಸುಕವಗುತ್ತವೆ. ನಿಮ್ಮ ಟೀಚರ್ಸ್ ಗಳನ್ನೆಲ್ಲಾ ಒಟ್ಟಾಗಿ ಸೇರಿಸಿಕೊಂಡು ಅವರಿಗೆಲ್ಲಾ ಕಳ್ಳರು ಅಥವಾ ಪೋಲೀಸರ ವಸ್ತ್ರಗಳನ್ನು ಹಾಕಿಸಿ, ಆಹ್ವಾನ ಪತ್ರಗಳನ್ನು ಅಥವಾ ಕ್ಯಾಂಡಿಗಳನ್ನು ಹಂಚುತ್ತಾ ಮುಖ್ಯ ರಸ್ತೆಯಲ್ಲಿ ಮೆರವಣಿಗೆಗೆ ಹೋಗುವದು ಉತ್ತಮವಾದ ವಿಧಾನಗಳಲ್ಲಿ ಒಂದಾಗಿದೆ. ಇದಲ್ಲದೆ ಕೆಲವು ಸಭೆಗಳು ಮೆರವಣಿಗೆಯಲ್ಲಿ ಭಾಗಿಯಾಗಲು ತಮ್ಮ ವಾಹನಗಳನ್ನು ಬಗೆಬಗೆಯಾಗಿ ಅಲಂಕಾರ ಮಾಡುತ್ತವೆ! ಜನರನ್ನು ಆಹ್ವಾನಿಸಲು ಸಹಾಯವಾಗುವ ಸಾಮಾನ್ಯವಾದ ಸಂಗತಿ ಏನೆಂದರೆ ಸಮುದಾಯದ ಸುತ್ತಲೂ ಸ್ಥಳೀಯ ಅಂಗಡಿಗಳು ಅಥವಾ ಮೆಟ್ರೊಗಳಲ್ಲಿ ಭಿತ್ತಿ ಪತ್ರಗಳನ್ನು ಅಂಟಿಸುವ ಮೂಲಕ, ಜನರನ್ನು ನಿಮ್ಮ ರಜಾದಿನಗಳ ಸತ್ಯವೇದ ಶಾಲೆಯ ಕಾರ್ಯಕ್ರಮಕ್ಕೆ ಆಹ್ವಾನಿಸುವದಾಗಿದೆ. ಇದಲ್ಲದೆ ನೀವು ಸಾರ್ವಜನಿಕ ಸ್ಥಳಗಳಲ್ಲಿ ನಿಂತುಕೊಂಡು ಸಹ ಭಿತ್ತಿಪತ್ರಗಳನ್ನು ಹಂಚಬಹುದು.
ಆಹ್ವಾನಿಸುವ ಉದ್ದೇಶಕ್ಕೆ ಉಪಯೋಗಿಸಲು, ಪೂರ್ಣ ಬಣ್ಣದ ಆಹ್ವಾನ ಪತ್ರವನ್ನು (11 x 17 ಇಂಚುಗಳು), ಎರಡು ಬಣ್ಣದ ಆಹ್ವಾನ ಪತ್ರವನ್ನು (11 x 17 ಇಂಚುಗಳು), ಮತ್ತು ಸಣ್ಣ ಬಿತ್ತಿ ಪತ್ರಗಳನ್ನು (5.5 x 8.5 ಇಂಚುಗಳು) ಸೃಷ್ಟಿಸಿದ್ದೇವೆ. ಇವುಗಳನ್ನು ನಮ್ಮ ವೆಬ್ ಸೈಟ್ ನಿಂದ ಡೌನ್ ಲೋಡ್ ಮಾಡಿ.
ನಿಮ್ಮ ಸ್ವಂತ ಸಭೆಯ ಸಭಿಕರಿಗಾಗಿ ಆಹ್ವಾನ ಪ್ರಚಾರ ಕಾರ್ಯವನ್ನು ನಡೆಸುವ ಮೂಲಕ, ಆದಷ್ಟು ಬೇಗ ವಿಶೇಷ ಕಾರ್ಯಕ್ರಮ ಬರಲಿದೆ ಎಂಬದನ್ನು ತಿಳಿಸಲು ಮರೆಯಬೇಡಿರಿ. ಇದಲ್ಲದೆ ನೀವು ನಿಮ್ಮ ಸಭೆಯಲ್ಲಿರುವ ಪ್ರತಿಯೊಂದು ಕುಟುಂಬದವರಿಗೆ ಐದು ಭಿತ್ತಿಪತ್ರಗಳನ್ನು ಕೊಟ್ಟು, ಅವರ ಮನೆಯ ಅಕ್ಕಪಕ್ಕದಲ್ಲಿರುವವರನ್ನು ರಜಾದಿನಗಳ ಸತ್ಯವೇದ ಶಾಲೆಗೆ ಆಹ್ವಾನಿಸುವಂತೆ ಹೇಳಬಹುದು.
ಮುಖ್ಯ ಲಾಂಛನ, ಕಲಾಕೃತಿ ಮತ್ತು ಕ್ಲಿಪ್ ಆರ್ಟ್ ವೆಬ್ ಸೈಟ್ ನಲ್ಲಿ ಲಭ್ಯವಿದೆ ಇವುಗಳಿಂದ ನೀವು ಆಹ್ವಾನದ ಇತರೆ ಸಾಧನಗಳಾದ ಪೋಸ್ಟ್ ಕಾರ್ಡ್ಸ್, ಅಹ್ವಾನದ ಬ್ಯಾನರ್ಸ್, ಮುದ್ರಿತ ಟೀ-ಶರ್ಟ್ಸ್, ಅಥವಾ ಬಾಗಿಲಿಗೆ ತಲಗುಹಾಕುವ ಪತ್ರಗಳನ್ನು ಮಾಡಬಹುದು.

ಎಲ್ಲಾ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಉಪಯೋಗಿಸಿರಿ! ಮಕ್ಕಳು ಸುವಾರ್ತೆಯನ್ನು ಕೇಳಿಸಿಕೊಳ್ಳಬೇಕು ಮತ್ತು ಅದು ಸಾಧ್ಯವಾಗಲು ನಿಮ್ಮ ರಜಾದಿನಗಳ ಸತ್ಯವೇದ ಶಾಲೆ ಸೂಕ್ತವಾದ ಸ್ಥಳವಾಗಿದೆ.



**ನಮ್ಮ ಪ್ರಚಾರದ ಸಾಮಗ್ರಿಗಳ ಕಡೆಗೆ ದೃಷ್ಟಿ ಹಾಯಿಸಿರಿ!**

## ಸ್ವಯಂ ಸೇವಕರನ್ನು ಸೇರಿಸಿಕೊಳ್ಳುವದು

ನಿಮ್ಮ ರಜಾದಿನಗಳ ಸತ್ಯವೇದ ಶಾಲೆ ಕಾರ್ಯಕ್ರಮವನ್ನು ನಡೆಸಲು ಬೇಕಾದ ಪ್ರತಿಯೊಂದು ಕಾರ್ಯಗಳಿಗೆ ನೀವೇ ನಿರ್ದಿಷ್ಟವಾಗಿ ಸ್ವಯಂ ಸೇವಕರನ್ನು ₹ಸೇರಿಸಿಕೊಳ್ಳಬೇಕೆಂಬದು ನಮ್ಮ ಸಲಹೆಯಾಗಿದೆ. ಉದಾಹರಣೆಗೆ, ಪ್ರತಿವಾರ ವೇದಿಕೆಯ ಮೇಲೆ ತಮಾಷೆಯಾಗಿ ನಡೆದುಕೊಳ್ಳಲು ಬಯಸುವಂಥವರು ಮಾತ್ರವಲ್ಲ ಬದಲಾಗಿ ನಿಮ್ಮ ರಜಾದಿನಗಳ ಸತ್ಯವೇದ ಶಾಲೆ ಸುತ್ತಮುತ್ತ ನಡೆದಾಡುತ್ತಾ ದಿನವಿಡೀ ಮಕ್ಕಳನ್ನು ಅಪ್ಪಿಕೊಳ್ಳಲು ಬಯಸುವಂಥ ಮೂವರು ಕಲಾವಿದರು ನಿಮಗೆ ಅವಶ್ಯವಾಗರುತ್ತಾರೆ. ನಿಮ್ಮ ತಿಂಡಿಯ ಕೇಂದ್ರ ನಡೆಸಲು ನೀವು ಸೇರಿಸಿಕೊಳ್ಳುವ ವ್ಯಕ್ತಿಗಿಂತಲೂ ಇಲ್ಲಿ ವಿಶಿಷ್ಟ ರೀತಿಯ ಕೌಶಲ್ಯವು ಅವಶ್ಯವಾಗಿರುತ್ತದೆ.
ಕೆಲವು ತಿಂಗಳು ಮುಂಚಿತವಾಗಿಯೇ ನಿಮ್ಮ ವಿಬಿಎಸ್ ಕಾರ್ಯಕ್ರಮದ ಪ್ರಚಾರ ಕಾರ್ಯವನ್ನು ಪ್ರಾರಂಭಿಸಿ, ಮುಂಬರುವ ಕಾರ್ಯಕ್ರಮಕ್ಕಾಗಿ ಇಡೀ ಸಭಕರನ್ನು ಉತ್ಸುಕರನ್ನಾಗಿ ಮಾಡಿರಿ. ಆದರೂ, ನಿಜವಾಗಿಯೂ ಪ್ರತಿಯೊಬ್ಬ ವ್ಯಕ್ತಿಯನ್ನು ಸೇರಿಸಿಕೊಳ್ಳುವ ಕಾರ್ಯ ಪ್ರಾರಂಭವಾಗುವಾಗ, ಏನೆಲ್ಲಾ ಕಾರ್ಯಗಳನ್ನು ಮಾಡಬೇಕು ಎಂಬದರ ಪಟ್ಟಿಯನ್ನು ಮೊದಲು ಮಾಡಿಕೊಳ್ಳಿರಿ ಮತ್ತು ಆಯಾ ಕೆಲಸಗಳಿಗೆ ಯಾರು ಸೂಕ್ತವಾಗಿರುತ್ತಾರೆ ಎಂಬದರ ಬಗ್ಗೆ ಆಲೋಚನೆ ಮಾಡಲು ಪ್ರಾರಂಭಿಸಿರಿ, ಇದು ನಮ್ಮ ಸಲಹೆಯಾಗಿದೆ. ನಂತರ ಪ್ರತಿಯೊಬ್ಬ ವ್ಯಕ್ತಿಯನ್ನು ನಿರ್ದಿಷ್ಟವಾಗಿರುವ ಉದ್ಯೋಗದ ಅವಕಾಶದೊಂದಿಗೆ ಸಂಪರ್ಕಿಸಿರಿ. ಈ ಸಮಯದಲ್ಲಿ ನೀವು ಅನುಸರಿಸಬೇಕಾದ ಒಂದು ಆಲೋಚನೆ ಏನೆಂದರೆ ಎಲ್ಲಾ ಕೆಲಸಗಳನ್ನು ಬರೆದಿರುವ ಒಂದು ಹಾಳೆಯ ಮೇಲೆ ಅವರಿಂದ ಸಹಿ ಹಾಕಿಸಿಕೊಳ್ಳಬೇಕು, ಆಗ ಯಾರೆಲ್ಲಾ ಸಹಿ ಮಾಡಿದ್ದಾರೆ ಎಂಬದು ಬೇರೆಯವರಿಗೆ ಸುಲಭವಾಗಿ ಗೊತ್ತಾಗುತ್ತದೆ. “ಒಪ್ಪಿಗೆಯನ್ನು ಸೂಚಿಸುತ್ತಾರೆ” ಎಂದು ನಿಮಗೆ ಗೊತ್ತಿರುವ ವ್ಯಕ್ತಿಗಳೊಂದಿಗ ನೀವು ಪ್ರಾರಂಭಿಸಬಹುದು, ಆಗ ಬೇರೆಯವರು ಸಹ ಭಾಗಿಯಾಗುತ್ತಾ ಇದ್ದಾರೆ ಎಂಬದು ಉಳಿದವರಿಗೆ ಗೊತ್ತಾಗುತ್ತದೆ ಮತ್ತು ಅವರೂ ಸೇರಿಕೊಳ್ಳಲು ಪ್ರೋತ್ಸಾಹ ಹೊಂದುತ್ತಾರೆ. ಯಾವುದೇ ವಿಭಾಗವಾದರೂ ಜನರನ್ನು ಅವರ ವರಗಳು ಮತ್ತು ತಲಾಂತುಗಳ ಆಧಾರದ ಮೇಲೆ ಆಯ್ಕೆಮಾಡಿಕೊಳ್ಳಿರಿ.

ಮಕ್ಕಳ ಸೇವೆಯಲ್ಲಿ ಸಹಾಯ ಮಾಡುವ ಸಾಮರ್ಥ್ಯ ಕೆಲವರಿಗೆ ಇಲ್ಲದೆ ಇರಬಹುದು, ಆದರೆ ನೀವು ಯಾವುದಾದರು ನಿರ್ದಿಷ್ಟವಾದ ಕೆಲಸವನ್ನು ಪ್ರಸ್ತಾಪಿಸುವಾಗ ಅವರು ಒಪ್ಪಿಕೊಳ್ಳಲು ಮುಂದಾಗಬಹುದು. ರಜಾದಿನಗಳ ಸತ್ಯವೇದ ಶಾಲೆಯ ಕಾರ್ಯಕ್ರಮದಲ್ಲಿ ಭಾಗವಹಿಸುವಂಥದ್ದು ಮಕ್ಕಳ ಸೇವೆಯಲ್ಲಿ ತೊಡಗಿಸಿಕೊಳ್ಳುವದು ನಿಜವಾಗಿಯೂ ಎಷ್ಟೊಂದು ಸಂತೋಷಕರ ಎಂದು ನಿಮ್ಮ ಸಭೆಯಲ್ಲಿರುವ ಜನರಿಗೆ ತೋರಿಸಲು ಸೂಕ್ತವಾದ ಮಾರ್ಗವಾಗಿದೆ! ಮಕ್ಕಳ ಸೇವೆಯಲ್ಲಿರುವ ಕೆಲಸಗಾರರೆಲ್ಲರೂ ಶಿಕ್ಷಕರಾಗಿರುವದಿಲ್ಲ, ಮುಂದಿನ ಪೀಳಿಗೆಯನ್ನು ಬೆಳೆಸಲು ಕ್ರಿಸ್ತನ ದೇಹವು ಸಂಪೂರ್ಣವಾಗಿ ನಮಗೆ ಅವಶ್ಯವಾಗಿದೆ!

# ಶಿಕ್ಷಕರನ್ನು ನೇಮಿಸುವದು

ಮಕ್ಕಳೊಂದಿಗೆ ವಿವಿಧ ಕ್ಷೇತ್ರಗಳಿಗೆ ಪ್ರಯಾಣಿಸಲು ನಿಮ್ಮ ರಜಾದಿನಗಳ ಸತ್ಯವೇದ ಶಾಲೆಯ ಕಾರ್ಯಕ್ರಮಕ್ಕೆ ಅವಶ್ಯವಾಗಿರುವಷ್ಟು ಸಹಾಯಕರನ್ನು ಸೇರಿಸಿಕೊಳ್ಳಿರಿ ಎಂಬದು ನಮ್ಮ ಸಲಹೆಯಾಗಿದೆ. ಅವರು ತರಗತಿಯನ್ನು ಸಿದ್ಧಪಡಿಸುವ ಅಥವಾ ಏನಾದರೂ ಕಲಿಸುವ ಅವಶ್ಯಕತೆಯಿಲ್ಲ. ಮಕ್ಕಳ ಹೆಸರುಗಳನ್ನು ತಿಳಿದುಕೊಳ್ಳುವದು ಮತ್ತು ವಿವಿಧ ಚಟುವಟಿಕೆಗಳಲ್ಲಿ ಭಾಗಿಯಾಗಲು ಅವರಿಗೆ ಸಹಾಯ ಮಾಡುವದೇ ಅವರ ಮುಖ್ಯ ಕೆಲಸವಾಗಿರುತ್ತದೆ. ಸಮಾನ ವಯಸ್ಸಿನ ಮಕ್ಕಳ ಸಣ್ಣ ಗುಂಪುಗಳನ್ನು ನೀವು ಆಯೋಜಿಸಬಹುದು ಮತ್ತು ಪ್ರತಿಯೊಂದು ಸಣ್ಣ ಗುಂಪಿಗೆ ನಾಯಕನನ್ನು ನೇಮಿಸಬಹುದು. ಒಂದು ಗುಂಪಿನಲ್ಲಿ ಐದರಿಂದ ಹತ್ತು ಮಕ್ಕಳು ಇರಲಿ.

ನಿಮ್ಮ ಉಳಿದ ಆಯ್ಕೆಯು ಪ್ರತಿಯೊಂದು ಕೆಲಸಕ್ಕೆ ನಿರ್ದಿಷ್ಟವಾಗಿರುತ್ತದೆ: ಮುಖ್ಯ ಬೋಧನೆಯನ್ನು ಕೊಡುವ ವ್ಯಕ್ತಿ, ಪ್ರತಿಯೊಂದು ಕೇಂದ್ರ ಸ್ಥಾನವನ್ನು ನಡೆಸುವ ವ್ಯಕ್ತಿ, ಕಲಾವಿದರು, ನೃತ್ಯ ತಂಡ, ಮತ್ತು ಪ್ರತಿಯೊಂದು ಬಣ್ಣದ-ತಂಡದ ನಾಯಕ.


ಕೈಪಿಡಿಯು ಆನ್ಲೈನ್ ನಲ್ಲಿ ಲಭ್ಯವಿರುವ ಕಾರಣ, ಪ್ರತಿಯೊಂದು ಕೇಂದ್ರದ ನಾಯಕರಿಗೆ ತಮ್ಮ ಫೋನ್ ಗಳಲ್ಲಿಯೇ ತಮಗೆ ಕೊಡಲಾಗಿರುವ ಸೂಚನೆಗಳನ್ನು ಸುಲಭವಾಗಿ ಹೇಗೆ ನೋಡಬಹುದು ಎಂಬದನ್ನು ತೋರಿಸಿಕೊಡಿರಿ. ಉದಾಹರಣೆಗೆ, ತಿಂಡಿಗಳ ಜವಾಬ್ದಾರಿಕೆ ಹೊತ್ತಿರುವ ನಾಯಕ ಪ್ರತಿದಿನ ತಿಂಡಿಗಳ ವಿಷಯವಾದ ಮಾರ್ಗದರ್ಶನಗಳು ಮತ್ತು ಪಾಕವಿಧಾನಗಳನ್ನು ತನ್ನ ಸೆಲ್ ಫೋನ್ ನಲ್ಲಿಯೇ ನೋಡಬಹುದು. ಆಟದ ನಿರ್ದೇಶಕನು ಆಟದ ಆಲೋಚನೆಗಳು ಮತ್ತು ಸೂಚನೆಗಳನ್ನು ಆನ್ಲೈನ್ ನಲ್ಲಿಯೇ ತಿಳಿದುಕೊಳ್ಳಬಹುದು. ಒಂದುವೇಳೆ ನಿಮ್ಮ ಗುಂಪಿಗೆ ಇದು ಸಾಧ್ಯವಾಗದೆ ಹೋದರೆ, ನೀವು ಅವರ ನಿರ್ದಿಷ್ಟವಾದ ಹಾಳೆಯ ನಕಲು ತೆಗೆಸಬಹುದು ಮತ್ತು ಅವರು ತಮ್ಮ ಕಾರ್ಯಗಳಿಗೆ ಸಿದ್ಧರಾಗಲು ಅದನ್ನು ಕೊಡಬಹುದು.

# ಸರದಿ (ರೊಟೇಷನ್) ವಿಬಿಎಸ್

ಮೂರು ಕೇಂದ್ರಸ್ಥಾನಗಳಿರುವ ಸರದಿ ವೇಳಾಪಟ್ಟಿಯೊಂದಿಗೆ ಉಪಯೋಗಿಸುವ ಹಾಗೆ ಈ ರಜಾದಿನಗಳ ಸತ್ಯವೇದ ಶಾಲೆಯ ಪಠ್ಯವನ್ನು ಬರೆಯಲಾಗಿದೆ. ಇದರ ಅರ್ಥ ನೀವು ನಿಮ್ಮ ಗುಂಪನ್ನು ಮೂರು ಗುಂಪುಗಳಾಗಿ ವಿಭಾಗಿಸಬೇಕು, ಮತ್ತು ಅ ಗುಂಪುಗಳು ಒದಗಿಸಲಾಗಿರುವ ಮೂರು ಕೇಂದ್ರಸ್ಥಾನಗಳಲ್ಲಿ ಸರದಿ ಪ್ರಕಾರ ಭಾಗಿಯಾಗುತ್ತವೆ. ಪ್ರತಿಯೊಂದು ಕೇಂದ್ರ ಸ್ಥಾನವು ಮೂವತ್ತು ನಿಮಿಷಗಳ ಕಾಲ ಇರುತ್ತದೆ, ಮತ್ತು ಪ್ರತಿಯೊಂದು ಕೇಂದ್ರಸ್ಥಾನವು ಮೂರು ಸಲ ಪುನರಾವರ್ತನೆಯಾಗುತ್ತದೆ ಆಗ ಪ್ರತಿಯೊಂದು ಗುಂಪು ಪ್ರತಿಯೊಂದು ಕೇಂದ್ರಸ್ಥಾನದಲ್ಲಿ ಒಮ್ಮೆ ಭಾಗಿಯಾಗುತ್ತದೆ.

ನೀವು ನಿಮ್ಮ ಗುಂಪನ್ನು ನಿಮಗೆ ಬೇಕಾದ ರೀತಿಯಲ್ಲಿ ವಿಭಾಗಿಸಿಕೊಳ್ಳಬಹುದು, ಆದರೆ ನೀವು ಅವರನ್ನು ವಯಸ್ಸಿಗನುಸಾರ ವಿಭಾಗಿಸಿದರೆ ಉತ್ತಮ ಎಂಬದು ನಮ್ಮ ಸಲಹೆಯಾಗಿದೆ. ಇದರ ಅರ್ಥ ಪ್ರತಿಯೊಂದು ಗುಂಪು ಒಂದೇ ಅಳತೆಯಲ್ಲಿ ಇರುವದಿಲ್ಲ. ಆದರೆ, ಸಿಬ್ಬಂದಿ ವರ್ಗದವರು ಪ್ರತಿಯೊಂದು ಸರದಿಯ ನಿರ್ದಿಷ್ಟ ವಯಸ್ಸಿನ ಗುಂಪಿನವರಿಗೆ ಕೇಂದ್ರ ಸ್ಥಾನದ ಕಾರ್ಯವನ್ನು ಸುಲಭವಾಗಿ ಮಾಡಲು ಇದರಿಂದ ಸಹಾಯವಾಗುತ್ತದೆ. ಸಹಜವಾಗಿ ನೀವು ಉಪಯೋಗಿಸುವಂಥ ವಯಸ್ಸಿನ ಬೇರ್ಪಡಿಸುವಿಕೆಯನ್ನು ಅನುಸರಿಸಬಹುದು ಅಥವಾ ನಾವು ನಮ್ಮ ವಿದ್ಯಾರ್ಥಿ ಪುಸ್ತಕಗಳಿಗೆ ಅನುಸರಿಸಿರುವ ಮಾದರಿಯನ್ನೇ ನೀವು ಅನುಸರಿಸಬಹುದು.

ರಜಾದಿನಗಳ ಸತ್ಯವೇದ ಶಾಲೆಯ ಕಾರ್ಯಕ್ರಮದ ನಮ್ಮ ವಿದ್ಯಾರ್ಥಿ ಪುಸ್ತಕಗಳನ್ನು ನಾಲ್ಕು ವಯಸ್ಸಿನ ಗುಂಪುಗಳಾಗಿ ವಿಭಾಗಿಸಿದ್ದೇವೆ:
"ಸುಲಭ" 4-6 ವರ್ಷದವರು
"ಮಧ್ಯಮ" 7-9 ವರ್ಷದವರು
"ಕಷ್ಟ" 10-12 ವರ್ಷದವರು
"ಮುಂದುವರಿದ" 13-15 ವರ್ಷದವರು



# ಪ್ರಾರಂಭ

ಸ್ತುತಿ ಮತ್ತು ಆರಾಧನೆ:
ನಿಮ್ಮ ವಿಬಿಎಸ್ ಕಾರ್ಯಕ್ರಮವನ್ನು ನೃತ್ಯವಿರುವ ಕೆಲವು ಸಂತೋಷದ ಸಂಗೀತದೊಂದಿಗೆ ಪ್ರಾರಂಭಿಸಿರಿ. ಮುಂಚಿತವಾಗಿಯೇ ಅಭ್ಯಾಸ ಮಾಡುವ ಮತ್ತು ಹಾಡುಗಳ ನೃತ್ಯವನ್ನು ಪೂರ್ತಿಯಾಗಿ ಕಲಿತುಕೊಳ್ಳುವ ಯೌವನಸ್ಥರ ಗುಂಪನ್ನು ಸಿದ್ಧಮಾಡಬೇಕೆಂಬದು ನಮ್ಮ ಸಲಹೆಯಾಗಿದೆ. ಅವರಿಗೆ ಕಳ್ಳ ಮತ್ತು ಪ್ರಮುಖ ಇನ್ಸಪೆಕ್ಟರ್ ಶೈಲಿಯ ಬಟ್ಟೆಗಳನ್ನು ಹಾಕಿಸಿರಿ, ಮತ್ತು ನೀವು ನಿಮ್ಮ ದಿನವನ್ನು ನಿಜವಾಗಿಯೂ ಅತ್ಯಂತ ಉತ್ಸಾಹದೊಂದಿಗೆ ಪ್ರಾರಂಭಿಸಬಹುದು.

ಡ್ರಾಮಾ ಸ್ಕಿಟ್:
ಸಂಗೀತವು ಮುಗಿದ ನಂತರ, ನಾಟಕ/ಸ್ಕಿಟ್ ಪ್ರಾರಂಭವಾಗಿ, ನಗುವಿನ ಹೊಳೆಯನ್ನು ಹರಿಸುತ್ತದೆ. ಕಳ್ಳರು ಮತ್ತು ಪೋಲೀಸರು ಪಾತ್ರಗಳನ್ನು ನಿಭಾಯಿಸುವ ಮೂವರು ಕಲಾವಿದರನ್ನು ನೀವು ಮೊದಲೇ ಗುರುತಿಸಿರಬೇಕು ಮತ್ತು ಪ್ರತಿದಿನದ ನಾಟಕಕ್ಕೆ ಅವರಿಂದ ಅಭ್ಯಾಸ ಮಾಡಿಸಬೇಕು. ಬಹುತೇಕ ಸಭೆಗಳು ನಿಜವಾಗಿಯೂ ವಸ್ತ್ರಧಾರಣೆಗೆ ಆದ್ಯತೆಯನ್ನು ಕೊಟ್ಟು, ಇಡೀ ರಜಾದಿನಗಳ ಸತ್ಯವೇದ ಶಾಲೆಯ ಕಾರ್ಯಕ್ರಮವನ್ನು ಹೆಚ್ಚು ಸಂತಸಮಯವನ್ನಾಗಿಸುತ್ತವೆ.

ನಾಟಕದ ನಂತರ ಮುಖ್ಯ ಬೋಧನೆ. ನಿಮ್ಮ ವಿದ್ಯಾರ್ಥಿಗಳೆಲ್ಲರೂ ಒಟ್ಟಾಗಿ ಇನ್ನೂ ಒಂದೇ ಕೋಣೆಯೊಳಗಿರುತ್ತಾರೆ.  ವಿಶೇಷವಾಗಿರುವ ಈ ರಜಾದಿನಗಳ ಸತ್ಯವೇದ ಶಾಲೆಯ ಸತ್ಯವೇದದ ಕಥೆ ಮತ್ತು ಅನ್ವಯಿಸುವಿಕೆಯನ್ನು ಹೇಳಿರಿ.
ಪ್ರಾರ್ಥನೆ:
ಪ್ರಾರ್ಥನೆಯ ಸಮಯ ಮುಖ್ಯ ಪಾಠದ ಅಂತಿಮ ಭಾಗವಾಗಿರುತ್ತದೆ. ಹಿನ್ನಲೆಯಲ್ಲಿ ಮೃದುವಾದ ಸಂಗೀತವಿರುವಾಗ, ಇದನ್ನು ಮಾಡುವದು ಉತ್ತಮವಾಗಿರುತ್ತದೆ. ದಿನದ ಮುಖ್ಯ ಧ್ಯೇಯವನ್ನು ಸ್ಪಷ್ಟಪಡಿಸುವಂತೆ ದೇವರನ್ನು ಬೇಡಿಕೊಳ್ಳುವ ಮೂಲಕ ನೀವು ಮುಗಿಸಬಹುದು.
ಇದರೊಂದಿಗೆ ಪ್ರಾರಂಭದ ಭಾಗ ಮುಕ್ತಾಯವಾಗುತ್ತದೆ. ಪ್ರಾರಂಭ ಭಾಗದ ವೇಳಾಪಟ್ಟಿ ಹೇಗೆಂದರೆ ಸಂಗೀತಕ್ಕೆ 12 ನಿಮಿಷಗಳು, ನಾಟಕಕ್ಕೆ 8 ನಿಮಿಷಗಳು, ಮಾತನಾಡುವದಕ್ಕೆ 7 ನಿಮಿಷಗಳು, ಮತ್ತು ಪ್ರಾರ್ಥನೆಗೆ 3 ನಿಮಿಷಗಳು ಇರುತ್ತವೆ.
ನೀವು ಇವುಗಳನ್ನೆಲ್ಲಾ ಮುಗಿಸಿದ ಮೇಲೆ, ಮಕ್ಕಳು ತಮ್ಮ ತಂಡ ಸೇರಿಕೊಳ್ಳುವಾಗ ಕೆಲವು ಉತ್ಸಾಹದ ಹಾಡುಗಳನ್ನು ಹಾಕಿರಿ.

| ಸಂಗೀತ | ನಾಟಕ | ಮಾತನಾಡುವದು | ಪ್ರಾರ್ಥನೆ |
|---|---|---|---|
| 12 | 8 | 7 | 3 |



# ತಂಡ – ಸಮಯ

ಸ್ಪರ್ಧೆಗಳು ನಿಜವಾಗಿಯೂ ನಿಮ್ಮ ರಜಾದಿನಗಳ ಸತ್ಯವೇದ ಶಾಲೆಯ ಸಂತಸದ ಭಾಗವಾಗಿರುತ್ತದೆ, ಆದರೆ ಅದು ಸಂಪೂರ್ಣವಾಗಿ ಆಯ್ಕೆಯುಳ್ಳದ್ದಾಗಿದೆ. ಗುಂಪುಗಳನ್ನು ಸಮವಾಗಿಡುವ ಸಲುವಾಗಿ, ಪ್ರತಿಯೊಂದು ವಯಸ್ಸಿನ ಗುಂಪನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಿರಿ. ಬಂದನಗಳು (ಬಣ್ಣಗಳು) ಮಕ್ಕಳು ಯಾವ ತಂಡಗಳಿಗೆ ಸೇರಿದವರು ಎಂಬದನ್ನು ತೋರಿಸುವ ಸುಲಭದ ವಿಧಾನವಾಗಿದೆ. ಉದಾಹರಣೆಗೆ ನೀವು ನೀಲಿ ತಂಡ, ಕೆಂಪು ತಂಡ, ಹಳದಿ ತಂಡ, ಮತ್ತು ಹಸಿರು ತಂಡವನ್ನು ಆರಿಸಬಹುದು. ಪ್ರತಿಯೊಂದು ತಂಡಕ್ಕೆ ಆಕರ್ಷಕ, ಕ್ರಿಯಾತ್ಮಕ ಹೆಸರನ್ನು ಕೊಡಿರಿ. ಆಗ ವಯಸ್ಸಿನ ಪ್ರತಿಯೊಂದು ಗುಂಪು ನಾಲ್ಕು ಬಣ್ಣದ ತಂಡಗಳಲ್ಲಿ ಭಾಗಿಯಾಗಿದ್ದ ಮಕ್ಕಳನ್ನು ಹೊಂದಿರುವದು. ಇದೇಪ್ರಕಾರ, ನಾಲ್ಕು ತಂಡಗಳು ಎಲ್ಲಾ ವಯಸ್ಸಿನ ಮಕ್ಕಳನ್ನು ಸೇರಿಸಿಕೊಂಡಿರುತ್ತವೆ.

ತಮ್ಮ ತಂಡದ ಸಮಯವನ್ನು ಮುನ್ನಡೆಸಲು ಪ್ರತಿಯೊಂದು ತಂಡಕ್ಕೆ ನಾಯಕನನ್ನು ನೇಮಿಸಿರಿ. ಪ್ರತಿದಿನ ಪ್ರಾರಂಭದ ಅವಧಿ ಮುಗಿದ ನಂತರ, ಅವರು ತಮ್ಮ ತಂಡಕ್ಕೆ "ಪ್ರೋತ್ಸಾಹವನ್ನು" ಅಥವಾ ತಂಪಾದ ಮೆರವಣಿಗೆಯನ್ನು ಸಿದ್ಧಮಾಡಲು 5-10 ನಿಮಿಷಗಳನ್ನು ತೆಗೆದುಕೊಳ್ಳಬಹುದು. ಅವರು ಒಟ್ಟಾಗಿ ಪ್ರಾರ್ಥನೆ ಮಾಡಬಹುದು ಮತ್ತು ಜಯಿಸಲು ಬೇಕಾದ ಯೋಜನೆಗಳ ಬಗ್ಗೆ ಮಾತನಾಡಬಹುದು. ತಂಡದ ಸಮಾಲೋಚನಾ ಸಭೆಯನ್ನು ನೀವು ಮುಖ್ಯ ಕೋಣೆಯಲ್ಲಿ, ಕೋಣೆಯ ನಾಲ್ಕು ಮೂಲೆಗಳನ್ನು ವಿಭಾಗಿಸಿ, ಒಬ್ಬರು ಅಭ್ಯಾಸ ಮಾಡುವದು ಮತ್ತೊಬ್ಬರಿಗೆ ಕೇಳಿಸುವ ಹಾಗೆ ನಡೆಸಬೇಕು ಎಂಬದು ನಮ್ಮ ಸಲಹೆಯಾಗಿದೆ. ಇದರಿಂದ ಹೆಚ್ಚು ಪ್ರೋತ್ಸಾಹ ಉಂಟಾಗುತ್ತದೆ. ಅವರಿಗೆ ಅವರ ಕೇಂದ್ರಸ್ಥಾನಗಳಿಗೆ ಹೋಗುವಂತೆ ಹೇಳುವ ಸಲುವಾಗಿ ವಿಜ಼ಲ್ ಊದುವ ಅಥವಾ ಹಾಡುವ ಹಾಕುವ ಮೊದಲು 5-10 ನಿಮಿಷಗಳು ಬೇಕಾಗುತ್ತದೆ.
ದಿನದ ಕೊನೆಯಲ್ಲಿ, ನಾಲ್ಕು ತಂಡದ ನಾಯಕರನ್ನು ಮುಕ್ತಾಯದ ಸಮಾರಂಭಕ್ಕಾಗಿ ವೇದಿಕೆಯ ಮೇಲೆ ಆಹ್ವಾನಿಸಿರಿ. ತಂಡದ ಮನೋಭಾವವನ್ನು ಹಂಚಿಕೊಂಡ ನಂತರ ಯಾವ ತಂಡ ಅಂಕಪಟ್ಟಿಯಲ್ಲಿ ಮುಂದಿದೆ ಎಂಬದನ್ನು ಘೋಷಿಸಲು ಅನುಮತಿಸಿರಿ. ಪ್ರತಿಯೊಂದು ತಂಡದ ಅಂಕಗಳನ್ನು ದೊಡ್ಡ ಚಾರ್ಟ್ ಮೇಲೆ ಬರೆದಿಡಿರಿ.

ಅಂಕಗಳನ್ನು ಕೊಡಲು ಸುಲಭವಾದ ಕ್ಷೇತ್ರ "ಕಳ್ಳ ಪ್ರಮುಖ ಇನ್ಸಪೆಕ್ಟರ್ ಆಟಗಳಾಗಿವೆ." ಇದಲ್ಲದೆ ಯಾವ ವಿದ್ಯಾರ್ಥಿಗಳು ಸಭ್ಯವಾಗಿ ನಡೆದುಕೊಳ್ಳುತ್ತಿದ್ದರು, ಶುಚಿಮಾಡಲು ಸಹಾಯ ಮಾಡಿದರು, ಇತರರೊಂದಿಗೆ ಬೆರೆಯುತ್ತಿದ್ದರು, ಅಥವಾ ಕಿರಿಯರಿಗೆ ಸಹಾಯ ಮಾಡುತ್ತಿದ್ದರು ಎಂಬದನ್ನು ಗುರುತಿಸುವಂತೆ ಶಿಕ್ಷಕರಿಗೆ ಹೇಳಬಹುದು. ವಾಕ್ಯವನ್ನು ಕಂಠಪಾಠ ಮಾಡಿ ಅದನ್ನು ಹೇಳುವ ಮಕ್ಕಳು ತಮ್ಮ ತಂಡಕ್ಕೆ ಅಂಕಗಳನ್ನು ಗೆಲ್ಲಬಹುದು.
ವಾರದ ಕೊನೆಯಲ್ಲಿ ಗೆಲ್ಲುವ ತಂಡಕ್ಕೆ ವಿಶೇಷವಾದ ಬಹುಮಾನವನ್ನು ಸಿದ್ಧಮಾಡಿರಿ!

## ನಾಲ್ಕು ತಂಡಗಳಿಗೆ ನಾಲ್ಕು ಬಂದನ ಬಣ್ಣಗಳು (ಅಥವಾ ರಿಬ್ಬನ್ ಗಳು)



# ಕೇಂದ್ರಸ್ಥಾನಗಳು

ಕೇಂದ್ರಸ್ಥಾನಗಳಲ್ಲಿ ಸರದಿ ಪ್ರಕಾರ ಭಾಗಿಯಾಗುವದು ನಿಜವಾಗಿಯೂ ಸಂತೋಷಕರವಾಗಿರುತ್ತದೆ. ಸರದಿಯಲ್ಲಿ ಭಾಗಿಯಾಗುವ ಸಮಯ ಬರುವಾಗ ಹಾಡು ಹಾಕುವದು ನಮ್ಮ ಮೆಚ್ಚಿನ ವಿಧಾನವಾಗಿದೆ, ಯಾಕಂದರೆ ಮಕ್ಕಳು ಒಂದು ಸ್ಥಾನದಿಂದ ಮತ್ತೊಂದು ಸ್ಥಾನಕ್ಕೆ ಹೋಗುವಾಗ ಬಹಳ ಆಸಕ್ತಿ ಇರುತ್ತದೆ.
30 ನಿಮಿಷಗಳು ಪ್ರತಿಯೊಂದು ಸ್ಥಾನಕ್ಕೆ ಕೊಡಲಾಗಿರುವ ಸಮಯವಾಗಿದೆ.
ವಯಸ್ಸಿನ ಆಧಾರದಲ್ಲಿ ಮಕ್ಕಳನ್ನು ಅವರ ಕೇಂದ್ರಸ್ಥಾನದ ಗುಂಪುಗಳಿಗನುಸಾರ ಬೇರ್ಪಡಿಸುವದು ಬಹಳ ಸುಲಭವಾಗಿರುತ್ತದೆ. ವಯಸ್ಸಿನ ಹಂತಗಳನ್ನು ಮತ್ತು ಅವರು ಯಾವ ಕೇಂದ್ರಸ್ಥಾನದಿಂದ ಪ್ರಾರಂಭಿಸಬೇಕು ಎಂಬದನ್ನು ಮೈಕ್ ನಲ್ಲಿ ಪ್ರಕಟಿಸಿರಿ. ಅವರು ಪ್ರತಿಯೊಂದು ಅದೇ ಸ್ಥಳದಿಂದ ಪ್ರಾರಂಭಿಸಲಿ, ಆಗ ಎರಡನೇ ದಿನಕ್ಕೆ ಅವರಿಗೆ ಚೆನ್ನಾಗಿ ಕಂಠಪಾಠವಾಗಿರುತ್ತದೆ.

## ನಿಮ್ಮ ಕೇಂದ್ರಸ್ಥಾನವನ್ನು ಅಲಂಕಾರ ಮಾಡಿರಿ

ಅರಮನೆಗಳು, ಪ್ರಮುಖ ಇನ್ಸಪೆಕ್ಟರ್, ಅಥವಾ ಕಳ್ಳರ ವಸ್ತುಗಳ ಚಿತ್ರಗಳನ್ನು ಗೋಡೆಗಳಿಗೆ ಹಾಕುವಾಗ ಕ್ರಿಯಾತ್ಮಕವಾಗಿ ಯೋಚಿಸಿರಿ. ಹಾಳೆಯ ಕಳ್ಳನು ನಿಮ್ಮ ಆಟದ ಸ್ಥಳದ ಮೇಲೆ ಮೇಲ್ವಿಚಾರಣೆ ಮಾಡುವ, ತಿಂಡಿಗಳನ್ನು ಕೊಡುವ ಮೇಜಿನ ಹಿಂದಿರುವ ಗೋಡೆಯ ಮೇಲೆ ರಾಣಿಯ ಚಿತ್ರವನ್ನು ಹಾಕಬಹುದು. ಅರಸನು ಸತ್ಯವೇದದ ಪಾಠ ಅಥವಾ ವಿದ್ಯಾರ್ಥಿ ಪುಸ್ತಕದ ಚಟುವಟಿಕೆಯ ಕ್ಷೇತ್ರದಲ್ಲಿ ಹೊಂದಿಕೆಯಾಗಬಹುದು.

## ತರಗತಿ-ಪೂರ್ವ ಸಿದ್ಧತೆ

ಮಕ್ಕಳು ಬರುವ ಮೊದಲು, ಆ ದಿನದ ವೋಟಿಂಗ್ ಪೋಸ್ಟರ್ ತಗಲಾಕಿರಿ. ಒಂದು ಖಾಲಿ ಹಾಳೆಯನ್ನು ಸಿದ್ಧಮಾಡಿರಿ ಮತ್ತು ಪ್ರತಿಯೊಂದು ವಯಸ್ಸಿನ ಗುಂಪಿನವರು ಸತ್ಯವೇದದ ಕಥೆಯ ವಿಷಯದಲ್ಲಿ ತಮ್ಮ ಅಭಿಪ್ರಾಯದನುಸಾರ ಮತ ಹಾಕಿರುವದು ಕಾಣದ ಹಾಗೆ ಅದರ ಮೇಲೆ ಟೇಪ್ ಹಾಕಿರಿ. ಪ್ರತಿಯೊಂದು ಗುಂಪು ತಮಗೆ ಬೇಕಾಗಿರುವದನ್ನು ತಾವೇ ತೀರ್ಮಾನಿಸಬೇಕು ಮತ್ತು ಹಿಂದಿನ ಗುಂಪುಗಳ ಮತದಾನದ ಪ್ರಭಾವಕ್ಕೆ ಒಳಗಾಗಬಾರದು ಎಂಬದು ನಮ್ಮ ಆಲೋಚನೆಯಾಗಿದೆ. ಮಕ್ಕಳು ತಮ್ಮ ಕಾರ್ಯಹಾಳೆಯ ಮೇಲೆ ಕಾರ್ಯಮಾಡಲು ಪೆನ್ಸಿಲ್ ಅಥವಾ ಬಣ್ಣದ ಬಳಪಗಳನ್ನು ಸಿದ್ಧವಾಗಿ ಇಟ್ಟುಕೊಳ್ಳಿರಿ. ನೀವು ಯಾವುದಾದರು ಕಂಠಪಾಠ ವಚನ ಆಟವನ್ನು ಸಿದ್ಧಮಾಡಿರುವದಾದರೆ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಉಪಯೋಗಿಸಲು ಸಿದ್ಧವಾಗಿಟ್ಟುಕೊಂಡಿರ್ರಿ. ಆಗಾಗ ಗೆಲ್ಲುವವರಿಗೆ ಕೆಲವು ಬಹುಮಾನಗಳನ್ನು ನೀವು ಯೋಚಿಸುವದಾದರೆ ಅದರಿಂದ ವಿದ್ಯಾರ್ಥಿಗಳ ಸಂತೋಷವು ಅಧಿಕವಾಗುತ್ತದೆ.



## ತರಗತಿಯ ಸಮಯ:

(ಬಹುಶಃ ನಿಮ್ಮ ಸರದಿಯಲ್ಲಿ ಬರುವ ಮೊದಲನೆಯ ಕೇಂದ್ರ ಇಲ್ಲದೆ ಇರಬಹುದು)

## ಮೊದಲನೆಯ ಚಟುವಟಿಕೆ: ಮತದಾನ

ಮಕ್ಕಳು ಒಳಗೆ ಬರುವಾಗ, ಅವರು ವೋಟಿಂಗ್ ಚಾರ್ಟ್ಸ್ ಬಳಿಗೆ ಒಟ್ಟುಗೂಡಿಸಿರಿ ಮತ್ತು ಅವರಿಗೆ ಪ್ರಶ್ನೆಯನ್ನು ಮತ್ತು ಸಾಧ್ಯವಿರುವ ಎರಡು ಆಯ್ಕೆಗಳನ್ನು ಪರಿಚಯ ಪಡಿಸಿರಿ. ಸತ್ಯವೇದದ ಕಥೆಯ ವಿಷಯವಾಗಿನ ಚರ್ಚೆ ಮತ್ತು ಅಲ್ಲಿರುವದು ಹೇಗೆ ಅನ್ನಿಸುತ್ತಾ ಇದೆ ಎಂಬದರ ಅಭಿಪ್ರಾಯವನ್ನು ಹಂಚಿಕೊಳ್ಳಲು ಕೆಲವು ನಿಮಿಷಗಳನ್ನು ಕೊಡಿರಿ. ಮಕ್ಕಳು ಯಾವ ಆಯ್ಕೆಗಳನ್ನು ಮಾಡಿರಬಹುದು ಎಂಬದರ ಬಗ್ಗೆ ಚರ್ಚಿಸಿರಿ. ಪ್ರತಿಯೊಂದು ಮಗು ತಮ್ಮ ವಯಸ್ಸಿನ ಗುಂಪಿನ ಭಾಗದಲ್ಲಿರುವ ಚಾರ್ಟ್ ಮೇಲೆ ಸಹಿ ಹಾಕಿ, ತಾವೇನು ಮಾಡುತ್ತಾ ಇದ್ದರು ಅಥವಾ ಕಥೆ ಸಂಭವಿಸಿದ ಸಮಯದಲ್ಲಿ ಒಂದುವೇಳೆ ಅವರೇನಾದರೂ ಇದ್ದಿದ್ದರೆ ಯಾವ ಆಯ್ಕೆ ಮಾಡುತ್ತಾ ಇದ್ದರು ಎಂಬದನ್ನು ಆಯ್ಕೆ ಮಾಡುವಂತೆ ಹೇಳಿರಿ. (ಒಂದುವೇಳೆ ನೀವು ಆಯ್ಕೆಮಾಡುವದಾದರೆ ಅವರು ಸ್ಟಿಕ್ಕರ್ಸ್ ಸಹ ಉಪಯೋಗಿಸಬಹುದು). ಮಕ್ಕಳು ಪ್ರತಿಯೊಬ್ಬರು ಯಾವ ರೀತಿ ಮತಹಾಕಿದ್ದಾರೆ ಮತ್ತು ಯಾವ ಆಯ್ಕೆ ಹೆಚ್ಚಿನ ಮತವನ್ನು ಆ ದಿನ ಗೆದ್ದಿದೆ ಎಂಬದನ್ನು ತೋರಿಸಲು ನೀವು ಮುಗಿಸಲಾಗಿರುವ ರಜಾದಿನಗಳ ಸತ್ಯವೇದ ಶಾಲೆಯ ಚಾರ್ಟ್ ಅನ್ನು ನಾಯಕನಿಗೆ ತೋರಿಸಬಹುದು. ಸತ್ಯವೇದದ ಕಥೆಯನ್ನು ಅಳವಡಿಸಲು ಮತ್ತು ವೈಯಕ್ತಿಕವನ್ನಾಗಿ ಮಾಡಲು ಇದು ಮುಕ್ತಾಯ ಗುಂಪಿನ ಸಮಯದ ಭಾಗವಾಗಬಹುದು.

## ಎರಡನೆಯ ಚಟುವಟಿಕೆ

ಮುಂದಿನದು, ವಿದ್ಯಾರ್ಥಿಗಳು ತಮ್ಮ ಕಾರ್ಯಹಾಳೆಯನ್ನು ಪೂರ್ಣಗೊಳಿಸಲು ಕುಳಿತುಕೊಳ್ಳುವರು. ನಾಲ್ಕು ಹಂತದ ಪುಸ್ತಕಗಳಿರುತ್ತವೆ, ಆದ್ದರಿಂದ ಅವರವರ ವಯಸ್ಸಿನ ಹಂತಕ್ಕೆ ತಕ್ಕದಾದ ಪುಸ್ತಕಗಳನ್ನು ಅವರಿಗೆ ಕೊಡಿರಿ. ಓದಲು ಬಾರದೆ ಇರುವಂಥ ಚಿಕ್ಕ ಮಕ್ಕಳು ಬಣ್ಣ ಹಚ್ಚುವ ಹಾಳೆಯನ್ನು ಇಷ್ಟಪಡುತ್ತಾರೆ. ದೊಡ್ಡ ವಿದ್ಯಾರ್ಥಿಗಳಿಗೆ ಗೊಂದಲಮಯವಾಗಿರುವ ಅವ್ಯವಸ್ಥೆ ಮತ್ತು ಪದಗಳ ಹುಡುಕುವಿಕೆ ಬಹಳವಾಗಿ ಇಷ್ಟವಾಗುತ್ತದೆ. ನೀವು ನಿಮ್ಮ ವಿದ್ಯಾರ್ಥಿಗಳಿಗಾಗಿ ಪುಸ್ತಕಗಳನ್ನು ಮುದ್ರಿಸಬಹುದು ಅಥವಾ ಆಯಾ ದಿನದ ಹಾಳೆಯ ಫೋಟೋ ಕಾಪಿ ತೆಗೆಸಿಕೊಳ್ಳಬಹುದು ಮತ್ತು ಆಯಾ ದಿನದ ಪಾಠದ ಹಾಳೆಯನ್ನು ಕೊಡಬಹುದು. ದೊಡ್ಡ ಮಕ್ಕಳ ಕಾರ್ಯಹಾಳೆಗಳು ಸಕ್ರಿಯವಾದ ಚರ್ಚಾ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಮಕ್ಕಳು ಬರುವ ಮೊದಲೇ ಅದನ್ನು ಓದಿರಿ ಮತ್ತು ಅವರು ಅವುಗಳ ವಿಷಯವಾಗಿ ಕಾರ್ಯಮಾಡುವಾಗ ಆಸಕ್ತಿಯುಳ್ಳ ಚರ್ಚೆಗಳಿಗೆ ಮುಕ್ತವಾಗಿರಿ.

# ಜೇಡಿಮಣ್ಣಿನೊಂದಿಗೆ ಸತ್ಯವೇದದ ವಿಮರ್ಶೆ:

**(ಬಹುಶಃ ನಿಮ್ಮ ಸರದಿಯಲ್ಲಿ ಬರುವ ಮೊದಲನೆಯ ಕೇಂದ್ರವಾಗಿರದೆ ಇರಬಹುದು)**
ಈ ವರ್ಷದ ಮುಖ್ಯ ಪಾಠಗಳು ಹೆಚ್ಚು ಸಂತೋಷಕರವಾಗಿರಬೇಕು ಯಾಕಂದರೆ ಮಕ್ಕಳು ತಮ್ಮ ಕೈಗಳಿಗೆ ಜೇಡಿ ಮಣ್ಣು ಮೆತ್ತುಕೊಳ್ಳುವವರಾಗಿದ್ದಾರೆ! ಹಿಟ್ಟೆಲ್ಲಾ ಚೆಲ್ಲಾಪಿಲ್ಲಿಯಾಗಿರುವದೆಂದು ಯೋಚಿಸಬೇಡಿರಿ ಯಾಕಂದರೆ ಶುಚಿತ್ವ ಕಾಪಾಡಿಕೊಳ್ಳುವದು ನಮ್ಮ ಗುರಿಯಲ್ಲ, ಜೀವಿತಗಳನ್ನು ಬದಲಾಯಿಸುವದು ನಮ್ಮ ಗುರಿಯಾಗಿದೆ. ಒಂದುವೇಳೆ ನಾವು ಮಕ್ಕಳಿಗೆ ಕೇವಲ ಬೋಧನೆಯನ್ನು ಮಾತ್ರವೇ ಮಾಡಿದರೆ, ಪಾಠವನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಅಥವಾ ಮನೆಯಲ್ಲಿ ಅದನ್ನು ಅಳವಡಿಸಿಕೊಳ್ಳಲು ಅವರಿಗೆ ಸಾಧ್ಯವಾಗುವದಿಲ್ಲ.
ಆದರೆ ಸತ್ಯವೇದದ ಕಥೆಯ ಸಮಯದಲ್ಲಿ ಜೇಡಿಮಣ್ಣಿನಿಂದ ಆಕಾರಗಳನ್ನು ಮಾಡುವದು ಅವರು ಪ್ರತಿದಿನದ ಪಾಠವನ್ನು ವಿಮರ್ಶೆ ಮಾಡಲು ಮತ್ತು ನೆನಪಿನಲ್ಲಿ ಇಟ್ಟುಕೊಳ್ಳಲು ಸಹಾಯ ಮಾಡುತ್ತದೆ. ಆದ್ದರಿಂದ ಕೆಲವು ಜೀವಿತಗಳನ್ನು ಬದಲಾಯಿಸಲು ಮತ್ತು ಜೇಡಿಮಣ್ಣು ಸಿದ್ಧಮಾಡಲು ಉತ್ಸುಕರಾಗಿರಿ!
ನಮ್ಮ ಸಲಹೆ ಏನೆಂದರೆ, ನೀವು ಜೇಡಿಮಣ್ಣಿನ ಮುದ್ದೆಗಳನ್ನು ಕಲಿಸಿದ ನಂತರ, ಒಂದು ಮಗುವಿಗೆ ಒಂದಂತೆ, ಸಣ್ಣ ಉಂಡೆಗಳಾಗಿ ವಿಭಾಗಿಸಿರಿ. ನಂತರ ಪ್ರತಿಯೊಂದು ಉಂಡೆಯನ್ನು ಪ್ಲಾಸ್ಟಿಕ್ ಚೀಲದೊಳಗೆ ಹಾಕಿರಿ. ಹೀಗೆ ಮಾಡುವಾಗ ಅವುಗಳನ್ನು ಬೇಗ ಹಂಚಲು ಮತ್ತು ಸತ್ಯವೇದ ಕಥೆಯ ಅಂತ್ಯದಲ್ಲಿ ಹಿಂಪಡೆಯಲು ಸಾಧ್ಯವಾಗುತ್ತದೆ. ಒಂದುವೇಳೆ ಅವಶ್ಯವಾದರೆ ನಿಮ್ಮ ವಿದ್ಯಾರ್ಥಿಗಳು ಕೈಗಳನ್ನು ತೊಳೆದುಕೊಳ್ಳಲು ನಂತರ ಒರೆಸಿಕೊಳ್ಳಲು ಒಂದು ಬಕೆಟಿನಲ್ಲಿ ನೀರನ್ನು ಮತ್ತು ಕೈಪಾವುಡಗಳನ್ನು ಇಡಿರಿ. ಚಾಪೆ ಅಥವಾ ಮಕ್ಕಳ ಬಟ್ಟೆಗಳು ಜೇಡಿಮಣ್ಣಿಂದ ಕೊಳೆಯಾಗುವದನ್ನು ತಡೆಯಲು ನೀವು ಅವರು ಕೂರುವ ಸ್ಥಳದಲ್ಲಿ ಹಾಳೆ ಅಥವಾ ಪ್ಲಾಸ್ಟಿಕ್ ಹಾಸುವದು ಉತ್ತಮವಾಗಿರುತ್ತದೆ. ಮುಂಚಿತವಾಗಿಯೇ ಕೆಲವು ಸಹಾಯಕರನ್ನು ಸಿದ್ಧವಾಗಿರಿಸಿರಿ, ಅಥವಾ ಜೇಡಿಮಣ್ಣನ್ನೆಲ್ಲಾ ತೆಗೆದುಹಾಕಲು ನಿಮಗೆ ಸಹಾಯ ಮಾಡುವದಕ್ಕಾಗಿ ನಿಮ್ಮ ನಾಯಕರನ್ನೆಲ್ಲಾ ಸಿದ್ಧವಾಗಿರಿಸಿರಿ.

ನೀವು ಸತ್ಯವೇದದ ಪಾಠಗಳನ್ನು ವಿಮರ್ಶಿಸುವಾಗ ಜೇಡಿಮಣ್ಣಿನಿಂದ ಏನನ್ನು ಮಾಡಬೇಕು ಎಂಬದರ ಕುರಿತಾದ ಮಾರ್ಗದರ್ಶನಗಳನ್ನು ಆಯ ದಿನದ ಪಾಠದ ಮಾರ್ಗದರ್ಶನಗಳಲ್ಲಿ ತಿಳಿಸಲಾಗಿದೆ. ಇಲ್ಲಿ ನಮ್ಮ ಅಚ್ಚುಮೆಚ್ಚಿನ ಮನೆಯಲ್ಲಿಯೇ ತಯಾರಿಸಿದ ಜೇಡಿಮಣ್ಣಿನ ಪಾಕವಿಧಾನಗಳನ್ನು ಕೊಡಲಾಗಿದೆ. ನಿತ್ಯತ್ವಕ್ಕಾಗಿ ಜೀವಿತಗಳನ್ನು ಬದಲಾಯಿಸುವ ಕಾರ್ಯದಲ್ಲಿ ನೀವು ಸಂತೋಷಿಸಬಹುದು ಎಂಬುದು ನಮ್ಮ ನಿರೀಕ್ಷೆಯಾಗಿದೆ.

**ಹಣ್ಣಿನ ರೀತಿಯ ಮನೆಯಲ್ಲೇ ತಯಾರಿಸಿದ ಜೇಡಿಮಣ್ಣು (ಕ್ಲೇ):**
21/4 ಲೋಟದ ಹಿಟ್ಟು
1 ಲೋಟ ಉಪ್ಪು
2 ಟೇಬಲ್ ಸ್ಪೂನ್ ಟ್ಯಾಂಗ್ ಪಾನೀಯ ಮಿಶ್ರಣ
4 ಟೇಬಲ್ ಸ್ಪೂನ್ ಎಣ್ಣೆ
1 ಲೋಟ ನೀರು

ಪುಡಿ ರೂಪದಲ್ಲಿರುವ ಪಾನೀಯ ಮಿಶ್ರಣವನ್ನು ಜೇಡಿಮಣ್ಣಿಗೆ ಉಪಯೋಗಿಸುವದು ಉತ್ತಮವಾಗಿರುತ್ತದೆ ಯಾಕಂದರೆ ಅದರಿಂದ ಹಿಟ್ಟಿಗೆ ಬಣ್ಣ ಬರುವದು ಮಾತ್ರವಲ್ಲ, ಒಳ್ಳೆಯ ಸುವಾಸನೆಯೂ ಬರುತ್ತದೆ! ಒಲೆಯ ಮೇಲೆ ಪಾತ್ರೆಯನ್ನಿಟ್ಟು ಹಿಟ್ಟು, ಉಪ್ಪು ಮತ್ತು ಪಾನೀಯ ಪುಡಿಯನ್ನು ಕಲಸಿರಿ, ನಂತರ ನೀರು ಮತ್ತು ಎಣ್ಣೆಯನ್ನು ಹಾಕಿರಿ. ಹಿಟ್ಟು ಗಟ್ಟಿಯಾದ ಮುದ್ದೆಯಾಗುವ ತನಕ ಕಲಸುವದನ್ನು ಮತ್ತು ಕಡಿಮೆ ಉರಿಯಲ್ಲಿ ಬಿಸಿಮಾಡುವದನ್ನು ಮುಂದುವರೆಸಿರಿ. ಅದನ್ನು ಪಾತ್ರೆಯಿಂದ ಹೊರಗೆ ತೆಗೆಯಿರಿ ಮತ್ತು ಕೆಲವು ನಿಮಿಷಗಳು ಹಿಸುಕಿರಿ!





**ಸುಲಭವಾಗಿ ಮನೆಯಲ್ಲೇ ತಯಾರಿಸಿದ ಜೇಡಿಮಣ್ಣು:**
2 ಲೋಟ ಹಿಟ್ಟು
½ ಲೋಟ ಉಪ್ಪು
1 ಟೇಬಲ್ ಸ್ಪೂನ್ ಎಣ್ಣೆ
250 ಎಮ್ ಎಲ್ ತಣ್ಣೀರು (ಒಂದು ಲೋಟ)
7-10 ಹನಿ ಊಟದ ಬಣ್ಣ ಅಥವಾ ಟ್ಯಾಂಗ್ (ಸ್ವಾದಿಷ್ಟ ಪಾನೀಯ ಮಿಶ್ರಣ)

ಉಪ್ಪಿನೊಂದಿಗೆ, ಅರ್ಧದಷ್ಟು ಹಿಟ್ಟನ್ನು ಕಲಸಿರಿ. ಪ್ರತ್ಯೇಕವಾದ ಬಟ್ಟಲಿನಲ್ಲಿ, ನೀರು, ಎಣ್ಣೆ ಮತ್ತು ಬಣ್ಣವನ್ನು ಒಟ್ಟಾಗಿ ಕಲಸಿರಿ, ನಂತರ ಹಿಟ್ಟಿನ ಮಿಶ್ರಣವನ್ನು ಸೇರಿಸಿರಿ. ಉಳಿದ ಹಿಟ್ಟನ್ನು ಅವಶ್ಯಕತೆಗೆ ತಕ್ಕಂತೆ ಬೆರಸಿಕೊಳ್ಳಿರಿ. ನಂತರ ಅದು ಮೃದುವಾಗುವ ತನಕ ಒತ್ತಿರಿ.
ಇದು ಸುಲಭವಾಗಿ ಮನೆಯಲ್ಲೇ ತಯಾರಿಸಿದ ಜೇಡಿಮಣ್ಣಾಗಿದೆ ಮತ್ತು ಒಲೆ ಮೇಲೆ ಇಡುವ ಅವಶ್ಯಕತೆ ಇರುವದಿಲ್ಲ!

ಜೇಡಿಮಣ್ಣಿನ ಕೇಂದ್ರದಲ್ಲಿ ಎರಡನೆಯ ಚಟುವಟಿಕೆ

# ಕೇಂದ್ರಗಳು

## ಕಂಠಪಾಠ ವಚನ ಆಟಗಳು (ಜೇಡಿಮಣ್ಣಿನ ಆಟದ ಭಾಗ)

ಸತ್ಯವೇದ ವಚನವನ್ನು ಕಲಿತುಕೊಳ್ಳುವಂಥದ್ದು ಜೀವನಪರ್ಯಂತರ ಉಳಿಯುತ್ತದೆ. ಮಾರ್ಗದರ್ಶನ ಮತ್ತು ಸೂಚನೆಯನ್ನು ಕೊಡಲು ದೇವರು ಸರಿಯಾದ ಸಮಯದಲ್ಲಿ ವಚನವನ್ನು ಜನರ ನೆನಪಿಗೆ ತರುತ್ತಾನೆ. ಕಂಠಪಾಠ ಮಾಡುವ ಕೆಲಸವನ್ನು ಸಂತೋಷದ ಚಟುವಟಿಕೆಯಾಗಿ ಮಾರ್ಪಡಿಸುವಂಥದ್ದು ಅದನ್ನು ಆನಂದಕರ, ಬೇಗ ಮತ್ತು ಸುಲಭವನ್ನಾಗಿಸುತ್ತದೆ.

ಆಟವನ್ನು ಪರಿಚಯಮಾಡಿಸಿರಿ, ನಿಯಮಗಳನ್ನು ವಿವರಿಸಿರಿ, ಹೇಗೆ ಗೆಲ್ಲಬಹುದೆಂದು ತಿಳಿಸಿರಿ, ಮತ್ತು ತಂಡಕ್ಕೆ ಅಂಕಗಳನ್ನು ಸಂಪಾದಿಸಬಹುದೆಂದು ವಿದ್ಯಾರ್ಥಿಗಳಿಗೆ ಜ್ಞಾಪಕಪಡಿಸಿರಿ. ಅವಶ್ಯವಿರುವ ಸಾಮಗ್ರಿಗಳನ್ನು ಮತ್ತು ಸೂಚನೆಗಳನ್ನು ಅನುದಿನದ ಪಾಠದ ಯೋಜನೆಯಲ್ಲಿ ತಿಳಿಸಲಾಗಿದೆ. ಆಟವನ್ನು ಮತ್ತೆಮತ್ತೆ ಆಡಿಸಿರಿ ಆಗ ಅನೇಕರಿಗೆ "ಗೆಲ್ಲುವ" ಅವಕಾಶ ಸಿಗುತ್ತದೆ. ವಚನ ಕಂಠಪಾಠ ಮಾಡುವಾಗ ಹೆಚ್ಚು ಆನಂದಿಸುವದು ನಮ್ಮ ಗುರಿಯಾಗಿದೆ. ಈ ಚಟುವಟಿಕೆಯು ತರಗತಿಯ ಸಮಯದ ಉಳಿದ ಭಾಗವನ್ನು ಆಸಕ್ತಿಕರವನ್ನಾಗಿಸುತ್ತದೆ. ತರಗತಿಯ ಸ್ಥಳವನ್ನು ವಿದ್ಯಾರ್ಥಿಗಳಿಂದಲೇ ಶುಚಿಮಾಡಿಸಿರಿ ಮತ್ತು ಮುಂದಿನ ಗುಂಪಿನವರ ಆಗಮನಕ್ಕೆ ಸ್ಥಳವನ್ನು ಸಿದ್ಧವಾಗಿಡಿಸಿರಿ.

## ಕರಕುಶಲ ಕೇಂದ್ರ (ಬಹುಶಃ ನಿಮ್ಮ ಸರದಿಯಲ್ಲಿ ಬರುವ ಮೊದಲನೆಯ ಕೇಂದ್ರ ಇಲ್ಲದೆ ಇರಬಹುದು)

ಕರಕುಶಲಗಳು ಎಲ್ಲಾ ರೀತಿಯದ್ದಾದ ರಜಾದಿನಗಳ ಸತ್ಯವೇದ ಶಾಲೆಯ ಕಾರ್ಯಕ್ರಮಗಳ ಸಂತಸದ ಭಾಗವಾಗಿರುತ್ತವೆ. ನಾವು ನಮ್ಮ ಎಲ್ಲಾ ಕರಕುಶಲಗಳ ಮಾದರಿ ಹಾಗೂ ವಿನ್ಯಾಸಗಳನ್ನು, ಅವಶ್ಯವಿರುವ ಸಾಮಗ್ರಿಗಳು ಮತ್ತು ಸೂಚನೆಗಳನ್ನು ಆನ್ ಲೈನ್ ನಲ್ಲಿ ಒದಗಿಸುವ ಮೂಲಕ ನೀವು ನಿಮ್ಮ ರಜಾದಿನಗಳ ಸತ್ಯವೇದ ಶಾಲೆಯ ಕಾರ್ಯಕ್ರಮ ಪ್ರಾರಂಭವಾಗುವ ಮೊದಲೇ ನಿಮ್ಮ ಕರಕುಶಲಗಳನ್ನು ಡೌನ್ ಲೋಡ್ ಮಾಡಲು ಹಾಗೂ ಸಿದ್ಧಗೊಳ್ಳಲು ಯೋಚನೆ ಮಾಡಿದ್ದೇವೆ.

ಮಕ್ಕಳು ಗಡಿಬಿಡಿ ಮಾಡಲು ಅವರಿಗೆ ಅವಕಾಶ ಕೊಡಿರಿ ಮತ್ತು ಅವರಿಗೆ ಹೆಚ್ಚಿನ ಪ್ರೀತಿಯನ್ನು ತೋರಿಸಿರಿ! ತಂದೆತಾಯಿಗಳು ಅವರ ಕರಕುಶಲಗಳನ್ನು ಇಷ್ಟಪಡುತ್ತಾರೆ ಮತ್ತು ಆಯಾದಿನದ ಸತ್ಯವೇದ ಪಾಠದ ಧ್ಯೇಯಕ್ಕೆ ಅವುಗಳು ಜ್ಞಾಪಕಾರ್ಥವಾಗಿರುವವು, ಆದ್ದರಿಂದ ಫಲಿತಾಂಶವು ಪರಿಪೂರ್ಣವಾಗಿದೆಯೇ ಅಥವಾ ನಿಮ್ಮ ಮಾದರಿಯಂತೆ ಇದೆಯೇ ಎಂಬದು ಮುಖ್ಯವಾಗಿರುವದಿಲ್ಲ.

## ತಿಂಡಿಯ ಸಮಯ

ಪ್ರತಿಯೊಂದು ಪಾಠದಲ್ಲಿಯೂ ಸೂಚಿಸಲಾಗಿರುವ ತಿಂಡಿಗೆ ಪಾಕವಿಧಾನ ಮತ್ತು ಚಿತ್ರ ಇರುತ್ತದೆ. ನೀವು ಹ್ಯಾಂಡ್ ಸ್ಯಾನಿಟೈಜರ್ ಲಭ್ಯವಿದ್ದರೆ ಬಳಸಬಹುದು. ನೀವು ವಿದ್ಯಾರ್ಥಿಗಳಿಗೆ ತಿಂಡಿಯನ್ನು ಹೇಗೆ ಹಂಚುತ್ತೀರಿ ಮತ್ತು ಸಿದ್ಧಮಾಡುತ್ತೀರಿ ಎಂಬದರ ಬಗ್ಗೆ ಯೋಜನೆ ಮಾಡಿಕೊಳ್ಳಿರಿ.

## ಆಟದ ಸಮಯ

ಪ್ರತಿದಿನದ ಆಟಗಳು ಬಹಳ ಖುಷಿಯಾಗಿರುವದರಿಂದ ಇದು ಅಚ್ಚುಮೆಚ್ಚಿನದ್ದಾಗಿರುತ್ತದೆ. ಪ್ರತಿದಿನದ ಮುಕ್ತಾಯದ ಸಮಯದಲ್ಲಿ ಯಾವ ಬಣ್ಣದ ಬಂದನ ಅಥವಾ ರಿಬ್ಬನ್ ಗೆದ್ದಿವೆ ಎಂಬದನ್ನು ದಾಖಲಿಸಿಕೊಳ್ಳಲು ಹಾಗೂ ಪ್ರಕಟಿಸಲು ಮರೆಯಬೇಡಿರಿ. ಒಳ್ಳೆಯ ಕ್ರೀಡಾಸ್ಪೂರ್ತಿ ಮತ್ತು ತಂಡಗಳಿಗೆ ಹುರಿದುಂಬಿಸುವವರಿಗೂ ಬಹುಮಾನದ ಅಂಕಗಳನ್ನು ಕೊಡಿರಿ. ಸಂತೋಷಿಸಿರಿ!

## ಮುಕ್ತಾಯ

ನಾಲ್ಕು ತಂಡದ ನಾಯಕರನ್ನು ವೇದಿಕೆಯ ಮೇಲೆ ಕರೆಯಿರಿ. ತಮ್ಮ ತಂಡದ ಚಪ್ಪಾಳೆಗಳನ್ನು ವ್ಯಕ್ತಪಡಿಸಲು ಅವರಿಗೆ ಅನುಮತಿಸಿರಿ. ಪ್ರತಿಯೊಂದು ತಂಡವು ಆಯಾದಿನಕ್ಕೆ ಗೆದ್ದಿರುವ ಅಂಕಗಳನ್ನು ಪ್ರಕಟಿಸಿರಿ. ಯಾವ ತಂಡದವರು ಮುಂದಿದ್ದಾರೆ ಎಂಬದನ್ನು ತಿಳಿದುಕೊಳ್ಳಲು ವಿದ್ಯಾರ್ಥಿಗಳನ್ನು ಬಯಸುತ್ತಾರೆ. ಹೆಚ್ಚು ಅಂಕಗಳನ್ನು ಪಡೆಯುವ ತಂಡದವರಿಗೆ ವಾರದ ಕೊನೆಯಲ್ಲಿ ಬಹುಮಾನ ಸಿಗುವದು ಎಂಬದನ್ನು ಎಲ್ಲರಿಗೂ ಜ್ಞಾಪಕಪಡಿಸಿರಿ.

ಮಕ್ಕಳ ಗುಂಪಿನವರೆಲ್ಲರೂ ಆ ದಿನದ ಸತ್ಯವೇದ ವಚನವನ್ನು ಹೇಳುವಂತೆ ಮುನ್ನಡೆಸಿರಿ. ಮಾರಣೆಯ ದಿನ ಮಕ್ಕಳು ತಪ್ಪಿಸಿಕೊಳ್ಳದಂತೆ ಆಸಕ್ತರಾಗಿ ಬರುವದಕ್ಕಾಗಿ ನೀವು ಯೋಚನೆ ಮಾಡಿರುವ ತಮಾಷೆಯ ಕಾರ್ಯದ ಸುಳಿವನ್ನು ಕೊಡಿರಿ. ರಜಾದಿನಗಳ ಸತ್ಯವೇದ ಶಾಲೆಯಲ್ಲಿ ತಾವು ಅನುಭವಿಸುತ್ತಿರುವ ಸಂತೋಷವನ್ನು ತಮ್ಮ ಸ್ನೇಹಿತರಿಗೂ ಹೇಳುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ, ಮತ್ತು ನಾಳೆ ಬನ್ನಿರಿ ಎಂದು ಆಹ್ವಾನಿಸುವಂತೆ ಹೇಳಿರಿ. ಕಥೆಯ ಮುಖ್ಯ ಧ್ಯೇಯ ಮತ್ತು ಅನ್ವಯಿಸುವಿಕೆಯನ್ನು ಸಂಕ್ಷಿಪ್ತವಾಗಿ ವಿಮರ್ಶಿಸುವಂತೆ ಹೇಳಿರಿ. ಪ್ರಾರ್ಥನೆಯ ಮೂಲಕ ಮುಗಿಸಿರಿ. ತಂದೆತಾಯಿಗಳು ಬಂದು ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗುವ ತನಕ ದಿನದ ಪ್ರಾರಂಭದಲ್ಲಿ ಹಾಡಿದ ಆರಾಧನೆಯ ಹಾಡುಗಳನ್ನೇ ಹಾಡುವ ಮೂಲಕ, ಹೆಚ್ಚುವರಿ ಸಮಯವನ್ನು ಕಳೆಯಿರಿ.

# ಹೆಚ್ಚುವರಿ ಬೋನಸ್ ಆಲೋಚನೆಗಳು:



ಫೋಟೋ ತೆಗೆಸಿಕೊಳ್ಳುವದು ನಿಮ್ಮ ರಜಾದಿನಗಳ ಸತ್ಯವೇದ ಶಾಲೆಯ ಸಂತೋಷ ಮತ್ತು ಧ್ಯೇಯವನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯ ಮಾಡುವ ಕಾರ್ಯವಾಗಿದೆ.

ಮಕ್ಕಳಿಗೆ ಮತ್ತು ತಂದೆತಾಯಿಗಳಿಗೆ ಫೋಟೋ ತೆಗೆಸಿಕೊಳ್ಳುವ ಅವಕಾಶವನ್ನು ಒದಗಿಸೋಣ. ರಜಾದಿನಗಳ ಸತ್ಯವೇದ ಶಾಲೆಯ ಈ ಕಾರ್ಯಕ್ರಮವನ್ನು ಅವರು ಅನೇಕ ವರ್ಷಗಳ ತನಕ ನೆನಪಿನಲ್ಲಿಟ್ಟುಕೊಳ್ಳುವ ಹಾಗೆ ನೀವು ಇದನ್ನು ಸ್ಮರಣೀಯವಾಗಿಸಬಹುದು.






ಹೌದು, ಹುಡುಗಿಯರು ಮೀಸೆಯಲ್ಲಿ ಅಂದವಾಗಿ ಕಾಣಿಸುತ್ತಾರೆ!



ನಾಟಕದ ಪರಿಕರಗಳು ನಿಮ್ಮ ಫೋಟೋ ಬೂತ್ ಗೆ ಪರಿಪೂರ್ಣವಾಗಿವೆ.

# ಅಲಂಕಾರಗಳು





ಲೂನ್ ಗಳಿಂದ ದೊಡ್ಡ ಅಲಂಕಾರವನ್ನು ಮಾಡುವ ಮೂಲಕ ನಿಮ್ಮ ರಜಾದಿನಗಳ ಸತ್ಯವೇದ ಶಾಲೆಯ ಕಾರ್ಯಕ್ರಮದ ಉತ್ಸಾಹವನ್ನು ಹೆಚ್ಚಿಸುವಂಥ ವಾತಾವರಣವನ್ನು ಸೃಷ್ಟಿಸಿರಿ. ಇದಕ್ಕೆ ಬಹಳ ಶ್ರಮ ಹಾಕಬೇಕೆಂದು ಅನ್ನಿಸುತ್ತದೆ ಅಲ್ಲವೇ? ನೀವು ನಿಮ್ಮ ಶಿಕ್ಷಕರ ಕೂಟವನ್ನು ನಡೆಸುವಾಗ ಬಲೂನ್ ಗಳಿಗೆ ಗಾಳಿ ತುಂಬಲು ಅವರ ಸಹಾಯವನ್ನು ಪಡೆಯಬಹುದು ಮತ್ತು ಪೂರ್ತಿಯಾಗಿ ಅಲಂಕಾರ ಮಾಡಲು ಅವರ ನೆರವನ್ನು ಪಡೆಯಬಹುದು. ಅವರಿಗೆ ನಿಮ್ಮ ಉತ್ಸಾಹ ಇಷ್ಟವಾಗುವದು ಮತ್ತು ತಮ್ಮ ಸ್ಥಳವನ್ನು ಇದೇ ರೀತಿ ಅಲಂಕಾರ ಮಾಡುತ್ತಾರೆ.














# ಅಲಂಕಾರಗಳು



ಎರಡನೇ ದಿನದ ಧ್ಯೇಯ ಕಾರಾಗೃಹ.
ಈ ಆಲೋಚನೆಯೊಂದಿಗೆ ಸಿದ್ಧವಾಗಿರಿ.











# ಅಲಂಕಾರಗಳು




ನಿಮ್ಮ ವೇದಿಕೆಯನ್ನು ವಿಸ್ತಾರವಾಗಿರುವ **(5 x 2.5** ಮೀಟರ್ ಅಳತೆಯ**)** ಹಿನ್ನಲೆಯಿಂದ ಅಲಂಕಾರ ಮಾಡಿರಿ**.**






# 1 ಬೇಕಾಗಿದ್ದಾರೆ

## ಸತ್ಯವೇದ ಕಥೆ: ಮತ್ತಾಯನು ಕರೆಯಲ್ಪಟ್ಟನು

## ನಾಟಕ/ಸ್ಕಿಟ್

ಮೋಟು: ಓಹೋ ನಾನು ಬಹಳ ಆತುರದಲ್ಲಿದ್ದೇನೆ, ಹೌದು ಆತುರಗೊಂಡಿದ್ದೇನೆ! ನಾನು ಸುಮ್ಮನೆ ಕೂಗುವವನಾಗಿದ್ದೇನೆ! ಅವನು ಎಷ್ಟು ದೂರ ಇದ್ದಾನೆ, ಎಷ್ಟು ದೂರ?
ಪತ್ಲು: ಸುಮಾರು ಎರಡು ಕಿಲೊ ಮೀಟರ್ ದೂರ.
ಮೋಟು: ಅವನು ಕೋಪದಲ್ಲಿ ಇದ್ದಾನೆಯೇ?
ಪತ್ಲು: ಇನ್ನೂ ಇಲ್ಲ.
ಮೋಟು: ನಾವು ಬೇಕರಿ ಇಟ್ಟಿರುವದನ್ನು ಅವನು ನೋಡಿದಾಗ ಅವನ ಮುಖ ಹೇಗಿತ್ತು ಎಂಬದನ್ನು ನಾನು ನೋಡಬೇಕಾಗಿತ್ತು.
ಪತ್ಲು: ಸರಿ, ಸುಮ್ಮನೆ ಕೂಗಬೇಡ. ನನಗೆ ಅನ್ನಿಸುತ್ತೆ ನಾವು ನಮ್ಮ ತಮಾಷೆಯನ್ನು ಮುಗಿಸಿದ್ದೇವೆ, ಆದ್ದರಿಂದ ನೀನು ಕೂಗುವದು ಬೇಡ.
ಮೋಟು: ನಾನು ಕೂಗುವದಿಲ್ಲ, ಅವನಿಗೆ ಸಂದೇಹ ಬರುವದಿಲ್ಲ ಸ್ವಲ್ಪವೂ ಸಂದೇಹ ಬರುವದಿಲ್ಲ.
ಪತ್ಲು: ಗೋಡೆಯ ಮೇಲಿರುವ ಬೆಣ್ಣೆ ಉಬ್ಬುತ್ತದೆ ಮತ್ತು ಬಕೆಟ್ ನಲ್ಲಿರುವ ನೀರು ಹಾಗೂ ಚೀಲದಲ್ಲಿರುವ ಸಕ್ಕರೆಯ ಪುಡಿ ಸಾಕಾಗುತ್ತದೆ ಎಂಬ ದೃಢತೆ ನಿನಗೆ ಇದೆಯೇ?
ಮೋಟು: ಹೌದು, ಹೌದು ಖಂಡಿತವಾಗಿಯೂ ದೃಢತೆ ಇದೆ. ನಾವು ಅವನ ಬಳಿ ಕದ್ದುಕೊಳ್ಳಲು ಪ್ರಯತ್ನಿಸಿದ್ದನ್ನು ಅವನು ಪ್ರಮುಖ ಇನ್ಸಪೆಕ್ಟರ್ ಗೆ ಹೇಳಿದಂತೆ ಅನ್ನಿಸುದಿಲ್ಲ. ನಾವೇ ಹೋಗಿ ಕಾರ್ಯಗಳನ್ನು ಮಾಡಬೇಕೆಂದು ಅವನು ನಮಗೆ ಹೇಳಿದ್ದಾನೆ. ಹೌದಾ! ನಾವೇ ಹೋಗಬೇಕೇ? ನಾವು ಕಳ್ಳರಾಗಿದ್ದೇವೆ!
ಪತ್ಲು: ಕಳ್ಳರು ಸಿಕ್ಕಿಕೊಳ್ಳಬಾರದು!
ಮೋಟು: ನಾವು ಸಿಕ್ಕಿ ಹಾಕಿಕೊಳ್ಳಲು ಹೇಗೆ ಸಾಧ್ಯ? ನಾನು ವೇಗವಾಗಿ ಬೈಕ್ ಓಡಿಸುತ್ತೇನೆ.
ಪತ್ಲು: [ಮೋಟು ತಲೆಯ ಮೇಲೆ ಒಂದು ತಟ್ಟುವನು] ಪ್ರಮುಖ ಇನ್ಸಪೆಕ್ಟರ್ ಕಾರ್ ಗಿಂತ ವೇಗವಾಗಿ ಓಡಿಸಲು ನಿನ್ನಿಂದ ಆಗುವದಿಲ್ಲ. ಬೇಕರಿಯಲ್ಲಿ ನಮ್ಮನ್ನು ಯಾರೂ ನೋಡದಂತೆ ನಾವು ನಡೆದುಕೊಂಡರೆ ಸಾಕು.
ಮೋಟು: ನಾವೇನು ಮಾಡಿದ್ದೇವೆ ಎಂಬದನ್ನು ನೋಡಲು ಬೇಕಾದರೆ ಆಮೇಲೆ ಪಟ್ಟಣದೊಳಗೆ ಹೋಗೋಣ.
ಪತ್ಲು: ಒಂದು ಕ್ಷಣ ಇರು. ಪ್ರಮುಖ ಪ್ರಮುಖ ಇನ್ಸಪೆಕ್ಟರ್ ಅಧಿಕಾರಿ ಹೊಸದಾದ ವಾಂಟೆಡ್ ಪೋಸ್ಟರ್ ಅಂಟಿಸುತ್ತಾ ಇದ್ದಾನೆ.
ಮೋಟು: ಅದರಲ್ಲಿ ಯಾರ ಚಿತ್ರ ಇದೆ? ಬೇಕಾದರೆ ನಾವು ಹೋಗಿ ಅವನನ್ನು ಹಿಡಿಯೋಣ ಮತ್ತು ಬಹುಮಾನದ ಹಣವನ್ನು ಪಡೆಯೋಣ.
ಪತ್ಲು: ವಾಂಟೆಡ್ ಪೋಸ್ಟರ್ ಕೆಳಗೆ ಏನೋ ಇದೆ: ಅಯ್ಯೋ ಬಹುಮಾನದ ಮೊತ್ತ ಹೆಚ್ಚೇನೂ ಇಲ್ಲ, ಕೇವಲ ಇಪ್ಪತ್ತು ಅಷ್ಟೆ.
ಮೋಟು: ಇಪ್ಪತ್ತಾ? ಕೇವಲ ಇಪ್ಪತ್ತು ರುಪಾಯಿ ಬಹುಮಾನದ ಮೊತ್ತಕ್ಕೆ ಕಾರಾಗೃಹಕ್ಕೆ ಹೋಗುವಂಥ ತಪ್ಪು ಮಾಡಿರುವ ಮೂರ್ಖನಾದರು ಯಾರು?
ಪತ್ಲು: ಕೆಲವು ಕಳ್ಳರು ಅನ್ನಿಸುತ್ತದೆ?
ಮೋಟು: ಅವರು ಯಾರು? ಆ ಮೂರ್ಖರು ಯಾರು?
ಪತ್ಲು: ಅದು ನಾವೇ.
ಮೋಟು: ಅಯ್ಯೋ, ಬಹಳ ತಮಾಷೆಯಾಗಿದೆಯಲ್ಲವೇ! ನಾವೇ ಎಂದು ನೀನು ಹೇಳಿದೆ ಎಂದು ನನಗೆ ಅನ್ನಿಸಿತು.
ಪತ್ಲು: ಮೋಟು ಅದು ನಿಜವಾಗಿಯೂ ನಾವೇ!
ಮೋಟು: ಏನು! ಅವನಿಗೆ ಹೇಗೆ ಗೊತ್ತಾಯಿತು? ನಾವು ಮೌನವಾಗಿದ್ದೆವು ಮತ್ತು ನಮ್ಮನ್ನು ಯಾರೂ ನೋಡಲಿಲ್ಲವೆಂದು ನಾನು ಅಂದುಕೊಂಡಿದ್ದೆನು. ದೊಡ್ಡ ಬೆಟ್ಟದ ಮೇಲಿರುವ ಅರಮನೆಯಿಂದ ಅರಸನು ಪಟ್ಟಣದಲ್ಲಿ ಸಂಭವಿಸುವ ಎಲ್ಲವನ್ನು ನೋಡಲು ಸಾಧ್ಯವೇ? ಬಹುಶಃ ಆತನು ನಮ್ಮನ್ನು ನೋಡಿರಬಹುದು?
ಪತ್ಲು: ನನಗೆ ಗೊತ್ತಿಲ್ಲ ಆದರೆ ಅವರು ಭಾವಚಿತ್ರದೊಂದಿಗೆ ವಾಂಟೆಡ್ ಪೋಸ್ಟರ್ ಅಂಟಿಸಿದ್ದಾರೆ ಮತ್ತು ಅದರಲ್ಲಿರುವ ಚಿತ್ರ ಖಂಡಿತವಾಗಿಯೂ ನಿನ್ನದೇ. ಅವರು ಬಿಡಿಸಿರುವದಕ್ಕಿಂತ ನಾನು ಸ್ವಲ್ಪ ದಪ್ಪವಾಗಿ ಮತ್ತು ಸಭ್ಯನಾಗಿ ಕಾಣಿಸುತ್ತೇನೆ ಅಲ್ಲವೆ. [ತಲೆ ಕೂದಲು ಸರಿಮಾಡಿಕೊಳ್ಳುತ್ತಾ ಮೇಲೆ ಎದ್ದು ನಿಂತು].
ಮೋಟು: ಇದು ಬಹಳ ನಿರಾಶಾದಾಯಕವಾಗಿದೆ! ನನಗೆ ಸುಮ್ಮನೆ ಕೂಗಬೇಕೆನಿಸುತ್ತಿದೆ.
ಪತ್ಲು: ಬೇಡ, ದಯವಿಟ್ಟು ಕೂಗಬೇಡ!
ಮೋಟು: ಜೋರಾಗಿ ನಾಟಕೀಯ ಶಬ್ದ ಮಾಡುವನು!
ಪತ್ಲು: ನೀನು ಕೂಗಲಿಲ್ಲ ಎಂದು ನಾನು ನೆನೆಸುತ್ತೇನೆ.
ಮೋಟು: ಯಾಕೆ?
ಪತ್ಲು: [ಮೋಟು ತಲೆಯ ಮೇಲೆ ಮತ್ತೊಮ್ಮೆ ಹೊಡೆದು]. ಅವರಿಗೆ ನಿನ್ನ ಸ್ವರ ಕೇಳಿಸಿತು, ಈಗ ಅವರು ನಮ್ಮನ್ನು ಹಿಡಿಯಲು ಬರುತ್ತಿದ್ದಾರೆ. ಇಲ್ಲಿಂದ ಓಡಿ ಹೋಗೋಣ!

# ಮುಖ್ಯ ಪಾಠ

## ಮತ್ತಾಯ 9:9-13

ನೀವು ಬೇಕಾಗಿದ್ದೀರಿ.
ನಿಮ್ಮ ಹೆಸರು ಪೋಸ್ಟರ್ ಮೇಲೆ ಇದೆ, ಮತ್ತು ಜನರು ನಿಮ್ಮನ್ನು ಹುಡುಕುತ್ತಾ ಇದ್ದಾರೆ.
ಆದರೆ ಯಾಕೆ? ಯಾಕಂದರೆ ನೀವು ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದೀರಿ.
ನೀವು ಪಾಪದಲ್ಲಿ ಸಿಕ್ಕಿಬಿದ್ದಿದ್ದೀರಿ. "ಏನು?" ಎಂದು ನೀವು ಆಶ್ಚರ್ಯದಿಂದ ಕೇಳಬಹುದು.
ಹೌದು. ದೇವರು ಎಲ್ಲವನ್ನು ನೋಡುವಾತನಾಗಿದ್ದಾನೆ. ನೀವು ನಿಮ್ಮ ತಂದೆತಾಯಿಗಳಿಗೆ ಸುಳ್ಳು ಹೇಳುವಾಗ ಅಥವಾ ತಿಂಡಿ ಕದಿಯುವಾಗ ಅಥವಾ ಶಾಲೆಯಲ್ಲಿ ನಿಮ್ಮ ಶಿಕ್ಷಕರಿಗೆ ಗೊತ್ತಾಗದಂತೆ ಬಚ್ಚಿಡುವಾಗ ಆತನು ಗೊತ್ತಾಗುತ್ತದೆ. ದೇವರು ಎಲ್ಲವನ್ನೂ ನೋಡುವಾತನಾಗಿದ್ದಾನೆ.

ನೀವು ಸತ್ಯವೇದವನ್ನು ನಂಬುವದಾದರೆ ನಿಮ್ಮ ಕೈಯನ್ನು ಮೇಲೆ ಎತ್ತಿರಿ. ಆಹಾ, ಒಳ್ಳೇದು!
ಈಗ ನೀವು ಯೇಸು ಕ್ರಿಸ್ತನನ್ನು ನಂಬುವದಾದರೆ ನಿಮ್ಮ ಕೈಯನ್ನು ಮೇಲೆ ಎತ್ತಿರಿ. ಆಹಾ, ಉತ್ತಮ!
ಎಲ್ಲರೂ ಪಾಪ ಮಾಡಿದ್ದಾರೆ ಎಂದು ಸತ್ಯವೇದ ಹೇಳುವದು ನಿಮಗೆ ಗೊತ್ತಿದೆಯೇ? ಹೌದು. ನಾನು ಮತ್ತು ನೀವು ಪಾಪ ಮಾಡಿದ್ದೇವೆ. ಇದಲ್ಲದೆ, ಯೇಸು ಕ್ರಿಸ್ತನು ಸಹ ನಾವೆಲ್ಲರೂ ಪಾಪ ಮಾಡಿದ್ದೇವೆ ಎಂದು ಹೇಳಿದನು!
ಆದ್ದರಿಂದ ಒಂದುವೇಳೆ ನೀವು ಸತ್ಯವೇದವನ್ನು ನಂಬುದಾದರೆ, ಇಂದಿನ ಪ್ರಮುಖ ವಚನವನ್ನು ಸಹ ನೀವು ನಂಬಬೇಕು;
"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ." ರೋಮಾ 3:23
ದೇವರು ಪರಿಪೂರ್ಣನಾಗಿದ್ದಾನೆ. ಆತನು ಎಂದಿಗೂ ಯಾವುದೇ ತಪ್ಪು ಮಾಡುವದಿಲ್ಲ. ಆದರೆ ಸತ್ಯವೇದವು ಹೇಳುವದೇನೆಂದರೆ ನಾವೆಲ್ಲರು ದೇವರ ಮಹಿಮೆಯನ್ನು ಹೊಂದದೆ ಇದ್ದೇವೆ. ನಾವೆಲ್ಲರೂ ದೇವರ ಚಿತ್ತಕ್ಕೆ ವಿರುದ್ಧವಾದ ಕಾರ್ಯಗಳನ್ನು ಮಾಡಿದ್ದೇವೆ.
ಆದರೆ ಇಲ್ಲಿಗೇ ಕಥೆ ಮುಗಿಯುವದಿಲ್ಲ. ನಾವೆಲ್ಲರೂ ಪಾಪಿಗಳೆಂದು ದೇವರಿಗೆ ಗೊತ್ತು, ಆದರೂ ಆತನು ನಮ್ಮೊಂದಿಗೆ ಮಾತನಾಡಲು, ತನ್ನ ಮಹಿಮೆಗಾಗಿ ನಮ್ಮನ್ನು ಉಪಯೋಗಿಸಿಕೊಳ್ಳಲು, ಮತ್ತು ನಮ್ಮೊಂದಿಗೆ ಸ್ನೇಹದಿಂದಿರಲು ಬಯಸುತ್ತಾನೆ.
ಇಂದು ತಪ್ಪುಗಳನ್ನು ಮಾಡಿದ್ದೇನೆ ಎಂದು ಗೊತ್ತಿದ್ದ ಒಬ್ಬ ಪಾಪಿಯ ಕುರಿತಾದ ಸತ್ಯವೇದದ ಕಥೆಯನ್ನು ನಾವು ನೋಡಿಕೊಳ್ಳೋಣ. ಅವನು ಪಾಪ ಮಾಡಿದ್ದಾನೆ ಎಂಬದು ಯೇಸು ಕ್ರಿಸ್ತನಿಗೆ ಗೊತ್ತಿತ್ತು. ಆದರೂ ಯೇಸು ಕ್ರಿಸ್ತನು ನಿಂತು ಅವನೊಂದಿಗೆ ಮಾತನಾಡಿದನು. ಯೇಸು ಕ್ರಿಸ್ತನು ಅವನನ್ನು ಕರೆದನು.
ನೀವು ತಪ್ಪುಗಳನ್ನು ಮಾಡಿದ್ದರೂ ದೇವರು ನಿಂತು ನಿಮ್ಮೊಂದಿಗೆ ಮಾತನಾಡಬೇಕೆಂದು ನಿಮ್ಮಲ್ಲಿ ಎಷ್ಟು ಜನ ಬಯಸುತ್ತೀರಿ? ಒಳ್ಳೇದು! ನಾನೂ ಬಯಸುತ್ತೇನೆ!

ಸತ್ಯವೇದವು ಹೇಳುವದೇನೆಂದರೆ ಯೇಸು ಕ್ರಿಸ್ತನು ದಾರಿಯಲ್ಲಿ ನಡೆದು ಹೋಗುತ್ತಿದ್ದನು ಮತ್ತು ಮತ್ತಾಯ ಎಂಬ ಹೆಸರಿನ ಸುಂಕದವನನ್ನು ನೋಡಿದನು.
ಆಗಿನ ಕಾಲದಲ್ಲಿ, ಸುಂಕದವರು ಜನರಿಂದ ಹಣ ವಸೂಲಿ ಮಾಡುತ್ತಿದ್ದರು.
ನಿಜವಾಗಿ ಹೇಳುವದಾದರೆ ಅವರು ಜನರಿಂದ ಕದ್ದುಕೊಳ್ಳುತ್ತಾ ಇದ್ದರು. "ಸುಂಕದವನು" ಅಂದರೆ "ಪಾಪಿ" ಎಂಬ ಜನರ ಆಲೋಚನೆ ಬಹಳ ಕೆಟ್ಟದ್ದಾಗಿತ್ತು. ನಿಮ್ಮ ಕೆಲಸದಲ್ಲಿರುವ ಅನೇಕರು ಸುಳ್ಳು ಹೇಳಿರುವ ಅಥವಾ ಮೋಸ ಮಾಡಿರುವ ಅಥವಾ ಕಳ್ಳತನ ಮಾಡಿರುವ ಕಾರಣ ನಿಮ್ಮ ಕೆಲಸವನ್ನೇ "ಪಾಪ" ಎಂದು ಗುರುತಿಸಿದರೆ ಹೇಗಿರುವದೆಂದು ಊಹಿಸಿರಿ? ಜನರು ತಾವಾಗಿಯೇ ನೀವು ಸುಳ್ಳು ಹೇಳುತ್ತಿರುವಿರಿ ಅಥವಾ ಕಳ್ಳತನ ಮಾಡುತ್ತಿರುವಿರಿ ಎಂದು ತಿಳಿದುಕೊಳ್ಳುವ ಉದ್ಯೋಗವನ್ನು ನೀವು ಊಹಿಸಿಕೊಳ್ಳಬಹುದು ಎಂಬದಾಗಿ ನಾನು ಸವಾಲು ಹಾಕುತ್ತೇನೆ ಯಾಕಂದರೆ ನಿಮ್ಮ ದೇಶದಲ್ಲಿಯೂ ಇದೇ ರೀತಿಯ ಉದ್ದೇಶ ಬಹುಶಃ ಇರಬಹುದು. ನಿಮ್ಮ ದೇಶದಲ್ಲಿ ಲಂಚ ತೆಗೆದುಕೊಳ್ಳುವಂಥ ಜನರು ಇದ್ದಾರೆಯೇ?
ಆತನು ನಡೆದುಕೊಂಡು ಹೋಗುತ್ತಿದ್ದನು ಮತ್ತು ಮತ್ತಾಯನು ಸುಂಕ ವಸೂಲಿ ಮಾಡುವ ಸ್ಥಳದಲ್ಲಿ ಕೂತಿರುವದನ್ನು ನೋಡಿದನು. ಯೇಸು ಕ್ರಿಸ್ತನು ಮತ್ತಾಯನಿಗೆ, "ನನ್ನನ್ನು ಹಿಂಬಾಲಿಸು" ಎಂದು ಹೇಳಿದನು.
ಕೂಡಲೇ ಮತ್ತಾಯನು ತನ್ನ ಸ್ಥಳದಿಂದ ಎದ್ದನು ಮತ್ತು ಯೇಸು ಕ್ರಿಸ್ತನನ್ನು ಹಿಂಬಾಲಿಸಿದನು!
ಮತ್ತಾಯನು ತನ್ನ ಸ್ಥಾನವನ್ನು ತ್ಯಜಿಸಿ ಎಲ್ಲವನ್ನು ಬಿಟ್ಟು ಯೇಸು ಕ್ರಿಸ್ತನನ್ನು ಹಿಂಬಾಲಿಸಿದನು!

ಯೇಸು ಕ್ರಿಸ್ತನು ಮತ್ತಾಯನ ಮನೆಯಲ್ಲಿ ಊಟಮಾಡುತ್ತಿದ್ದನು, ಮತ್ತು ಸತ್ಯವೇದವು ಹೇಳುವದೇನೆಂದರೆ ಅಲ್ಲಿ ಇನ್ನೂ ಅನೇಕ ಸುಂಕದವರು ಹಾಗೂ ಪಾಪಿಗಳು ಆತನೊಂದಿಗೆ ಊಟ ಮಾಡುತ್ತಿದ್ದರು. ಆಗ ಧಾರ್ಮಿಕ ನಾಯಕರು ಶಿಷ್ಯರಿಗೆ, "ನಿಮ್ಮ ಗುರುವು ಸುಂಕದವರೊಂದಿಗೆ ಮತ್ತು ಪಾಪಿಗಳೊಂದಿಗೆ ಯಾಕೆ ಊಟ ಮಾಡುತ್ತಾನೆ ಎಂದು ಕೇಳಿದರು?"
ಅದಕ್ಕೆ ಉತ್ತರವಾಗಿ, "ಆರೋಗ್ಯವಂತರಿಗೆ ವೈದ್ಯನ ಅವಶ್ಯಕತೆಯಿಲ್ಲ ಬದಲಾಗಿ ಅನಾರೋಗ್ಯದಲ್ಲಿರುವವರಿಗೆ ವೈದ್ಯನು ಬೇಕು" ಎಂದು ಯೇಸು ಕ್ರಿಸ್ತನು ಹೇಳಿದನು."
ಅನಾರೋಗ್ಯದಲ್ಲಿದ್ದವರು ಯಾರೆಂದು ನಿಮಗೆ ಗೊತ್ತೋ? ನಿಮಗೆ ಅರ್ಥವಾಗಿರಬಹುದೆಂದು ನಾನು ಬೆಟ್ ಕಟ್ಟುತ್ತೇನೆ!
"ಅನಾರೋಗ್ಯದಲ್ಲಿರುವವರಿಗೆ ವೈದ್ಯನು ಬೇಕು" ಎಂದು ಯೇಸು ಕ್ರಿಸ್ತನು ಹೇಳಿದಾಗ, ಪಾಪಿಗಳಿಗೆ ರಕ್ಷಕನು ಬೇಕು ಎಂಬದು ಆತನ ಮಾತಿನ ಅರ್ಥವಾಗಿತ್ತು. ಒಂದುವೇಳೆ ನೀವು ನಾನು ಪರಿಪೂರ್ಣನಾಗಿದ್ದೇನೆ, ನನಗೆ ಯಾವುದೇ ಸಹಾಯದ ಅವಶ್ಯಕತೆಯಿಲ್ಲ ಎಂದು ನೆನೆಸುವದಾದರೆ, ನೀವು ನಿಮ್ಮ ಸ್ವಂತ ಮಾರ್ಗದನುಸಾರ ನಡೆಯುವವರಾಗಿದ್ದೀರಿ. ನಾವು ಪರಿಪೂರ್ಣರಲ್ಲ ಮತ್ತು ನಮಗೆ ಸಹಾಯ ಅವಶ್ಯಕತೆಯಿದೆ ಎಂದು ಯಾರು ಒಪ್ಪಿಕೊಳ್ಳುತ್ತಾರೋ ಅಂಥವರಿಗೆ ಸಹಾಯ ಮಾಡಲು ಯೇಸು ಕ್ರಿಸ್ತನು ಬಂದಿದ್ದಾನೆ.

ನಾನು ಮತ್ತು ನೀವು ಬೇಕಾಗಿದ್ದಾರೆ ಪೋಸ್ಟರ್ ಮೇಲೆ ಇದ್ದೇವೆ. ನಾವು ಪಾಪದಲ್ಲಿ ಸಿಕ್ಕಿಬಿದ್ದಿದ್ದೇವೆ. ಸತ್ಯವೇದವು ಹೇಳುವದೇನೆಂದರೆ ನಾವೆಲ್ಲರೂ ಪಾಪ ಮಾಡಿದ್ದೇವೆ. ಆದರೆ ಕಥೆ ಇಲ್ಲಿಗೆ ಮುಗಿಯುವದಿಲ್ಲ! ಯೇಸು ಕ್ರಿಸ್ತನು ನಿಮ್ಮನ್ನು ಹುಡುಕುತ್ತಾ ಇದ್ದಾನೆ! ನೀವು ಪಾಪಿ ಎಂದು ಆತನಿಗೆ ಗೊತ್ತಿದೆ, ಆದರೂ ಆತನು ನಿಮ್ಮೊಂದಿಗೆ ಸಂಬಂಧವನ್ನು ಹೊಂದಲು ಬಯಸುವವನಾಗಿದ್ದಾನೆ. ನಿಜವಾಗಿ ಹೇಳುವದಾದರೆ, ಆತನು ಪಾಪಿಗಳಿಗಾಗಿಯೇ ಈ ಲೋಕಕ್ಕೆ ಬಂದನು!
ನಿಮ್ಮಲ್ಲಿ ಎಷ್ಟು ಜನರು ಯೇಸು ಕ್ರಿಸ್ತನು ನಿಮ್ಮ ಸ್ನೇಹಿತನನ್ನಾಗಿ ಮಾಡಿಕೊಳ್ಳಲು ಬಯಸುತ್ತೀರಿ? ಅದ್ಭುತ! ಒಟ್ಟಾಗಿ ಪ್ರಾರ್ಥನೆ ಮಾಡೋಣ.

"ಯೇಸು ಕ್ರಿಸ್ತನೇ ಪಾಪಿಗಳಿಗಾಗಿ ಈ ಲೋಕಕ್ಕೆ ಬಂದದಕ್ಕಾಗಿ ನಿನಗೆ ಸ್ತೋತ್ರಗಳನ್ನು ಸಲ್ಲಿಸುತ್ತೇನೆ. ನಾನು ಪಾಪಿ ಎಂದು ಈಗಲೇ ನಿನ್ನೆದುರಿನಲ್ಲಿ ಒಪ್ಪಿಕೊಳ್ಳುತ್ತೇನೆ. ನಾನು ತಪ್ಪುಗಳನ್ನು ಮಾಡಿದ್ದೇನೆ. ನನ್ನ ಜೊತೆ ಮಾತನಾಡಲು ಮತ್ತು ನನ್ನ ಸ್ನೇಹಿತನಾಗಲು ಬಯಸಿದ್ದಕ್ಕೆ ನಿನಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ನಿನ್ನನ್ನು ನಂಬುತ್ತೇನೆ. ಆಮೆನ್."

ಇಂದಿನ ನಾಟಕ/ಸ್ಕಿಟ್ ರೀತಿಯೇ, ನಾನು ಮತ್ತು ನೀವುಗಳ ಸಹ ವಾಂಟೆಡ್ ಪೋಸ್ಟರ್ ನಲ್ಲಿದ್ದೇವೆ. ಆದರೆ ಇಲ್ಲಿಗೆ ಕಥೆ ಮುಗಿಯುವದಿಲ್ಲ. ನಾಳೆ ನಾವು ಹೆಚ್ಚಿನ ನಾಟಕವನ್ನು ನೋಡೋಣ ಮತ್ತು ದೇವರ ಬಗ್ಗೆ ಹೆಚ್ಚಾಗಿ ಕಲಿತುಕೊಳ್ಳೋಣ.

# ಕಂಠಪಾಠ ವಚನ


“ ಮಾನವರೆಲ್ಲರೂ ಪಾಪಿಗಳೇ, ಎಲ್ಲರೂ ದೇವದತ್ತ ಮಹಿಮೆಯನ್ನು ಕಳೆದುಕೊಂಡವರೇ.” ರೋಮನರಿಗೆ 3:23

# ಮತದಾನ

ಸತ್ಯವೇದವನ್ನು ವೈಯಕ್ತಿಕವನ್ನಾಗಿ ಮಾಡಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಪಡಿಸಿರಿ. ಒಂದುವೇಳೆ ಅವರು ಮತ್ತಾಯನಾಗಿದ್ದರೆ, ಅವನು ಮಾಡಿದ ಕಾರ್ಯವನ್ನೇ ಅವರೂ ಮಾಡುತ್ತಿದ್ದರೇ? ಆ ದೇಶದಲ್ಲಿ ಅಂದು ಅವನಿಗೆ ಸರಿಯಾಗಿತ್ತು, ಆದರೆ ಇಂದು ನನ್ನ ದೇಶದಲ್ಲಿ ಅದು ತಪ್ಪಾಗಿದೆಯೇ? ಅದು ಆತನಿಗೆ ಯೋಗ್ಯವಾಗಿತ್ತೇ? ನಿಮಗೆ ಯೋಗ್ಯವಾಗಿರುತ್ತದೆಯೇ? ಒಂದುವೇಳೆ ನೀವು ಮತ್ತಾಯನ ಹಾಗೆ ಮಾಡಿದ್ದರೆ ನಿಮಗೆ ಎಷ್ಟು ತೊಂದರೆ ಎದುರಾಗುತ್ತಾ ಇತ್ತು?
ನಿಮಗೆ ಏನು ಅನ್ನಿಸುತ್ತದೆ?

*ಮತ್ತಾಯನು ತನ್ನ ಕೆಲಸವನ್ನು ಮಾಡುತ್ತಾ ಕುರ್ಚಿಯ ಮೇಲೆಯೇ ಕುಳಿತುಕೊಂಡಿರಬೇಕಾಗಿತ್ತು. ಅವನು ಪಾಳಿಯ ಮಧ್ಯದಲ್ಲಿ ಎದ್ದು ಹೋಗುವದು ತಪ್ಪಾಗಿದೆ.

*ಮತ್ತಾಯನು ತನ್ನ ಕೆಲಸವನ್ನು ಬಿಡುವ ಮೂಲಕ ಒಳ್ಳೆಯ ಕೆಲಸವನ್ನು ಮಾಡಿದನು. ಅವನು ಉತ್ತಮವಾದ ಅವಕಾಶವನ್ನು ಗ್ರಹಿಸಿಕೊಂಡನು ಮತ್ತು ಯಾವುದೇ ಯೋಚನೆ ಇಲ್ಲದೆ ಅದನ್ನು ಉಪಯೋಗಿಸಿಕೊಂಡನು.



1 ಮತದಾನದ ಸಮಯ

ಮತ್ತಾಯನು ಕರೆಯಲ್ಪಟ್ಟನು

ನಿಮಗೆ ಏನು ಅನ್ನಿಸುತ್ತದೆ?

| ಮತ್ತಾಯನು ತನ್ನ ಕೆಲಸವನ್ನು ಮಾಡುತ್ತಾ ಕುರ್ಚಿಯ ಮೇಲೆಯೇ ಕುಳಿತುಕೊಂಡಿರಬೇಕಾಗಿತ್ತು. ಅವನು ಪಾಳಿಯ ಮಧ್ಯದಲ್ಲಿ ಎದ್ದು ಹೋಗುವದು ತಪ್ಪಾಗಿದೆ. | ಮತ್ತಾಯನು ತನ್ನ ಕೆಲಸವನ್ನು ಬಿಡುವ ಮೂಲಕ ಒಳ್ಳೆಯ ಕೆಲಸವನ್ನು ಮಾಡಿದನು. ಅವನು ಉತ್ತಮವಾದ ಅವಕಾಶವನ್ನು ಗ್ರಹಿಸಿಕೊಂಡನು ಮತ್ತು ಯಾವುದೇ ಯೋಚನೆ ಇಲ್ಲದೆ ಅದನ್ನು ಉಪಯೋಗಿಸಿಕೊಂಡನು. |
|---|---|
| ಸುಲಭ | |
| ಸುಲಭ | |
| ಕಷ್ಟ | |
| ಕಷ್ಟ | |

Equip & Grow




# ದಿನ 1 ವಿದ್ಯಾರ್ಥಿ ಪುಸ್ತಕಗಳು

## ದೊಡ್ಡ ಮಕ್ಕಳಿಗೆ ಪ್ರಶ್ನೆಗಳು ಮತ್ತು ಉತ್ತರಗಳು

**1. ನಿಮಗೆ ಪರಿಚಯವಿರುವ ಒಳ್ಳೆಯ ಮತ್ತು ಕೆಟ್ಟ ಜನರ ಬಗ್ಗೆ ಯೋಚಿಸಿರಿ. ಒಂದುವೇಳೆ ನಾಳೆ ಇಬ್ಬರೂ ಸಂಚಾರದ ಸಂಘರ್ಷಣೆಯಿಂದ ಮೃತಪಟ್ಟರೆ, ಯೇಸು ಕ್ರಿಸ್ತನೊಂದಿಗೆ ಸಮಯವನ್ನು ಕಳೆಯಲು ಪರಲೋಕದಲ್ಲಿ ಯಾರು ಎದ್ದೇಳುವರು? ನಿಮಗೆ ಯಾಕೆ ಹಾಗೆ ಅನ್ನಿಸುತ್ತದೆ?**
ಉತ್ತರ: ಯಾರೇ ಆದರೂ, ಅವರು ಎಷ್ಟೇ ಒಳ್ಳೆಯವರಾಗಿದ್ದರೂ ತಮ್ಮ ಸ್ವಂತ ಒಳ್ಳೇತನದ ಮೂಲಕ ಪರಲೋಕಕ್ಕೆ ಹೋಗಲು ಆಗುವದಿಲ್ಲ. (ರೋಮಾ 3:23). ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮತ್ತು ಆತನಿಂದ ಕ್ಷಮಾಪಣೆಯನ್ನು ಬೇಡಿಕೊಳ್ಳುವ ಯಾರೇ ಆದರೂ ಅವರನ್ನು ದೇವರು ಕ್ಷಮಿಸುತ್ತಾನೆ. (ಯೋಹಾನ 1:12) ಪ್ರಸಿದ್ಧರು ಮತ್ತು ಮಾಫಿಯಾ ನಾಯಕರ ಬಗ್ಗೆ ಚರ್ಚೆ ಮಾಡಿರಿ. ಒಂದುವೇಳೆ ನಿಮಗೆ ಸಮಯ ಇರುವದಾದರೆ, ಕ್ರೈಸ್ತರಲ್ಲದಿದ್ದರೂ ಬಹಳಷ್ಟು ಒಳ್ಳೆಯ ಕಾರ್ಯಗಳನ್ನು ಮಾಡಿರುವ ಪ್ರಸಿದ್ಧರ ಬಗ್ಗೆ ಆನ್ಲೈನ್ ನಲ್ಲಿ ಹುಡುಕಿರಿ, ಇದಲ್ಲದೆ ಕೆಲವರು ಸೆರೆಮನೆಯಲ್ಲಿ ಶಿಕ್ಷೆಯನ್ನು ಅನುಭವಿಸುವ ಸಮಯದಲ್ಲಿಯೇ ಕ್ರೈಸ್ತರಾಗಿಯೂ ಆಗಿರಬಹುದು. ಇವರಲ್ಲಿ ಯಾರು ಪರಲೋಕಕ್ಕೆ ಹೋಗುತ್ತಾರೆ?

**2.ಇಂದಿನ ಸತ್ಯವೇದದ ಕಥೆಯಲ್ಲಿ ಲಂಚವನ್ನು ತೆಗೆದುಕೊಂಡವರು ಯಾರು? ಅದು ಕಾನೂನುಬಾಹಿರವೇ? ಅದು ಇಂದು ನಿಮ್ಮ ದೇಶದಲ್ಲಿ ಕಾನೂನಾತ್ಮಕವಾಗಿದೆಯೇ?**
ಉತ್ತರ: ಮತ್ತಾಯನು ಸುಂಕದವನಾಗಿದ್ದನು. ಅವರು ಲಂಚ ತೆಗೆದುಕೊಳ್ಳುವವರಾಗಿದ್ದರು ಅಥವಾ ಅವಶ್ಯಕ್ಕಿಂತ ಹೆಚ್ಚು ವಸೂಲಿ ಮಾಡುತ್ತಿದ್ದರು ಆದ್ದರಿಂದ ಅವರ ಬಳಿಯಲ್ಲಿ ಹೆಚ್ಚಿನ ಹಣ ಇರುತ್ತಿತ್ತು. ಹೌದು, ಅದು ಕಾನೂನಾತ್ಮಕವಾಗಿತ್ತು, ಮತ್ತು ರೋಮ್ ಸರ್ಕಾರವು ಸುಂಕ ವಸೂಲಿ ಮಾಡುವವರಿಗೆ ಅದನ್ನು ಸಂಬಳವೆಂದು ಪರಿಗಣಿಸುತ್ತಾ ಇತ್ತು. ಹಣಕ್ಕಾಗಿ ಮಾಡುವ ಭ್ರಷ್ಟಾಚಾರಗಳು, ಕಳ್ಳತನ, ಮತ್ತು ಹೆಚ್ಚು ಬೆಲೆಯ ವಸ್ತುಗಳನ್ನು ಕಮಿಷನ್ ಪಡೆದು ಮಾರುವದರ ನಡುವೆಯಿರುವ ವ್ಯತ್ಯಾಸವನ್ನು ಚರ್ಚೆ ಮಾಡಿರಿ.

**3.ಮತ್ತಾಯನ ಹಾಗೆ, ನಿಮ್ಮ ಸಮುದಾಯದಲ್ಲಿ ಜನರು ಇಷ್ಟಪಡದಂಥ ಕೆಲಸ ಯಾವುದು? ಒಂದುವೇಳೆ ಯೇಸು ಕ್ರಿಸ್ತನೇನಾದರೂ ಇಂದು ಇಲ್ಲಿ ಇದ್ದಿದ್ದರೆ ಆ ರೀತಿಯ ಕೆಲಸ ಮಾಡುವವನನ್ನು ತನ್ನ ಶಿಷ್ಯನಾಗಿ ಮತ್ತು ಪ್ರತಿನಿಧಿಯಾಗಿ ಸೇರಿಸಿಕೊಳ್ಳುತ್ತಿದ್ದನೇ?**
ಉತ್ತರ: ಪ್ರತಿಯೊಂದು ದೇಶದಲ್ಲಿ ವಿವಿಧ ಉತ್ತರಗಳು ಇರುತ್ತದೆ, ಆದರೆ ದಾಸತ್ವ, ವ್ಯಭಿಚಾರ, ಶುಚಾಲಯ ಅಥವಾ ಚರಂಡಿಗಳನ್ನು ಶುಚಿಮಾಡುವದು, ಅಪಾಯಕಾರಿಯಾಗಿರುವ ಕಾರ್ಖಾನೆ ಕೆಲಸಗಳು ಇತ್ಯಾದಿ. ಉತ್ತರಗಳು ಒಳಗೊಂಡಿರುತ್ತವೆ. ಯೇಸು ಕ್ರಿಸ್ತನು ಇಂದು ಅಂಥವರನ್ನು ಬಯಸುತ್ತಾನೆಯೇ? "ಹೌದು!!" ಆತನು ಸ್ವೇಚ್ಛೆಯಿಂದಲೇ ಮತ್ತಾಯನನ್ನು ಆರಿಸಿಕೊಂಡನು. ಜನರ ಕೆಲಸಗಳು ಏನೇಆಗಿದ್ದರೂ, ಆತನು ಇಂದಿಗೂ ಜನರನ್ನು ಕರೆಯುವಾತನಾಗಿದ್ದಾನೆ.




ಗೆರೆಗಳನ್ನು ದಾಟದೆ, ಪದಗಳನ್ನು ಸರಿಯಾಗಿ ಹೊಂದಿಸಿರಿ. ಸುಲಭವಾಗಿ ಅಳಸಲು ಪೆನ್ಸಿಲ್ ಉಪಯೋಗಿಸಿರಿ

# ವಿದ್ಯಾರ್ಥಿ ಪುಸ್ತಕಗಳು

## ಅವ್ಯವಸ್ಥೆ

ಚಿತ್ರವನ್ನು ತೋರಿಸುವ ಬಾಣದೊಂದಿಗೆ ಪ್ರಾರಂಭಿಸಿರಿ ಮತ್ತು ನಿರ್ಗಮಿಸುವ ಬಾಣದ ಸಾಲುಗಳನ್ನು ದಾಟದಂಥ ತೆರೆದ ಮಾರ್ಗವನ್ನು ತಿಳಿದುಕೊಳ್ಳಿರಿ.

### ಮುಂದುವರೆದ - ಕಷ್ಟ



### ಮಧ್ಯಮ



### ಸುಲಭ




### ಪದ ಹುಡುಕಾಟ

| | | | | | | | | | | | | | |
|---|---|---|---|---|---|---|---|---|---|---|---|---|---|
| ಮ | ಇ | ಪ್ರ | ಸ | ಹಿ | ಮ | ತ | ಗ | ಕ | ಮ | ಸುಂ | ರು | ವ | ದೇ |
| ಸ | ಕ | ವೇ | ಆ | ಯ್ಕೆ | ಪ್ರ | ಸ | ಅ | ಇ | ಪ್ರ | ಪಾ | ಗ | ಅ | ರ |
| ಪ್ರ | ರ | ಸುಂ | ಇ | ಮ | ನೆ | ಹಿ | ಸ | ಗಾ | ರ | ತ | ಪ | ಪ್ರ | ಮ |
| ಗ | ಅ | ಸ | ತ | ಮ | ಸ | ಪ್ರ | ತ | ಕ | ಇ | ಮ | ಳು | ಸುಂ | ಕ |
| ಮ | ಪ್ರ | ತ್ಯ | ನೆ | ಕ | ಗ | ಇ | ಅ | ಸ | ಮ | ಗ | ವೇ | ರ | ಪ್ರ |
| ಹಿ | ಸ | ವೇ | ಇ | ಸ | ತ | ರ | ಹಿ | ರ | ಕ | ಇ | ಅ | ಪ್ರ | ಮು |
| ಮೆ | ಕ | ದ | ಮ | ಕ | ಸ | ಗ | ಮ | ಸುಂ | ಮ | ತ | ಸ | ಮ | ಖ |
| ತ | ಅ | ನೆ | ಪ್ರ | ವೇ | ಇ | ಪ್ರ | ಹಿ | ಅ | ವೇ | ನೆ | ಇ | ಗ | ಇ |
| ಕ | ಪ್ರ | ಮ | ಯೇ | ಯ | ಹಿ | ಗ | ಮ | ಇ | ಸ | ರ | ಪ್ರ | ಕ | ನ್ಸ |
| ಸ | ಸು | ಸ | ತ್ತಾ | ಸು | ಇ | ಕ | ಳ್ಳ | ತ | ನ | ಮ | ಸ | ಸಂ | ಪೆ |
| ಅ | ಳ್ಳು | ಮ | ಗ | ತ | ವೇ | ಹಿ | ನೆ | ಸ | ಕ | ಹಿ | ಸಂ | ವೇ | ಕ್ಟ |
| ಮ | ಕ | ಪ್ರ | ಸುಂ | ನೆ | ಕ | ಳ್ಳ | ಮ | ಇ | ತ | ಅ | ಗ್ರ | ಗ | ರ್ |
| ವೇ | ವೃ | ಅ | ಕ | ರೆ | ಯ | ಲ್ಪ | ಟ್ಟ | ವ | ರು | ಸ | ಹ | ಪ್ರ | ಸುಂ |
| ತ್ತಿ | ರ | ಮ | ಸ | ಪ್ರ | ಸ | ಅ | ಕ | ಪ್ರ | ತ | ರ | ಕ | ಸ | ಮ |

ಪಾಪ
ಮಹಿಮೆ
ಕರೆಯಲ್ಪಟ್ಟವರು
ಪ್ರಮುಖ ಇನ್ಸಪೆಕ್ಟರ್
ಅರಮನೆ
ಅರಸ
ಆಯ್ಕೆ
ಸುಳ್ಳು
ಕಳ್ಳತನ
ಯೇಸು
ಸತ್ಯವೇದ
ಸುಂಕಗಳು
ಸಂಗ್ರಹ
ಮೋಸಗಾರ
ವೃತ್ತಿ
ದೇವರು
ಮತ್ತಾಯ
ಕಳ್ಳ

ರಾಣಿಯ ಚಿತ್ರ ಬಿಡಿಸುವದನ್ನಲು ಮುಗಿಸಿರಿ.



ಕೆಳಗೆ ಕೊಡಲಾಗಿರುವ ಪಾಪ ಮಾಡಿರುವ ಜನರಿಗೆ ವೃತ್ತ ಹಾಕಿರಿ.



ಉತ್ತರಗಳು: ಯೇಸುವನ್ನು ಬಿಟ್ಟು ಉಳಿದ ಎಲ್ಲರಿಗೆ ವೃತ್ತವನ್ನು ಹಾಕಿರಿ. ಪಾಪವಿಲ್ಲದೆ ಇರುವಂಥ ಸೂಪರ್ ಹೀರೋ ಇರಬಹುದೇನೋ ಎಂದು ಊಹಿಸಿಕೊಂಡು ಅವನ ವಿಷಯವಾಗಿ ಚರ್ಚೆ ಮಾಡುವಂತೆ ಪ್ರೋತ್ಸಾಹಪಡಿಸಿರಿ, ಅವನು ಕೇವಲ ಊಹೆ ಆಗಿರುವದರಿಂದ ನಿಜವಾಗಿ ವ್ಯಕ್ತಿಯಾಗಿರುವದಿಲ್ಲ. ಯೇಸು ಕ್ರಿಸ್ತನು ಊಹೆಯಲ್ಲ ನಿಜವಾದ ವ್ಯಕ್ತಿಯಾಗಿದ್ದಾನೆ, ಮತ್ತು ಆತನು ಪಾಪವಿಲ್ಲದವನಾಗಿರುವದೂ ಸತ್ಯವಾಗಿದೆ ಎಂಬದರ ಬಗ್ಗೆ ಚರ್ಚೆ ಮಾಡಿರಿ. ಒಂದುವೇಳೆ ಸೂಪರ್ ಹೀರೋ ನಿಜವಾಗಿದ್ದರೆ, ನಾವು ಎಲ್ಲಾ ಸಮಯಗಳಲ್ಲಿಯೂ ಒಳ್ಳೆಯವರಾಗಿರಲು ಪ್ರಯತ್ನಿಸಿದರೂ ಪಾಪ ಮಾಡುವಂತೆ ಅವನೂ ಪಾಪ ಮಾಡುತ್ತಾನೆ.

ಬಲಗಡೆಯಲ್ಲಿರುವ ಸಮಸ್ಯೆಯನ್ನು ಬಗೆಹರಿಸಲು **5** ಸಾಧ್ಯತೆಯ ಮಾರ್ಗಗಳಿವೆ. ಬಲಗಡೆಯಲ್ಲಿರುವ ಕಾರ್ಯಕ್ಕೆ ಪರಿಹಾರವಾಗಿ ಅನ್ವಯಿಸಿಕೊಳ್ಳುವಂಥ ಪಾಪ ಯಾವುದಾಗಿರಬಹುದು ಎಂಬದನ್ನು ಎಡಗಡೆಯಲ್ಲಿ ಬರೆಯಿರಿ.

| | |
|---|---|
| **1. ನನ್ನ ತಾಯಿಯೊಂದಿಗೆ ಅಗೌರವದಿಂದ ಮಾತನಾಡಿದೆನು** | **1. ನಾನು ಕ್ಷಮಾಪಣೆಯನ್ನು ಕೇಳುತ್ತೇನೆ** |
| **2. ನನ್ನ ತಂಗಿಯ ಕೋಣೆಯಿಂದ ನಾನು ಕೆಲವು ವಸ್ತುಗಳನ್ನು ತೆಗೆದುಕೊಂಡೆನು** | **2. ಅರಿಕೆ ಮಾಡುತ್ತೇನೆ, ಹಿಂದಿರುಗಿಸುತ್ತೇನೆ, ಕ್ಷಮಾಪಣೆ ಕೇಳುತ್ತೇನೆ** |
| **3. ಪೀಜಾದ ಕಡೇ ಭಾಗವನ್ನು ನಾನು ತಿಂದೆನು** | **3. ಮುಂದಿನ ಸಲ ನಾನು ತೆಗೆದುಕೊಳ್ಳುವದಕ್ಕಿಂತ ಮೊದಲು ಯಾರಿಗಾದರು ಹೆಚ್ಚು ಪೀಜಾ ಬೇಕೇ ಎಂದು ಕೇಳುತ್ತೇನೆ** |
| **4. ಪರೀಕ್ಷೆಯ ಸಮಯದಲ್ಲಿ ಪಕ್ಕದಲ್ಲಿರುವವನನ್ನು ನೋಡಿ ಉತ್ತರಗಳನ್ನು ಬರೆದೆನು** | **4. ಶೋಧನೆಗೆ ಒಳಗಾಗದಿರಲು ಮುಂದಿನ ಸಲ ಕಷ್ಟಪಟ್ಟು ಓದುತ್ತೇನೆ ಎಂಬದಾಗಿ ದೇವರಿಗೆ ಮತ್ತು ಶಿಕ್ಷಕರಿಗೆ ಅರಿಕೆ ಮಾಡಿರಿ** |
| **5. ನನ್ನ ಸ್ನೇಹಿತ ಕ್ಯಾಂಡಿ ತಂದಿದ್ದನು, ನಾನು ಅದನ್ನು ತೆಗೆದುಕೊಂಡೆನು** | **5. ಕ್ಷಮೆ ಕೇಳಿ ಹಿಂದಿರುಗಿಸುತ್ತೇನೆ ಅಥವಾ ಹೆಚ್ಚಾಗಿ ಖರೀದಿಸಿ ನನ್ನ ಸ್ನೇಹಿತನಿಗೆ ಕೊಡುತ್ತೇನೆ.** |

ಚರ್ಚೆಯನ್ನು ಪ್ರಾರಂಭಿಸಲು ವಿವಿಧ ಶಿಕ್ಷೆಗಳಿಗೆ ಅವಕಾಶ ಕೊಡಿರಿ ಮತ್ತು ಪಾಠವನ್ನು ಹೆಚ್ಚು ಆಸಕ್ತಿಯನ್ನಾಗಿಸಿರಿ ಹಾಗೂ ಸದ್ಯದ ದಿನದ ಜೀವಿತದಲ್ಲಿ ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ ಮಾಡಿರಿ. ಎಲ್ಲಾ ಉತ್ತರಗಳನ್ನು ಅಂಗೀಕರಿಸಿಕೊಳ್ಳುವ ಮೂಲಕ ಬಹುಮಾನ ಮತ್ತು ಅಪರಾಧದ ವಿಷಯದಲ್ಲಿ ಸಂತೋಷಿಸಲು ವಿದ್ಯಾರ್ಥಿಗಳಿಗೆ ಅನುಮತಿಸಿರಿ. ಸಾಧ್ಯವಿರುವ ಕೆಲವು ಉತ್ತರಗಳು: ನನ್ನ ಬಳಿಯಿದ್ದ ಚಿಪ್ಸ್ ನಲ್ಲಿ ಕೆಲವನ್ನು ನಾಯಿಗೆ ಕೊಟ್ಟೆನು, ಬೆಳಗ್ಗೆ ಬೇಗ ನನ್ನನ್ನು ಎಬ್ಬಿಸಿರಿ, ನನಗೆ ತಲೆ ತಿರುಗಿತು, ಇತ್ಯಾದಿ. ಬಹುಮಾನಗಳ ಸಾಧ್ಯತೆ: 1,000,000 ಡಾಲರ್, 2 ಚಿಪ್ಸ್ ಪ್ಯಾಕೇಜ್, ದೊಡ್ಡ ಅಪ್ಪುಗೆ, ಕೆಲಸಗಳನ್ನು ಮಾಡದಂತೆ ಹೊರಗೆ ಹೋಗಲು ಉಚಿತ ಪಾಸ್

# ಜೇಡಿಮಣ್ಣಿನೊಂದಿಗೆ ಸತ್ಯವೇದದ ವಿಮರ್ಶೆ

ಮನೆಯಲ್ಲಿಯೇ ತಯಾರಿಸಿದ ಜೇಡಿಮಣ್ಣಿನಿಂದ ಸತ್ಯವೇದದ ವಿಮರ್ಶೆ

ಸತ್ಯವೇದವು ಹೇಳುವದೇನೆಂದರೆ ಯೇಸು ಕ್ರಿಸ್ತನು ದಾರಿಯಲ್ಲಿ ನಡೆದು ಹೋಗುತ್ತಿದ್ದನು ಮತ್ತು ಮತ್ತಾಯ ಎಂಬ ಹೆಸರಿನ ಸುಂಕದವನನ್ನು ನೋಡಿದನು.
ನಿಮ್ಮ ಜೇಡಿ ಮಣ್ಣನ್ನು ಮೂರು ಉಂಡೆಗಳಾಗಿ ವಿಭಾಗಿಸಿಕೊಳ್ಳಿರಿ. ಎರಡು ಜೇಡಿ ಮಣ್ಣನ್ನು ಉಂಡೆಗಳಿಂದ ಮತ್ತಾಯನಿಗಾಗಿ ಮೇಜು ಮತ್ತು ಕುರ್ಚಿಯನ್ನು ಮಾಡೋಣ.
(ಸುಂಕದವರ ಬಗ್ಗೆ ಹೇಳುತ್ತಾ ಮಕ್ಕಳಿಗೆ ಮೇಜು ಮತ್ತು ಕುರ್ಚಿಯನ್ನು ಮಾಡಲು ಸಮಯ ಕೊಡಿರಿ.)
ಆಗಿನ ಕಾಲದಲ್ಲಿ, ಸುಂಕದವರು ಜನರಿಂದ ಹಣ ವಸೂಲಿ ಮಾಡುತ್ತಿದ್ದರು. ಅವರು ಸರ್ಕಾರದ ಪರವಾಗಿ ಜನರಿಂದ ಹಣ ವಸೂಲಿ ಮಾಡುತ್ತಿದ್ದ ಕಾರಣ, ಸ್ವಲ್ಪ ಹೆಚ್ಚಾಗಿ ವಸೂಲಿ ಮಾಡುತ್ತಿದ್ದರು. ನಿಜವಾಗಿ ಹೇಳುವದಾದರೆ ಅವರು ಜನರಿಂದ ಕದ್ದುಕೊಳ್ಳುತ್ತಾ ಇದ್ದರು. "ಸುಂಕದವನು" ಅಂದರೆ "ಪಾಪಿ" ಎಂಬ ಜನರ ಆಲೋಚನೆ ಬಹಳ ಕೆಟ್ಟದ್ದಾಗಿತ್ತು. ನಿಮ್ಮ ಕೆಲಸದಲ್ಲಿರುವ ಅನೇಕರು ಸುಳ್ಳು ಹೇಳಿರುವ ಅಥವಾ ಮೋಸ ಮಾಡಿರುವ ಅಥವಾ ಕಳ್ಳತನ ಮಾಡಿರುವ ಕಾರಣ ನಿಮ್ಮ ಕೆಲಸವನ್ನೇ "ಪಾಪ" ಎಂದು ಗುರುತಿಸಿದರೆ ಹೇಗಿರುವದೆಂದು ಊಹಿಸಿರಿ? ಸರಿ, ಈಗ ಜೇಡಿ ಮಣ್ಣಿನಿಂದ ಮತ್ತಾಯನನ್ನು ಮಾಡೋಣ ಮತ್ತು ಅವನನ್ನು ಕುರ್ಚಿಯ ಮೇಲೆ ಕೂರಿಸೋಣ. (ಮತ್ತಾಯನನ್ನು ಮಾಡಲು ಅವರಿಗೆ ಸ್ವಲ್ಪ ಹೆಚ್ಚು ಸಮಯವನ್ನು ಕೊಡಿರಿ.)

ಸರಿ. ಈಗ ನೀವು ಅವುಗಳನ್ನೆಲ್ಲಾ ಪುಡಿ ಮಾಡಬಹುದು ಮತ್ತು ನಾಣ್ಯದ ಡಬ್ಬಿ ಹಾಗೂ ಕೆಲವು ನಾಣ್ಯಗಳನ್ನು ಮಾಡಬಹುದು. ಜನರು ತಾವಾಗಿಯೇ ನೀವು ಸುಳ್ಳು ಹೇಳುತ್ತಿರುವಿರಿ ಅಥವಾ ಕಳ್ಳತನ ಮಾಡುತ್ತಿರುವಿರಿ ಎಂದು ತಿಳಿದುಕೊಳ್ಳುವ ಉದ್ಯೋಗವನ್ನು ನೀವು ಊಹಿಸಿಕೊಳ್ಳಬಹುದು ಎಂಬದಾಗಿ ನಾನು ಸವಾಲು ಹಾಕುತ್ತೇನೆ ಯಾಕಂದರೆ ನಿಮ್ಮ ದೇಶದಲ್ಲಿಯೂ ಇದೇ ರೀತಿಯ ಉದ್ದೇಶ ಬಹುಶಃ ಇರಬಹುದು. ನಿಮ್ಮ ದೇಶದಲ್ಲಿ ಲಂಚ ತೆಗೆದುಕೊಳ್ಳುವಂಥ ಜನರು ಇದ್ದಾರೆಯೇ? ತಮ್ಮ ಪರವಾಗಿ ಸುಳ್ಳು ಹೇಳುವಂತೆ ಜನರು ಇತರರಿಗೆ ಹಣ ಕೊಡುತ್ತಾರೆಯೇ? ಇದು ಮತ್ತಾಯನ ಜೀವಿತವಾಗಿತ್ತು. ಅವನು ಎಲ್ಲರಿಗೂ ಗೊತ್ತಿದ್ದ ಪಾಪಿಯಾಗಿದ್ದನು. ಸುಂಕದವರು ಜನರಿಂದ ಹಣ ವಸೂಲಿ ಮಾಡಿ ಅದನ್ನು ಒಂದು ಡಬ್ಬಿಯೊಳಗೆ ಹಾಕಿ ಸರ್ಕಾರಕ್ಕೆ ಕೊಡುತ್ತಿದ್ದರು. ಆದರೆ ಅವರು ಪೂರ್ತಿ ಹಣವನ್ನು ಸರ್ಕಾರಕ್ಕೆ ಕೊಡುತ್ತಿರಲಿಲ್ಲ.


ನೀವು ಹಣವನ್ನು ಪುಡಿ ಮಾಡಿರಿ ಮತ್ತು ನಿಮ್ಮ ಬಳಿಯಿರುವ ಜೇಡಿ ಮಣ್ಣಿನಿಂದ ಯೇಸು ಕ್ರಿಸ್ತನನ್ನು ಮಾಡಿರಿ. ಆತನು ನಡೆದುಕೊಂಡು ಹೋಗುತ್ತಿದ್ದನು ಮತ್ತು ಮತ್ತಾಯನು ಸುಂಕ ವಸೂಲಿ ಮಾಡುವ ಸ್ಥಳದಲ್ಲಿ ಕೂತಿರುವದನ್ನು ನೋಡಿದನು. ಯೇಸು ಕ್ರಿಸ್ತನು ಮತ್ತಾಯನಿಗೆ, "ನನ್ನನ್ನು ಹಿಂಬಾಲಿಸು" ಎಂದು ಹೇಳಿದನು.
ಕೂಡಲೇ ಮತ್ತಾಯನು ತನ್ನ ಸ್ಥಳದಿಂದ ಎದ್ದನು ಮತ್ತು ಯೇಸು ಕ್ರಿಸ್ತನನ್ನು ಹಿಂಬಾಲಿಸಿದನು!
ಈಗ ನಾವು ಮತ್ತೊಮ್ಮೆ ಜೇಡಿ ಮಣ್ಣಿನಿಂದ ಮೇಜು ಮತ್ತು ಕುರ್ಚಿಯನ್ನು ಮಾಡೋಣ, ಆದರೆ ಈ ಸಲ ಅವುಗಳನ್ನು ಖಾಲಿಯಾಗಿಯೇ ಬಿಡೋಣ! ಮತ್ತಾಯನು ತನ್ನ ಸ್ಥಾನವನ್ನು ತ್ಯಜಿಸಿ ಎಲ್ಲವನ್ನು ಬಿಟ್ಟು ಯೇಸು ಕ್ರಿಸ್ತನನ್ನು ಹಿಂಬಾಲಿಸಿದನು!

ಈಗ ತಟ್ಟೆ, ಮುಳ್ಳು ಚಮಚ, ಕತ್ತಿ ಮತ್ತು ಚಮಚವನ್ನು ಮಾಡೋಣ. ಯೇಸು ಕ್ರಿಸ್ತನು ಮತ್ತಾಯನ ಮನೆಯಲ್ಲಿ ಊಟಮಾಡುತ್ತಿದ್ದನು, ಮತ್ತು ಸತ್ಯವೇದವು ಹೇಳುವದೇನೆಂದರೆ ಅಲ್ಲಿ ಇನ್ನೂ ಅನೇಕ ಸುಂಕದವರು ಹಾಗೂ ಪಾಪಿಗಳು ಆತನೊಂದಿಗೆ ಊಟ ಮಾಡುತ್ತಿದ್ದರು. ಆಗ ಧಾರ್ಮಿಕ ನಾಯಕರು ಶಿಷ್ಯರಿಗೆ, "ನಿಮ್ಮ ಗುರುವು ಸುಂಕದವರೊಂದಿಗೆ ಮತ್ತು ಪಾಪಿಗಳೊಂದಿಗೆ ಯಾಕೆ ಊಟ ಮಾಡುತ್ತಾನೆ ಎಂದು ಕೇಳಿದರು?"
ಅದಕ್ಕೆ ಉತ್ತರವಾಗಿ, "ಆರೋಗ್ಯವಂತರಿಗೆ ವೈದ್ಯನ ಅವಶ್ಯಕತೆಯಿಲ್ಲ ಬದಲಾಗಿ ಅನಾರೋಗ್ಯದಲ್ಲಿರುವವರಿಗೆ ವೈದ್ಯನು ಬೇಕು" ಎಂದು ಯೇಸು ಕ್ರಿಸ್ತನು ಹೇಳಿದನು."
ಅನಾರೋಗ್ಯದಲ್ಲಿದ್ದವರು ಯಾರೆಂದು ನಿಮಗೆ ಗೊತ್ತೋ? ನಿಮಗೆ ಅರ್ಥವಾಗಿರಬಹುದೆಂದು ನಾನು ಬೆಟ್ ಕಟ್ಟುತ್ತೇನೆ!
"ಅನಾರೋಗ್ಯದಲ್ಲಿರುವವರಿಗೆ ವೈದ್ಯನು ಬೇಕು" ಎಂದು ಯೇಸು ಕ್ರಿಸ್ತನು ಹೇಳಿದಾಗ, ಪಾಪಿಗಳಿಗೆ ರಕ್ಷಕನು ಬೇಕು ಎಂಬದು ಆತನ ಮಾತಿನ ಅರ್ಥವಾಗಿತ್ತು. ಒಂದುವೇಳೆ ನೀವು ನಾನು ಪರಿಪೂರ್ಣನಾಗಿದ್ದೇನೆ, ನನಗೆ ಯಾವುದೇ ಸಹಾಯದ ಅವಶ್ಯಕತೆಯಿಲ್ಲ ಎಂದು ನೆನೆಸುವದಾದರೆ, ನೀವು ನಿಮ್ಮ ಸ್ವಂತ ಮಾರ್ಗದನುಸಾರ ನಡೆಯುವವರಾಗಿದ್ದೀರಿ. ನಾವು ಪರಿಪೂರ್ಣರಲ್ಲ ಮತ್ತು ನಮಗೆ ಸಹಾಯ ಅವಶ್ಯಕತೆಯಿದೆ ಎಂದು ಯಾರು ಒಪ್ಪಿಕೊಳ್ಳುತ್ತಾರೋ ಅಂಥವರಿಗೆ ಸಹಾಯ ಮಾಡಲು ಯೇಸು ಕ್ರಿಸ್ತನು ಬಂದಿದ್ದಾನೆ.
(ವಿದ್ಯಾರ್ಥಿಗಳಿಂದ ಜೇಡಿ ಮಣ್ಣಿನ್ನು ಹಿಂದಕ್ಕೆ ತೆಗೆದುಕೊಳ್ಳಿರಿ.)



# ಆಟ ಟಿಕ್-ಟ್ಯಾಕ್-ಟೋ

ತಂಡದ ಪ್ರತಿಯೊಬ್ಬ ಸದಸ್ಯನುತನ್ನ ಕಂಠಪಾಠ ವಚನವನ್ನು ಸರಿಯಾಗಿ ಹೇಳಿದ ನಂತರ, ಟಿಕ್-ಟ್ಯಾಕ್-ಟೋ ಹಲಗೆಯ ಮೇಲೆ ಸ್ಥಳವನ್ನು ಆರಿಸಿಕೊಳ್ಳುವಂತೆ ಮತ್ತು ತಮ್ಮ ತಂಡದ ಸಂಕೇತವನ್ನು ಅದರ ಮೇಲೆ ಬರೆಯುವಂತೆ ಅಥವಾ ಅಲ್ಲಿ ಕೂರುವಂತೆ ಅಥವಾ ನಿಲ್ಲುವಂತೆ ಹೇಳಿರಿ. ಯಾವ ತಂಡ ಮೊದಲು ಟಿಕ್-ಟ್ಯಾಕ್-ಟೋ ಬಳಿಗೆ ಬರುತ್ತದೆಯೋ ಅದು ಗೆಲ್ಲುತ್ತದೆ.
ಆಟದ ಫಲಕವಿಲ್ಲದೆ ಆಡಬೇಕೆಂದರೆ, ನಿಮ್ಮ ತರಗತಿಯ ಮಧ್ಯದಲ್ಲಿ ಮೂರು ಕುರ್ಚಿಗಳನ್ನು ಮೂರು ಸಾಲುಗಳಾಗಿ ಇಟ್ಟು ಅವುಗಳನ್ನೇ ನಿಮ್ಮ ಟಿಕ್-ಟ್ಯಾಕ್-ಟೋ ಫಲಕವಾಗಿ ಉಪಯೋಗಿಸಿರಿ. ಒಂದುವೇಳೆ ನಿಮ್ಮ ತರಗತಿಯಲ್ಲಿ ನೀವು ಕುರ್ಚಿಗಳನ್ನು ಉಪಯೋಗಿಸುವದಿಲ್ಲವಾದರೆ, ನೀವು ಪೇಪರ್ ತಟ್ಟೆಗಳು ಅಥವಾ ಹಾಳೆಯನ್ನು ನೆಲದ ಮೇಲೆ ಇಟ್ಟು ಅವುಗಳನ್ನೇ ಟಿಕ್-ಟ್ಯಾಕ್-ಟೋ ಬೋರ್ಡ್ ಆಗಿ ಉಪಯೋಗಿಸಬಹುದು.



# ತಿಂಡಿ ಸೌತೇಕಾಯಿ ಖಾದ್ಯ

**ಸೂಚನೆಗಳು:**

- 1 ಅಥವಾ 2 ದೊಡ್ಡ ಗಾತ್ರದ ಸೌತೇಕಾಯಿ (ಮಕ್ಕಳ ಸಂಖ್ಯೆಯ ಮೇಲೆ ಆಧಾರವಾಗಿರಲಿ)
- ¼ ಕಪ್ ತುರಿದಿರುವ ಕ್ಯಾರೆಟ್
- 2 ಟೇಬಲ್ ಸ್ಪೂನ್ ತುರಿದ ತೆಂಗಿನಕಾಯಿ
- ¼ ಹುರಿದ ಕಡಲೆಬೀಜ
- ¼ ಕಡಲೆಪುರಿ
- 1 ಟೀ ಸ್ಪೂನ್ ಚಾಟ್ ಮಸಾಲಾ
- ¼ ಕಪ್ ಸೇವ್
- 2 ಟೇಬಲ್ ಸ್ಪೂನ್ ಕೊತ್ತಮರಿ ಸೊಪ್ಪು
- 1 ನಿಂಬೆ ರಸ
- ಖಾದ್ಯವನ್ನು ಸಿದ್ದಮಾಡಿ ಹಂಚಲು ನಿಮಗೆ ಪೇಪರ್ ಪ್ಲೇಟ್ ಅವಶ್ಯವಾಗಬಹುದು



**ಸೂಚನೆಗಳು:**

1. ಸೌತೇಕಾಯಿ ಸಿಪ್ಪೆಯನ್ನು ತೆಗೆಯಿರಿ ಮತ್ತು ಸಾಧಾರಣ ಅಳತೆಯ ತುಂಡುಗಳನ್ನು ಮಾಡಿರಿ.
2. ಒಂದು ಬಟ್ಟಲಿನೊಳಗೆ ತುರಿದಿರುವ ಕ್ಯಾರೆಟ್, ತುರಿದಿರುವ ತೆಂಗಿನಕಾಯಿ, ಕಡಲೆಬೀಜ, ಕಡಲೆಪುರಿ, ಚಾಟ್ ಮಸಾಲಾ, ಸೇವ್ ಮತ್ತು ನಿಂಬೆಹಣ್ಣಿನ ರಸವನ್ನು ಹಾಕಿ ಕಲಸಿರಿ. ಚೆನ್ನಾಗಿ ಕಲಿಸಿರಿ.
3. ಪೇಪರ್ ಪ್ಲೇಟ್ ಗಳ ಮೇಲೆ ಸೌತೇಕಾಯಿ ತುಂಡುಗಳನ್ನು ಜೋಡಿಸಿರಿ
4. ಬಟ್ಟಲಿನೊಳಗೆ ಕಲಸಿರುವ ಪದಾರ್ಥಗಳನ್ನು ಒಂದು ಚಮಚದಷ್ಟು ತೆಗೆದುಕೊಂಡು ಸೌತೇಕಾಯಿ ಮೇಲೆ ಇಡಿರಿ, ಮೇಲೆ ಕೊತ್ತಮರಿ ಸೊಪ್ಪು ಇಟ್ಟು ಅಲಂಕಾರ ಮಾಡಿರಿ.
5. ನಿಮ್ಮ ವಿಶೇಷವಾದ ಸೌತೇಕಾಯಿ ಖಾದ್ಯ ಸವಿಯಲು ಸಿದ್ಧವಾಗಿದೆ.

# ಕರಕುಶಲ ಪೋಲೀಸ್ ರೇಡಿಯೊ

**ಸಾಮಗ್ರಿಗಳು:**


-ಪ್ರತಿಯೊಂದು ಮಗುವಿಗಾಗಿಯೂ ಹಾಳೆಯ ಮೇಲೆ ಮುದ್ರಿಸಲಾಗಿರುವ ರೇಡಿಯೋ ಪ್ರತಿಯನ್ನು ತೆಗೆದುಕೊಳ್ಳಿರಿ
-ಕತ್ತರಿಗಳು
-ಗೋಂದು
-ಬಣ್ಣಗಳು




**ಸೂಚನೆಗಳು:**

ಹಂತ 1. ನಿಮ್ಮ ಇಷ್ಟದಂತೆ ರೇಡಿಯೋಗೆ ಬಣ್ಣ ಹಚ್ಚಿರಿ ಅಥವಾ ಅಲಂಕರಿಸಿರಿ.
ಹಂತ 2. ಚುಕ್ಕೆಯ ಗೆರೆಗಳಿಗನುಸಾರವಾಗಿ ಅದನ್ನು ಕತ್ತರಿಸಿರಿ.
ಹಂತ 3. ಗೆರೆಗಳು ಮತ್ತು ಕೋನಗಳಿಗನುಸಾರವಾಗಿ ಮಡಚಿರಿ ಹಾಗೂ ಒಂದು ಕಡೆಗೆ ಅಂಟಿಸಿರಿ.
ಹಂತ 4. ಉತ್ತಮವಾಗಿ ಅಂಗೀಕರಿಸಿಕೊಳ್ಳುವ ಸಲುವಾಗಿ ಆಂಟಿನಾ ಕತ್ತರಿಸಿರಿ ಮತ್ತು ಅಂಟಿಸಿರಿ. ಕಳ್ಳನನ್ನು ಎಲ್ಲೆಲ್ಲಿ ಹುಡುಕಿದ್ದೀರಿ ಮತ್ತು ಈಗ ಎಲ್ಲಿಗೆ ಹೋಗುತ್ತೀರಿ ಎಂಬದನ್ನು ಇತರೆ ಅಧಿಕಾರಿಗಳಿಗೆ ಹೇಳಲು ನಿಮ್ಮ ರೇಡಿಯೋ ಉಪಯೋಗಿಸಿರಿ.

# ಕರಕುಶಲ 1 – ಪ್ರೋಲೀಸ್ ರೇಡಿಯೋ



# 2 ಕಾರಾಗೃಹ

## ಸತ್ಯವೇದ ಕಥೆ: ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀ

## ನಾಟಕ/ಸ್ಕಿಟ್

ಪತ್ಲು: ಹೇ, ಮೋಟು, ನಾವು ಅವರಿಂದ ತಪ್ಪಿಸಿಕೊಂಡೆವು ಎಂದು ನನಗೆ ಅನ್ನಿಸುತ್ತದೆ.
ಮೋಟು: ಹೌದು ಮಗು, ನಾವು ಪಟ್ಟಣ ಬಿಟ್ಟು ಒಳ್ಳೆಯ ಕಾರ್ಯ ಮಾಡಿದ್ದೇವೆ. [ಪಕ್ಷಿಯಂತೆ ರೆಕ್ಕೆಗಳನ್ನು ಬಡಿಯುತ್ತಾ] ನಾವು ಸ್ವತಂತ್ರರಾಗಿದ್ದೇವೆ...
ಪತ್ಲು: ಸರಿ, ಮೋಟು, ನಾನು ಬೆಟ್ಟದ ಮೇಲಕ್ಕೆ ಹೋಗಿ ಏನಾಗುತ್ತಿದೆ ಎಂದು ನೋಡುತ್ತೇನೆ.
ಮೋಟು: ಸರಿ ಹೋಗಿ ನಾನು ಇಲ್ಲಿಯೇ ಕಾಯುತ್ತಾ ಇರುತ್ತೇನೆ.
ಪತ್ಲು: [ಮೇಲಿಂದ ಏನನ್ನೋ ನೋಡಿ ಕೂಡಲೇ ಕೆಳಗೆ ಇಳಿದು ಬಂದನು] ಮೋಟು! ಅವರಿಗೆ ನಾವಿರುವ ಜಾಗ ಗೊತ್ತಾಗಿದೆ!
ಮೋಟು: ಅಯ್ಯಯ್ಯೋ!
ಪ್ರಮುಖ ಇನ್ಸಪೆಕ್ಟರ್: [ವಿಶ್ವಾಸದಿಂದ ವೇದಿಕೆಯ ಮೇಲೆ ಬಂದು] ಹುಡುಗರೇ, ಹೇಗಿದ್ದೀರಿ.
ಪತ್ಲು: ಹೇಗಿದ್ದೀರಿ, ಪ್ರಮುಖ ಇನ್ಸಪೆಕ್ಟರ್, ಇಂದಿನ ಸಮಾಚಾರ ಏನು?
ಮೋಟು: ಹೇಗಿದ್ದೀರಿ, [ಮಾತು ನುಂಗಿಕೊಂಡು] ಪ್ರಮುಖ ಇನ್ಸಪೆಕ್ಟರ್.
ಪ್ರಮುಖ ಇನ್ಸಪೆಕ್ಟರ್: ನೀವು ಈಗ ನನ್ನ ಜೊತೆ ಬರಬೇಕೆಂದು ನನಗೆ ಅನ್ನಿಸುತ್ತದೆ.
ಪತ್ಲು: ಪ್ರಮುಖ ಇನ್ಸಪೆಕ್ಟರ್, ನಾವು ಎಲ್ಲಿಗೆ ಹೋಗಬೇಕು?
ಪ್ರಮುಖ ಇನ್ಸಪೆಕ್ಟರ್: ಕಾರಾಗೃಹಕ್ಕೆ. ನೀವು ಮಾಡಿರುವ ಕಾರ್ಯದ ಬಗ್ಗೆ ನನ್ನ ಕೆಲವು ಪ್ರಶ್ನೆಗಳಿಗೆ ನೀವು ಉತ್ತರ ಕೊಡಬೇಕು.
ಮೋಟು: ಕಾರಾಗೃಹಕ್ಕಾ? ನಾವೊಂದು ಸಣ್ಣ ತಮಾಷೆ ಮಾಡಿದೆವು ಅಷ್ಟೆ...
ಪತ್ಲು: [ಮೋಟುದ ಮೂಗು ಹಿಂಡಿ, ಅವನು ಮಾತನಾಡುವದನ್ನು ನಿಲ್ಲಿಸುವಂತೆ ಸೂಚಿಸಿದನು] ಹೌದು, ನಾವು ಸುಮ್ಮನೆ ಗೊತ್ತಿಲ್ಲದೆ ತಮಾಷೆ ಮಾಡಿದೆವು ಅಷ್ಟೆ.
ಪ್ರಮುಖ ಇನ್ಸಪೆಕ್ಟರ್: ಆದರೆ ನನ್ನ ಕಿವಿಗೆ ಬೇರೆ ಸುದ್ದಿ ಬಿದ್ದಿದೆಯಲ್ಲಾ. [ತನ್ನ ದೊಡ್ಡ ಕಿವಿಗಳನ್ನು ತೋರಿಸುತ್ತಾ] ನಾನು ಚೆನ್ನಾಗಿ ಕೇಳಿಸಿಕೊಳ್ಳುವವನಾಗಿದ್ದೇನೆ.
ಮೋಟು: ನಾವು ಎಷ್ಟು ದಿನಗಳ ಕಾಲ ಕಾರಾಗೃಹದಲ್ಲಿ ಇರಬೇಕು?
ಪ್ರಮುಖ ಇನ್ಸಪೆಕ್ಟರ್: ನೀವು ಮಾಡಿರುವ ಕಾರ್ಯಕೆ ತಕ್ಕ ಶಿಕ್ಷೆ ಆಗುವ ತನಕ ಇರಬೇಕು. ನೀವಿಬ್ಬರು ಬಹಳ ತಪ್ಪುಗಳನ್ನು ಮಾಡಿದ್ದೀರಿ.
ಪತ್ಲು: ಹೌದಾ, ಪ್ರಮುಖ ಇನ್ಸಪೆಕ್ಟರ್?
ಪ್ರಮುಖ ಇನ್ಸಪೆಕ್ಟರ್: ಹೌದು?
ಪತ್ಲು: ಕಾರಾಗೃಹ ವಾಸ ತಪ್ಪಿಸಿಕೊಳ್ಳಲು ನಾವೇನಾದರೂ ಮಾಡಬಹುದೇ? ನಿನಗೇನಾದರೂ ಉಪಾಯ ಗೊತ್ತಿದೆಯೇ?
ಪ್ರಮುಖ ಇನ್ಸಪೆಕ್ಟರ್: ನನಗೆ ಯಾವ ಉಪಾಯವೂ ಗೊತ್ತಿಲ್ಲ.
ಮೋಟು: ಅಯ್ಯೋ ಹಾಗನ್ನಬೇಡ! ಇದು ಸರಿಯಿಲ್ಲ! [ರೆಕ್ಕೆಗಳನ್ನು ಬಡಿಯುತ್ತಾ ಹದ್ದಿನ ಕಡೆಗೆ ನೋಡುತ್ತಾ]

ಪತ್ಲು: ಅಯ್ಯೋ, ಮೋಟು ರೆಕ್ಕೆ ಬಡಿಯುವದನ್ನು ನಿಲ್ಲಿಸು. ಸರಿ, ಪ್ರಮುಖ ಇನ್ಸಪೆಕ್ಟರ್, ನಮಗೆ ನ್ಯಾಯ ಸಿಗುತ್ತದೆಯೇ?
ಪ್ರಮುಖ ಇನ್ಸಪೆಕ್ಟರ್: ನೋಡಿ ಸ್ನೇಹಿತರೇ, ನಿಮಗೆ ರಾಜ್ಯದ ನಿಯಮಗಳು ಚೆನ್ನಾಗಿ ಗೊತ್ತು. ಆದರೂ ನೀವು ಅವುಗಳನ್ನು ಉಲ್ಲಂಘನೆ ಮಾಡಿದ್ದೀರಿ.
ಮೋಟು: ನೀನು ನಿಜವಾಗಿಯೂ ನಮ್ಮ ಕೈಗಳಿಗೆ ಬೇಡಿಗಳನ್ನು ತೊಡಿಸಬೇಕೇ?
ಪೋಲೋಸ್: ನಾವು ಅರಸನ ಮುಂದೆ ಹೋದ ನಂತರ ಮಾತನಾಡಲು ನಮಗೆ ಬಹಳ ಸಮಯ ಸಿಗುತ್ತದೆ ಎಂದು ನಾನು ನೆನೆಸುತ್ತೇನೆ.
ಮೋಟು: ಅರಸನು ಬಹಳ ನಿಷ್ಠಾವಂತನು. ಪತ್ಲು, ನಮ್ಮ ತಪ್ಪುಗಳಿಗೆ ನಮಗೆ ಖಂಡಿತ ತಕ್ಕ ಶಿಕ್ಷೆ ಆಗುತ್ತದೆ.
ಪತ್ಲು: [ತನ್ನ ಕೈಯನ್ನು ಮೋಟು ಬಾಯಿಯ ಮೇಲೆ ಇಟ್ಟು], ಮೋಟು ಬಾಯಿ ಮುಚ್ಚು.
ಮೋಟು: [ಮೆಲ್ಲಗೆ] ಕಳ್ಳತನ ಮಾಡುವದು, ತಮಾಷೆ ಮಾಡುವದು, ಚಿಕ್ಕ ತಂಗಿಯನ್ನು ಹೊಡೆಯುವದು, ಮತ್ತು ನನ್ನ ತಾಯಿಗೆ ಅವಿಧೇಯನಾಗಿ ನಡೆದುಕೊಳ್ಳುವದು ಎಲ್ಲವೂ ಆತನಿಗೆ ಗೊತ್ತಿದೆ. ನಾನು ನನ್ನ ಅಣ್ಣನ ಗಾಳಿಪಟವನ್ನು ಹರಿದು ಅದನ್ನು ಮತ್ತೊಬ್ಬನ ಮೇಲೆ ಹಾಕಿದ್ದು ಸಹ ಆತನು ಬಲ್ಲನು.
ಪತ್ಲು: ಬಾಯಿ ಮುಚ್ಚು, ಮೋಟು!
ಮೋಟು: ಅನುಮತಿಯಿಲ್ಲದೆ ನೀನು ಮೀನು ಹಿಡಿಯಲು ಹೋದದ್ದು ಮತ್ತು ಅನುಮತಿಯಿಲ್ಲದೆ ಮಾವಿನ ಹಣ್ಣುಗಳನ್ನು ತೆಗೆದುಕೊಂಡದ್ದು ಹಾಗೂ ಹೋಟೆಲ್ ವಸ್ತುಗಳನ್ನು ಕೆದಕಿದ್ದು ಎಲ್ಲವೂ ಆತನಿಗೆ ಗೊತ್ತಿಲ್ಲದಂತೆ ಮಾತನಾಡುವೆಯಾ. ಅವರು ಅದಕ್ಕೂ ಅನುಮತಿ ಕೊಡುವದಿಲ್ಲ.
ಪ್ರಮುಖ ಇನ್ಸಪೆಕ್ಟರ್: ಜೇಬು ಕತ್ತರಿಸಿದ್ದು ಮತ್ತು ವಸ್ತುಗಳನ್ನು ತೆಗೆದುಕೊಂಡು ನಂತರ ಹಿಂದಿರುಗಿಸಲು "ಮರೆತುಹೋದದ್ದು" ಹಾಗೂ ಸುಳ್ಳು ಹೇಳಿದ್ದನ್ನು ಮರೆಯಬೇಡಿರಿ.
ಪತ್ಲು: ಅಯ್ಯೋ, ಮೋಟು ಇವೆಲ್ಲಾ ಲೆಕ್ಕಕ್ಕೆ ಬರುವದಿಲ್ಲ ಎಂದು ನನಗೆ ಅನ್ನಿಸುತ್ತದೆ. ಒಂದುವೇಳೆ ನೀನು ನಿನ್ನ ದೊಡ್ಡ ಬಾಯಿಯನ್ನು ತೆರೆದು ನಾವು ಮಾಡಿರುವದನ್ನೆಲ್ಲಾ ಹೇಳಿದರೂ ನ್ಯಾಯಧೀಶನಿಗೆ ಅವುಗಳೆಲ್ಲಾ ಮೊದಲೇ ಗೊತ್ತಿವೆ.
ಪ್ರಮುಖ ಇನ್ಸಪೆಕ್ಟರ್: ಬನ್ನಿ ಹುಡುಗರೇ, ಹೋಗೋಣ.
ಪ್ರಮುಖ ಇನ್ಸಪೆಕ್ಟರ್: [ತನ್ನ ಕಾಲಿಗೆ ಮತ್ತೊಂದು ಕಾಲು ತಾಗಿಸಿಕೊಂಡು ಬಿದ್ದು ಹೋಗುತ್ತಾನೆ. ನಂತರ ಮೇಲಕ್ಕೆ ಎದ್ದು ಯಾರಾದರೂ ನೋಡಿದರೇನೋ ಎಂದು ಗಮನಿಸುತ್ತಾನೆ.]

# ಮುಖ್ಯ ಪಾಠ

## ಯೋಹಾನ 8:1-11

ನೀವು ಬೇಕಾದವರಾಗಿದ್ದಿರಿ.
ನಿಮ್ಮ ಹೆಸರು ಪೋಸ್ಟರ್ ಮೇಲೆ ಇತ್ತು, ಮತ್ತು ಜನರು ನಿಮ್ಮನ್ನು ಹುಡುಕುತ್ತಿದ್ದರು.
ಆದರೆ ನೀವು ಈ ಕಾರಾಗೃಹದಲ್ಲಿ ಇದ್ದೀರಿ! ಹೌದು, ನೀವು ನಿಜವಾಗಿಯೂ ಬಂಧನದಲ್ಲಿದ್ದೀರಿ! ಆದರೆ ನಿಮಗೆ ಕಾರಾಗೃಹದಲ್ಲಿ ಇರುವಂತೆ ಅನ್ನಿಸುತ್ತಿಲ್ಲ, ಅಲ್ಲವೇ?
ನೀವು ಅತ್ತಿತ್ತ ಓಡಾಡಬಹುದು, ಮತ್ತು ಇನ್ನೂ ಸ್ವತಂತ್ರರಾಗಿರುವಂತೆ ನಿಮಗೆ ಅನ್ನಿಸುತ್ತಿರಬಹುದು.
ನಿಮಗಾಗಲಿ ಅಥವಾ ನಿಮ್ಮ ಸ್ನೇಹಿತರಿಗಾಗಲಿ ನಿಮ್ಮ ಕಾರಾಗೃಹದ ಕೋಣೆ ಕಾಣಿಸದೆ ಇರಬಹುದು, ಆದರೆ ದೇವರಿಗೆ ಅದು ಕಾಣಿಸುವಂಥದ್ದಾಗಿದೆ. ನಿಜವಾಗಿ ಹೇಳುವದಾದರೆ, ನಿಮ್ಮ ಸ್ನೇಹಿತರು ಸಹ ಅವರ ಕಾರಾಗೃಹದ ಕೋಣೆಯಲ್ಲಿರ ಬಹುದು! ಸತ್ಯವೇದದಿಂದ ಇಂದಿನ ನಮ್ಮ ಪ್ರಮುಖ ವಚನ ಯಾವುದೆಂದರೆ, "ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕ್ ಅರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ." ರೋಮಾ 6:23
ನೆನ್ನೆಯ ಪಾಠ ನಿಮಗೆ ನೆನಪಿದೆಯೇ? ನಾವೆಲ್ಲರೂ, ಅಂದರೆ ಪ್ರತಿಯೊಬ್ಬರೂ ಪಾಪ ಮಾಡಿದ್ದೇವೆ!
ಇಂದಿನ ನಾಟಕ/ಸ್ಕಿಟ್ ನಲ್ಲಿ, ಪತ್ಲು ಮತ್ತು ಮೋಟು ತಮ್ಮ ತಮಾಷೆಯ ನಿಮಿತ್ತ ಬಂಧನಕ್ಕೊಳಗಾದ ಹಾಗೆ, ಆ ಪಾಪಕ್ಕೂ ನಿಜವಾದ ಶಿಕ್ಷೆ ಇದೆ.
ನಿಮ್ಮ ತಂದೆತಾಯಿಗಳು ಮನೆಯಲ್ಲಿ ನಿಮಗೆ ಶಿಕ್ಷೆಗಳನ್ನು ಕೊಡುತ್ತಾರೆಯೇ? ಉದಾಹರಣೆಗೆ, ನೀವು ನಿಮ್ಮ ಹೋಮ್ ವರ್ಕ್ ಮುಗಿಸದೆ ಹೋದರೆ, ಯಾರಿಗೂ ಹೇಳದೆ ಸ್ನೇಹಿತರೊಂದಿಗೆ ಆಟವಾಡಲು ಹೋದರೆ. ಸಹಜವಾಗಿಯೇ ಶಿಕ್ಷೆ ಸಿಗುತ್ತದೆ.
ಹೀಗೆಯೇ, ದೇವರು ಸಹ ಶಿಕ್ಷೆಯನ್ನು ಹೊಂದಿದ್ದಾನೆ. ಅದು ಪಾಪ ಮಾಡಿದವರೆಲ್ಲರಿಗೆ ಆಗುವ ಶಿಕ್ಷೆಯಾಗಿದೆ.
ಆದರೆ ಅದೇ ಸಮಯದಲ್ಲಿ ದೇವರು ಅತ್ಯಂತ ಕರುಣೆಯುಳ್ಳವನಾಗಿದ್ದಾನೆ ಮತ್ತು ನಮಗೆ ಅರ್ಹವಾದದ್ದನು ಕೆಲವೊಮ್ಮೆ ಕೊಡುವದಿಲ್ಲ.

ಯೇಸು ಕ್ರಿಸ್ತನು ದೇವಾಲಯದ ಅಂಗಳದಲ್ಲಿ ಬೋಧಿಸುತ್ತಿದ್ದನು ಅನೇಕ ಜನರು ಆತನ ಸುತ್ತಲು ಕುಳಿತುಕೊಂಡಿದ್ದರು. ಜನರೆಲ್ಲರೂ ಆತನ ಸುತ್ತಲು ಕುಳಿತುಕೊಂಡಿದ್ದಾಗ, ಕೆಲವು ಧಾರ್ಮಿಕ ನಾಯಕರು ಅತ್ಯಂತ ಕೆಟ್ಟ ಪಾಪವಾದ, ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಸ್ತ್ರೀಯನ್ನು ಅಲ್ಲಿಗೆ ಕರೆದುಕೊಂಡು ಬಂದರು. ಮತ್ತು ಆಕೆಯನ್ನು ಜನರ ಮಧ್ಯದಲ್ಲಿ ನಿಲ್ಲಿಸಿದರು. ದೊಡ್ಡ ಜನರ ಗುಂಪಿನ ಎದುರಿನಲ್ಲಿ ಆಕೆಯ ಪಾಪವನ್ನು ಗಟ್ಟಿಯಾಗಿ ಹೇಳಿದಾಗ ಆಕೆಗೆ ಹೇಗೆ ಅನ್ನಿಸಿರಬಹುದು? ಆಕೆಗೆ ಬಹಳ ಹತಾಶೆಯಾಗಿರಬಹುದು, ಅಲ್ಲವೇ?
ಅವರು ಯೇಸು ಕ್ರಿಸ್ತನಿಗೆ ಈಗ ಏನು ಮಾಡಬೇಕು ಎಂದು ಕೇಳಿದರು. ಅವರು ಎಲ್ಲರಿಗೂ ಆಕೆಯ ಪಾಪವನ್ನು ಹೇಳಿದರು ಮತ್ತು ಧರ್ಮಶಾಸ್ತ್ರದ ಪ್ರಕಾರ ಆಕೆಯನ್ನು ಕೊಲ್ಲಬೇಕೆಂದು ತಿಳಿಸಿದರು. ಅದು ನಿಜ; ಆಕೆಯ ಪಾಪಕ್ಕೆ ಮರಣದಂಡನೆ ಸಹಜವಾದ ಶಿಕ್ಷೆಯಾಗಿತ್ತು! ಅವರೆಲ್ಲರೂ ಕಲ್ಲುಗಳನ್ನು ಕೈಗಳಲ್ಲಿ ಎತ್ತುಕೊಂಡಿದ್ದರು ಮತ್ತು ಕಲ್ಲೆಸೆದೇ ಆಕೆಯನ್ನು ಕೊಲ್ಲಬೇಕೆಂದು ಯೋಚಿಸಿದ್ದರು!

ಸತ್ಯವೇದವು ಹೇಳುವದೇನೆಂದರೆ:
"ಆದರೆ ಯೇಸು ಬೊಗ್ಗಿಕೊಂಡು ಬೆರಳಿನಿಂದ ನೆಲದ ಮೇಲೆ ಬರೆಯುತ್ತಾ ಇದ್ದನು. ಅವರು ಆತನನ್ನು ಬಿಡದೆ ಕೇಳುತ್ತಿರುವಾಗ ಆತನು ನೆಟ್ಟಗೆ ಕೂತುಕೊಂಡು - ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ ಎಂದು ಹೇಳಿ ತಿರಿಗಿ ಬೊಗ್ಗಿಕೊಂಡು ನೆಲದ ಮೇಲೆ ಬರೆಯುತ್ತಾ ಇದ್ದನು."

"ಆ ಮಾತನ್ನು ಕೇಳಿ ತಾವೇ ಪಾಪಿಗಳೆಂದು ಮನಸ್ಸಿನಲ್ಲಿ ತಿಳುಕೊಂಡು ಹಿರಿಯರು ಮೊದಲುಗೊಂಡು ಕಿರಿಯರವರೆಗೂ ಒಬ್ಬರ ಹಿಂದೊಬ್ಬರು ಹೊರಗೆ ಹೋದರು; ಯೇಸು ಒಬ್ಬನೇ ಉಳಿದನು, ಮತ್ತು ನಡುವೆ ನಿಂತಿದ್ದ ಹೆಂಗಸು ಅಲ್ಲೇ ಇದ್ದಳು. ಯೇಸು ನೆಟ್ಟಗೆ ಕೂತುಕೊಂಡು ಆ ಸ್ತ್ರೀಯನ್ನೇ ಹೊರತು ಯಾರನ್ನೂ ನೋಡದೆ ಆಕೆಗೆ - ಅಮ್ಮಾ, ನಿನ್ನ ಮೇಲೆ ತಪ್ಪುಹೊರಿಸುವವರು ಎಲ್ಲಿದ್ದಾರೆ? ನಿನಗೆ ಯಾರೂ ಶಿಕ್ಷೆಯನ್ನು ವಿಧಿಸಲಿಲ್ಲವೋ? ಅಂದನು. ಯಾರೂ ವಿಧಿಸಲಿಲ್ಲ, ಸ್ವಾಮೀ, ಅಂದಳು.
ಯೇಸು ಆಕೆಗೆ - ನಾನೂ ನಿನಗೆ ಶಿಕ್ಷೆ ವಿಧಿಸುವದಿಲ್ಲ; ಹೋಗು, ಇನ್ನು ಮೇಲೆ ಪಾಪಮಾಡಬೇಡ ಎಂದು ಹೇಳಿದನು."


ಯೇಸು ಕ್ರಿಸ್ತನು ಆ ಸ್ತ್ರೀಗೆ ಕರುಣೆಯನ್ನು ತೋರಿಸಿದನು ಮತ್ತು ಆಕೆಯ ಪಾಪಕ್ಕೆ ತಕ್ಕದಾದ ಶಿಕ್ಷೆಯನ್ನು ಆಕೆಗೆ ಕೊಡಲಿಲ್ಲ. ನಾವು ಸಹ ಯೇಸು ಕ್ರಿಸ್ತನಿಂದ ಕರುಣೆಯನ್ನು ಹೊಂದಬಹುದಾಗಿದೆ, ಮತ್ತು ನಮ್ಮ ಪಾಪಕ್ಕೆ ತಕ್ಕ ಶಿಕ್ಷೆಯನ್ನು ಹೊಂದಬೇಕಿದ್ದರೂ, ಆತನಿಂದ ಶಿಕ್ಷೆ ಹೊಂದದೆ ತಪ್ಪಿಸಿಕೊಳ್ಳಬಹುದಾಗಿದೆ.
ನಿಮಗೆ ಇದು ಇಷ್ಟವಾಯಿತೇ?
ಪ್ರಾರ್ಥನೆ ಮಾಡೋಣ.
"ಯೇಸುವೇ, ನಾನು ಪಾಪಿ ಮತ್ತು ನಿನ್ನ ಶಿಕ್ಷೆಗೆ ಅರ್ಹನೆಂದು ಒಪ್ಪಿಕೊಳ್ಳುತ್ತೇನೆ. ಆದರೆ ನೀನು ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀಗೆ ಕರುಣೆಯನ್ನು ತೋರಿಸಿದಂತೆಯೇ ನನಗೂ ಕರುಣೆಯನ್ನು ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ತಪ್ಪುಗಳಿಗಾಗಿ ದಯವಿಟ್ಟು ನನ್ನನ್ನು ಕ್ಷಮಿಸು, ಮತ್ತು ನನಗೆ ಕರುಣೆಯನ್ನು ತೋರಿಸು. ಧನ್ಯವಾದಗಳು."

ಇಂದಿನ ನಾಟಕ/ಸ್ಕಿಟ್ ನಂತೆಯೇ, ನಾನು ಮತ್ತು ನೀವುಗಳು ಸಿಕ್ಕಿಬಿದ್ದಿದ್ದೇವೆ ಹಾಗೂ ಕಾರಾಗೃಹಕ್ಕೆ ಹಾಕಲ್ಪಟ್ಟಿದ್ದೇವೆ. ಆದರೆ ಇಲ್ಲಿಗೇ ಕಥೆ ಮುಗಿಯುವದಿಲ್ಲ. ನಾಳೆ ನಾವು ಹೆಚ್ಚಿನ ನಾಟಕವನ್ನು ನೋಡೋಣ ಮತ್ತು ದೇವರ ಬಗ್ಗೆ ಹೆಚ್ಚಾಗಿ ಕಲಿತುಕೊಳ್ಳೋಣ.

# ಕಂಠಪಾಠ ವಚನ

" ಮರಣವೇ ಪಾಪದ ವೇತನ; ನಮ್ಮ ಪ್ರಭು ಯೇಸುಕ್ರಿಸ್ತರಲ್ಲಿ ಇರುವ ನಿತ್ಯಜೀವವೇ ದೇವರ ಉಚಿತ ವರದಾನ." ರೋಮನರಿಗೆ 6:23

# ಮತದಾನ



2 ಮತದಾನದ ಸಮಯ

## ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀ

ತಪ್ಪಾಗಿ ನಡೆದುಕೊಂಡಿದ್ದ ಸ್ತ್ರೀಯನ್ನು ಯೇಸು ಕ್ರಿಸ್ತನು ಶಿಕ್ಷಿಸದೆ ಇದ್ದಾಗ ಧಾರ್ಮಿಕ ನಾಯಕರ ಅಭಿಪ್ರಾಯ ಏನಾಗಿತ್ತು?


| ಅವರಿಗೆ ನಿಜವಾಗಿಯೂ ಆಕೆಯ ಮೇಲೆ ಕೋಪ ಬಂದಿತು! ಅವರು ಆಕೆಯನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದರು. | ಕೆಯ ವಿಷಯದಲ್ಲಿ ಅವರಿಗೆ ಸಂತೋಷವಾಯಿತು! ಆಕೆ ಪಾಪ ಮಾಡಿದ್ದರಿಂದ ಅವರಿಗೆ ಬೇಸರವಾಯಿತು ಮತ್ತು ಆಕೆಗೆ ಸ್ವತಂತ್ರ ದೊರಕಿದ್ದರಿಂದ ಹಾಗೂ ಉತ್ತಮವಾದ ಆಯ್ಕೆಗಳನ್ನು ಮಾಡಲು ಎರಡನೇ ಅವಕಾಶ ದೊರಕಿದ್ದರಿಂದ ಅವರಿಗೆ ಸಂತೋಷವಾಯಿತು. |
| --- | --- |
| ಸುಲಭ | |
| ಸುಲಭ | |
| ಕಷ್ಟ | |
| ಕಷ್ಟ | |

Equip & Grow
ಮಕ್ಕಳ ಪ್ರಮುಖರು

ಸತ್ಯವೇದದ ಈ ಘಟನೆ ಸಂಭವಿಸುತ್ತಿರುವ ಸಮಯದಲ್ಲಿ ತಾವು ಜೀವಂತವಾಗಿರುವಂತೆ ಮತ್ತು ಜನರ ಗುಂಪಿನಲ್ಲಿ ನಿಂತಿರುವಂತೆ ಊಹಿಸಿಕೊಳ್ಳಿರಿ ಎಂದು ನಿಮ್ಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಪಡಿಸಿರಿ. ಒಂದುವೇಳೆ ಅವರು ತಮ್ಮ ಸುತ್ತಲಿನಲ್ಲಿರುವ ಜನರ ಮುಖಗಳನ್ನು ನೋಡುವದಾದರೆ, ಆ ಸಮಯದಲ್ಲಿ ಜನರು ಏನು ಯೋಚಿಸುತ್ತಾ ಇದ್ದಾರೆ ಮತ್ತು ಭಾವಿಸುತ್ತಾ ಇದ್ದಾರೆ ಎಂಬದನ್ನು ಊಹಿಸಿಕೊಳ್ಳಬಹುದು?
ತಪ್ಪಾಗಿ ನಡೆದುಕೊಂಡಿದ್ದ ಸ್ತ್ರೀಯನ್ನು ಯೇಸು ಕ್ರಿಸ್ತನು ಶಿಕ್ಷಿಸದೆ ಇದ್ದಾಗ ಧಾರ್ಮಿಕ ನಾಯಕರ ಅಭಿಪ್ರಾಯ ಏನಾಗಿತ್ತು?

*ಅವರಿಗೆ ನಿಜವಾಗಿಯೂ ಆಕೆಯ ಮೇಲೆ ಕೋಪ ಬಂದಿತು! ಅವರು ಆಕೆಯನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದರು.

*ಆಕೆಯ ವಿಷಯದಲ್ಲಿ ಅವರಿಗೆ ಸಂತೋಷವಾಯಿತು! ಆಕೆ ಪಾಪ ಮಾಡಿದ್ದರಿಂದ ಅವರಿಗೆ ಬೇಸರವಾಯಿತು ಮತ್ತು ಆಕೆಗೆ ಸ್ವತಂತ್ರ ದೊರಕಿದ್ದರಿಂದ ಹಾಗೂ ಉತ್ತಮವಾದ ಆಯ್ಕೆಗಳನ್ನು ಮಾಡಲು ಎರಡನೇ ಅವಕಾಶ ದೊರಕಿದ್ದರಿಂದ ಅವರಿಗೆ ಸಂತೋಷವಾಯಿತು.



# ದಿನ 2 ವಿದ್ಯಾರ್ಥಿ ಪುಸ್ತಕಗಳು

## ದೊಡ್ಡ ಮಕ್ಕಳಿಗೆ ಪ್ರಶ್ನೆಗಳು ಮತ್ತು ಉತ್ತರಗಳು

**1.ತರಗತಿಯಾಗಿ ಒಟ್ಟಾಗಿ, ಏನೋ ತಪ್ಪು ಮಾಡಿದಾಗ ನಿಮಗೆ ಅಥವಾ ಇತರರಿಗೆ ಕೊಡಲಾಗಿರುವ ಶಿಕ್ಷೆಗಳ ಪಟ್ಟಿಯನ್ನು ಮಾಡಿರಿ. ಗಂಭೀರತೆಯ ಪ್ರಮಾಣದಲ್ಲಿ ಚಿಕ್ಕದರಿಂದ ದೊಡ್ಡದರ ತನಕ ಪಟ್ಟಿ ಮಾಡಿರಿ.**
ಅಮ್ಮನು ದಿಟ್ಟಿಸಿ ನೋಡಿದ್ದು, ಸ್ವಲ್ಪ ಪರದೆಯ ಸಮಯದ ನಷ್ಟ, ಕೈ ಮೇಲೆ ಮೆದುವಾದ ಹೊಡೆತ, ಕೂಗಾಡಿದ್ದು, ಸಮಯ ಮುಗಿದ ಕಾರಣ ನಿಮ್ಮ ಕೋಣೆಯೊಳಗೆ ಕಳುಹಿಸಿದ್ದು, ವಾರದ ತನಕ ನೆಲದ ಮೇಲೆ ಕೂರಿಸುವದು, ನಿಮಗಿಷ್ಟವಾದ ಆಹಾರ ಮತ್ತು ಪಾನೀಯ ಕೊಡದಂತೆ ನಿಷೇಧಿಸುವದು, ಹೊಡೆತ ತಿಂದದ್ದು… ಇಂದಿನ ಸತ್ಯವೇದದ ಕಥೆಯಲ್ಲಿ ಧರ್ಮಶಾಸ್ತ್ರವು ಹೇಳುವ ಪ್ರಕಾರ ಕಲ್ಲೆಸೆದು ಕೊಲ್ಲುವದು.

**2.ಘೋರವಾಗಿ ಧರ್ಮಶಾಸ್ತ್ರದ ಉಲ್ಲಂಘನೆ ಅಥವಾ ಶಾಲೆಯ ನಿಯಮವನ್ನು ಉಲ್ಲಂಘನೆ ಮಾಡಿ ತಪ್ಪಿಸಿಕೊಂಡಿರುವ ಅಥವಾ ಸಿಕ್ಕಿಕೊಳ್ಳದೆ ಇರುವದನ್ನು ನೀವು ನೋಡಿದ್ದೀರೋ?**
ಮಕ್ಕಳು ಉದಾಹರಣೆ ಕೊಡಲು ಪ್ರಾರಂಭಿಸುವ ಸಲುವಾಗಿ ಅವರಿಗೆ ಸಹಾಯ ಮಾಡುವ ಸಲುವಾಗಿ ಸ್ಥಳೀಯ ಸುದ್ದಿಯಿಂದ ಮಾದರಿಯನ್ನು ಸಿದ್ಧಮಾಡಿರಿ. ನಿಮ್ಮ ಜೀವಿತದಲ್ಲಿಯೇ ನೀವು ಏನೋ ಮಾಡಿ ಸಿಕ್ಕಿಕೊಳ್ಳದೆ ಹೋದದ್ದನ್ನು ಮತ್ತು ಅದರ ವಿಷಯದಲ್ಲಿ ನಿಮಗೆ ಹೇಗೆ ಅನ್ನಿಸುತ್ತಿದೆ ಎಂಬದಕ್ಕೆ ಉದಾಹರಣೆ ಕೊಡಲು ಸಿದ್ಧರಾಗಿರಿ. ಅದನ್ನು ಕ್ರಮೇಣವಾಗಿ ನೀವು ಒಪ್ಪಿಕೊಂಡಿರೋ?

**3.ನಿಮ್ಮ ತಂದೆತಾಯಿಗಳಿಗೆ ಗೊತ್ತಾಗದಂತೆ ನಿಮ್ಮ ಎಲ್ಲಾ ಕೆಟ್ಟ ಕಾರ್ಯಗಳನ್ನು ಅಥವಾ ಪದಗಳನ್ನು ಬಚ್ಚಿಡಲು ಸಾಧ್ಯವೇ? ದೇವರಿಂದ ಬಚ್ಚಿಡಲು ಸಾಧ್ಯವೇ?**
ಆದಿಕಾಂಡ 3:8, ಯೆರೆಮಿಯ 23:24, ಯೆಹೋಶುವ 7:19

**4.ನಿಮ್ಮ ಶಿಕ್ಷಕ, ತಾಯಿ, ತಂದೆ, ಪೋಲೀಸ್ ಇತ್ಯಾದಿ ಜನರಿಗೆ ಗೊತ್ತಾಗದಂತೆ ಬಚ್ಚಿಡಲು ನೀವು ಏನು ಮಾಡಬೇಕು?**
ಉತ್ತರಗಳು ಬೇರೆಬೇರೆಯಾಗಿರುವವು ಆದರೆ ಒಂದು ಪಾಪ ಮತ್ತೊಂದಕ್ಕೆ ನಡೆಸುತ್ತದೆ ಎಂದರೆ ಅದನ್ನು ಮುಚ್ಚಿಡಲು ಸುಳ್ಳು ಹೇಳಬೇಕಾಗುತ್ತದೆ ಎಂಬದನ್ನು ಒಪ್ಪಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಪಡಿಸಿರಿ.

## ಮುಂದುವರೆದ - ಕಷ್ಟ

ಉತ್ತರಗಳು:
ಚರ್ಚೆಗೆ ಕಾರಣವಾಗುವಂಥ ವಿವಿಧ ಶಿಕ್ಷೆಗಳಿಗೆ ಅನುಮತಿಸಿರಿ ಮತ್ತು ವಿದ್ಯಾರ್ಥಿಗಳ ಈಗಿನ ದಿನದ ಜೀವಿತಕ್ಕೆ ಪಾಠವು ಹೆಚ್ಚು ಆಸಕ್ತಿಕರವಾಗಿರುವಂತೆ ಮತ್ತು ಅನ್ವಯವಾಗಿರುವಂತೆ ಮಾಡಿರಿ.

"ಎಲ್ಲರೂ ಮಾಡುತ್ತಾರೆ" ಆದ್ದರಿಂದ ನಾವು ತಪ್ಪಿಸಿಕೊಳ್ಳಬಹುದು ಎಂದು ಯೋಚಿಸಿ ಮಾಡಿದರೂ, ಅದು ತಪ್ಪೇ ಆದ್ದರಿಂದ ಅಂಥ ಕಾರ್ಯಗಳ ಬಗ್ಗೆ ಮಾತನಾಡಿರಿ.

ತಮ್ಮ ಮಕ್ಕಳು ಚಿಕ್ಕವರಾಗಿರುವಾಗಿನಿಂದಲೇ ಒಳ್ಳೆಯ ಕಾರ್ಯಗಳನ್ನು ಕಲಿತುಕೊಳ್ಳಬೇಕೆಂದು ತಂದೆತಾಯಿಗಳು ಯಾಕೆ ಬಯಸುತ್ತಾರೆ ಎಂಬದರ ಕಾರಣಗಳ ಬಗ್ಗೆ ಮಾತನಾಡಿರಿ. ಒಂದುವೇಳೆ ಮಗು ಜೀವನದಲ್ಲಿ ಪ್ರಾಮುಖ್ಯವಾದ ಪಾಠಗಳನ್ನು ಕಲಿತುಕೊಳ್ಳದೆ ಇರುವದಾದರೆ ಶಿಕ್ಷೆಯ ಮೂಲಕ ಅವರಿಗೆ ಕಲಿಸುವಂತೆ ಪ್ರೀತಿ ಅವರನ್ನು ಪ್ರೋತ್ಸಾಹಪಡಿಸುತ್ತದೆ.

## ಪ್ರತಿಯೊಂದು ಕಾರ್ಯಕ್ಕೆ ಸೂಕ್ತವಾದ ಶಿಕ್ಷೆಗಳನ್ನು ಹೊಂದಿಸಿರಿ

| | |
|---|---|
| **ಕ್ಯಾಂಡಿ ಕದ್ದುಕೊಳ್ಳುವದು** | **ಸಮಯ ಮುಗಿಯುವದು** |
| **ಯಾರನ್ನಾದರು ಕೊಲ್ಲುವದು** | **ಮರಣ** |
| **ಪರೀಕ್ಷೆಯಲ್ಲಿ ಮೋಸ ಮಾಡುವದು** | **ಸೆರೆಮನೆ** |
| **ಕ್ರೈಸ್ತನಲ್ಲವೆಂದು ತೋರ್ಪಡಿಸಿಕೊಳ್ಳುವದು** | **ಹೊಡೆಯುವದು** |
| **ತಪ್ಪಿಸಿಕೊಂಡು ಒಳ್ಳೆಯವನಂತೆ ನಡೆದುಕೊಳ್ಳುವದು** | **ಎಲ್ಲರೂ ಮಾಡುತ್ತಾರೆ, ಮರೆತುಹೋಗಿರಿ** |
| **ನೀವು ಮಾಡಿದ್ದೆಂದು ಅಲ್ಲಗಳೆಯುವದು** | **ತಪ್ಪಾಯಿತೆಂದು ಹೇಳುವದು** |
| **ನಿಮ್ಮ ಸಹೋದರಿಯ ವಸ್ತುಗಳನ್ನು ಮುಟ್ಟುವದು** | **ಕ್ಷಮಾಪಣೆ ಕೇಳುವದು** |
| **ನಾಯಿಯನ್ನು ಹೊಡೆಯುವದು ಅಥವಾ ಒದೆಯುವದು** | **ಮತ್ತೆ ಮಾಡುವದಿಲ್ಲವೆಂದು ಪ್ರಮಾಣ ಮಾಡುವದು** |
| **ಒಳ್ಳೆಯ ಆಹಾರವನ್ನು ಬಿಸಾಡುವದು** | **ಹಣದೊಂದಿಗೆ ಅದಕ್ಕಾಗಿ ಪ್ರಾರ್ಥನೆ ಮಾಡುವದು** |
| **ಬೇರೆಯವರ ಬಗ್ಗೆ ಗುಣುಗುಟ್ಟುವದು** | **ನಿಮ್ಮ ಕೋಣೆಯೊಳಗೆ ಹೋಗುವದು** |
| **ಉಪಯೋಗಿಸಿದ ಗಮ್ ಅನ್ನು ಪೀಠೋಪಕರಣಗಳಿಗೆ ಅಂಟಿಸುವದು** | **ಊಟ ಬಿಡುವದು** |
| **ಊಟದ ಸಮಯದಲ್ಲಿ ಪ್ರಾರ್ಥನೆ ಮಾಡುವದನ್ನು ಮರೆಯುವದು** | **ಬೈಯುವದು** |
| **ಯೇಸು ಕ್ರಿಸ್ತನನ್ನು ಕಡೆಗಣಿಸುವದು** | **ಏನನ್ನಾದರು ಬಿಟ್ಟುಕೊಡದೆ ಇರುವದು (ನಿರಾಕರಣೆ)** |
| **ಆನಾರೋಗ್ಯದಲ್ಲಿರುವಂತೆ ತೋರ್ಪಡಿಸಿಕೊಳ್ಳುವದು** | |
| **ಪಾಪ ಮಾಡುವದು** | |

ಮರೆಯಾಗಿರುವ 8 ಶಿಲುಬೆಗಳನ್ನು ಹುಡುಕಿರಿ ಮತ್ತು ಚಿತ್ರಕ್ಕೆ ಬಣ್ಣ ಹಚ್ಚಿರಿ.



# ವಿದ್ಯಾರ್ಥಿ ಪುಸ್ತಕಗಳು




ಚಿತ್ರದಲ್ಲಿ ಕಾಣೆಯಾಗಿರುವ ಭಾಗ ಬರೆಯಿರಿ


## ವ್ಯವಸ್ಥೆ

ಚಿತ್ರವನ್ನು ತೋರಿಸುವ ಬಾಣದೊಂದಿಗೆ ಪ್ರಾರಂಭಿಸಿರಿ ಮತ್ತು ನಿರ್ಗಮಿಸುವ ಬಾಣದ ಸಾಲುಗಳನ್ನು ದಾಟದಂಥ ತೆರೆದ ಮಾರ್ಗವನ್ನು ತಿಳಿದುಕೊಳ್ಳಿರಿ.


### ಮುಂದುವರೆದ - ಕಷ್ಟ



### ಮಧ್ಯಮ



### ಸುಲಭ



### ಪದ ಹುಡುಕಾಟ

| | | | | | | | | | | | |
|---|---|---|---|---|---|---|---|---|---|---|---|
| ಅ | ನಾ | ಸೆ | ಉ | ಅ | ಎ | ಬೆ | ಪೋ | ಕ | ಸೆ | ಸೆ | ಅ |
| ನಿ | ಬೇ | ಕಾ | ಗಿ | ದ್ದಾ | ರೆ | ಸಂ | ಉ | ಲೀ | ನಾ | ರೆ | ಎ |
| ಬೆ | ಸಂ | ಎ | ನಿ | ಅ | ಪ | ನಾ | ಸೆ | ಅ | ಸ್ | ಮ | ಸೆ |
| ದ | ಉ | ಬೇ | ಸಂ | ಜೇ | ಚಿ | ಬೆ | ಬೇ | ಎ | ನಿ | ನೆ | ಸಂ |
| ರಿ | ಬೆ | ಎ | ಉ | ಕೆ | ಬು | ಳ್ಳ | ಅ | ತ್ಯ | ಪ | ಬೇ | ಎ |
| ಕೆ | ಅ | ಕ | ಬೆ | ಡು | ನಿ | ಕ | ವಾ | ಬೆ | ಶಿ | ಕ್ಷೆ | ಅ |
| ಸೆ | ನಿ | ಲ್ಲು | ಬೇ | ಪ | ಗೊ | ದ | ಳ್ಳ | ಉ | ಅ | 'ಸ | ವಿ |
| ಸಂ | ಅ | ಗ | ಎ | ಸಂ | ದ್ದು | ರೆ | ಉ | ತ | ಬೆ | ಸಂ | ಧೇ |
| ಬೇ | ರ | ಳು | ಉ | ಬೇ | ಕ | ಎ | ಅ | ಸೆ | ನ | ನಿ | ಯ |
| ನಿ | ಸ | ಬೇ | ಬೆ | ಡಿ | ಉ | ನಾ | ಲ್ಲ | ಬೆ | ಸಂ | ಅ | ತೆ |
| ಸೆ | ಪ | ತ | ಅ | ಸಂ | ಬೇ | ಪ | ಉ | ರೂ | ಣಾ | ಪ | ಬೇ |
| ಅ | ಚಿ | ನಿ | ಎ | ಪ | ರಿ | ಣಾ | ಮ | ಗ | ಳು | ನಿ | ಎ |
| ಉ | ಬೇ | ಸಂ | ಸಂ | ಬ | ಳ | ಎ | ಸೆ | ಸಂ | ಉ | ಬೆ | ಸೆ |

ಸೆರೆಮನೆ
ಬೇಕಾಗಿದ್ದಾರೆ
ಜೇಬು-ಕಳ್ಳತನ
ಅವಿಧೇಯತೆ
ಬೇಡಿ
ಸಂಬಳ
ಎಲ್ಲರೂ
ಶಿಕ್ಷೆ
ನಿತ್ಯವಾದದ್ದು
ಉಡುಗೊರೆ
ಬೆದರಿಕೆ
ಅರಸ
ಪರಿಣಾಮಗಳು
ನಾಚಿಕೆ
ಕಳ್ಳ
ಕಲ್ಲುಗಳು
ಉಚಿತ
ಪೋಲೀಸ್

# ಜೇಡಿಮಣ್ಣಿನೊಂದಿಗೆ ಸತ್ಯವೇದದ ವಿಮರ್ಶೆ

ಇಂದಿನ ಸತ್ಯವೇದದ ಕಥೆಗಾಗಿ ಜೇಡಿಮಣ್ಣನ್ನು ತೆಗೆಯೋಣ!
ಯೇಸು ಕ್ರಿಸ್ತನು ದೇವಾಲಯದ ಅಂಗಳದಲ್ಲಿ ಬೋಧಿಸುತ್ತಿದ್ದನು ಅನೇಕ ಜನರು ಆತನ ಸುತ್ತಲು ಕುಳಿತುಕೊಂಡಿದ್ದರು. ನಮ್ಮ ಜೇಡಿಮಣ್ಣಿನಿಂದ ಜನರ ಗುಂಪನ್ನು ಮಾಡೋಣ. ಜನರೆಲ್ಲರೂ ಆತನ ಸುತ್ತಲು ಕುಳಿತುಕೊಂಡಿದ್ದಾಗ, ಕೆಲವು ಧಾರ್ಮಿಕ ನಾಯಕರು ಅತ್ಯಂತ ಕೆಟ್ಟ ಪಾಪವಾದ, ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಸ್ತ್ರೀಯನ್ನು ಅಲ್ಲಿಗೆ ಕರೆದುಕೊಂಡು ಬಂದರು. ಮತ್ತು ಆಕೆಯನ್ನು ಜನರ ಮಧ್ಯದಲ್ಲಿ ನಿಲ್ಲಿಸಿದರು.
ಈಗ ಸ್ತ್ರೀಯನ್ನು ಮಾಡೋಣ.
ದೊಡ್ಡ ಜನರ ಗುಂಪಿನ ಎದುರಿನಲ್ಲಿ ಆಕೆಯ ಪಾಪವನ್ನು ಗಟ್ಟಿಯಾಗಿ ಹೇಳಿದಾಗ ಆಕೆಗೆ ಹೇಗೆ ಅನ್ನಿಸಿರಬಹುದು? ಆಕೆಗೆ ಬಹಳ ಹತಾಶೆಯಾಗಿರಬಹುದು, ಅಲ್ಲವೇ? ಈಗ ನಿಮ್ಮ ಸ್ತ್ರೀಯನ್ನು ಸ್ವಲ್ಪ ಬಾಗಿಸಿರಿ, ಅಂದರೆ ಆಕೆ ಹತಾಶೆಗೊಂಡಿರುವಂತೆ, ನಾಚಿಕೆಗೆ ಒಳಗಾಗಿರುವಂತೆ ತೋರಿಸಿರಿ. ಈಗ ಆಕೆಗೆ ದುಃಖದ ಮುಖವನ್ನು ತೋರಿಸಿರಿ.
ಅವರು ಯೇಸು ಕ್ರಿಸ್ತನಿಗೆ ಈಗ ಏನು ಮಾಡಬೇಕು ಎಂದು ಕೇಳಿದರು. ಅವರು ಎಲ್ಲರಿಗೂ ಆಕೆಯ ಪಾಪವನ್ನು ಹೇಳಿದರು ಮತ್ತು ಧರ್ಮಶಾಸ್ತ್ರದ ಪ್ರಕಾರ ಆಕೆಯನ್ನು ಕೊಲ್ಲಬೇಕೆಂದು ತಿಳಿಸಿದರು. ಅದು ನಿಜ; ಆಕೆಯ ಪಾಪಕ್ಕೆ ಮರಣದಂಡನೆ ಸಹಜವಾದ ಶಿಕ್ಷೆಯಾಗಿತ್ತು! ಅವರೆಲ್ಲರೂ ಕಲ್ಲುಗಳನ್ನು ಕೈಗಳಲ್ಲಿ ಎತ್ತುಕೊಂಡಿದ್ದರು ಮತ್ತು ಕಲ್ಲೆಸೆದೇ ಆಕೆಯನ್ನು ಕೊಲ್ಲಬೇಕೆಂದು ಯೋಚಿಸಿದ್ದರು!
[ಈಗ ಆಕೆಯ ಮೇಲೆ ಎಸೆಯಲು ಅವರು ತೆಗೆದುಕೊಂಡಿದ್ದಂಥ ಕಲ್ಲುಗಳನ್ನು ಮಾಡಿರಿ.]
ಸತ್ಯವೇದವು ಹೇಳುವದೇನೆಂದರೆ:
"ಆದರೆ ಯೇಸು ಬೊಗ್ಗಿಕೊಂಡು ಬೆರಳಿನಿಂದ ನೆಲದ ಮೇಲೆ ಬರೆಯುತ್ತಾ ಇದ್ದನು. ಅವರು ಆತನನ್ನು ಬಿಡದೆ ಕೇಳುತ್ತಿರುವಾಗ ಆತನು ನೆಟ್ಟಗೆ ಕೂತುಕೊಂಡು – ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ ಎಂದು ಹೇಳಿ ತಿರಿಗಿ ಬೊಗ್ಗಿಕೊಂಡು ನೆಲದ ಮೇಲೆ ಬರೆಯುತ್ತಾ ಇದ್ದನು."

ಈಗ ಆಟದ ಜೇಡಿಮಣ್ಣಿನಿಂದ ಯೇಸು ಕ್ರಿಸ್ತನನ್ನು ಮಾಡೋಣ.
"ಆ ಮಾತನ್ನು ಕೇಳಿ ತಾವೇ ಪಾಪಿಗಳೆಂದು ಮನಸ್ಸಿನಲ್ಲಿ ತಿಳುಕೊಂಡು ಹಿರಿಯರು ಮೊದಲುಗೊಂಡು ಕಿರಿಯರವರೆಗೂ ಒಬ್ಬರ ಹಿಂದೊಬ್ಬರು ಹೊರಗೆ ಹೋದರು; ಯೇಸು ಒಬ್ಬನೇ ಉಳಿದನು, ಮತ್ತು ನಡುವೆ ನಿಂತಿದ್ದ ಹೆಂಗಸು ಅಲ್ಲೇ ಇದ್ದಳು. ಯೇಸು ನೆಟ್ಟಗೆ ಕೂತುಕೊಂಡು ಆ ಸ್ತ್ರೀಯನ್ನೇ ಹೊರತು ಯಾರನ್ನೂ ನೋಡದೆ ಆಕೆಗೆ – ಅಮ್ಮಾ, ನಿನ್ನ ಮೇಲೆ ತಪ್ಪುಹೊರಿಸುವವರು ಎಲ್ಲಿದ್ದಾರೆ? ನಿನಗೆ ಯಾರೂ ಶಿಕ್ಷೆಯನ್ನು ವಿಧಿಸಲಿಲ್ಲವೋ? ಅಂದನು. ಯಾರೂ ವಿಧಿಸಲಿಲ್ಲ, ಸ್ವಾಮೀ, ಅಂದಳು.
ಯೇಸು ಆಕೆಗೆ – ನಾನೂ ನಿನಗೆ ಶಿಕ್ಷೆ ವಿಧಿಸುವದಿಲ್ಲ; ಹೋಗು, ಇನ್ನು ಮೇಲೆ ಪಾಪಮಾಡಬೇಡ ಎಂದು ಹೇಳಿದನು."
[ವಿದ್ಯಾರ್ಥಿಗಳಿಂದ ಜೇಡಿಮಣ್ಣನ್ನು ಹಿಂದಕ್ಕೆ ತೆಗೆದುಕೊಳ್ಳಿರಿ.]



## ಆಟ ಕಂಠಪಾಠ ವಚನ ಸಮಯ

ಕಂಠಪಾಠ ವಚನವನ್ನು ಫಲಕದ ಮೇಲೆ ಬರೆಯಿರಿ. ವಚನವನ್ನು ಪುನರಾವರ್ತಿಸುವಂತೆ ಹೇಳುವ ಪ್ರತಿಬಾರಿಯೂ ವಚನದ ಒಂದೊಂದು ಪದವನ್ನು ಅಳಿಸಿ ಹಾಕಿರಿ. ಒಂದುವೇಳೆ ನಿಮ್ಮ ಬಳಿ ಬಿಳಿ ಫಲಕ ಅಥವಾ ಬಳಪದ ಫಲಕ ಇಲ್ಲದೆ ಹೋದರೆ, ವಚನವನ್ನು ವ್ಯಕ್ತಿಗತ ನೋಟ್ ಕಾರ್ಡ್ ಅಥವಾ ಹಾಳೆಗಳ ಮೇಲೆ ಬರೆಯಿರಿ. ಪ್ರತಿಬಾರಿ ಪದವನ್ನು ತೆಗೆಯುವಾಗಲೂ, ಸುಮ್ಮನೆ ಹಾಳೆಯನ್ನು ಮಡಚಿಸಿರಿ ಆಗ ವಾಕ್ಯವನ್ನು ಓದಲು ಆಗುವದಿಲ್ಲ. ಪೂರ್ತಿ ವಾಕ್ಯವನ್ನು ಅಳಿಸುವ, ಮುಚ್ಚುವ, ಅಥವಾ ಮಡವುಚ ತನಕ ಹೀಗೇ ಮಾಡಿರಿ ಮತ್ತು ಮಕ್ಕಳು ಓದುತ್ತಿರುವ ರೀತಿಯಲ್ಲಿ ಅದನ್ನು ಹೇಳಬೇಕು.



## ತಿಂಡಿ ಜೆಮ್ಸ್ ಗಳಿಂದ ಕಪ್ ಕೇಕ್ಸ್

1. ಕೇಕ್ಸ್ ಮಿಶ್ರಣ ಮಾರ್ಗದರ್ಶನಗಳನ್ನು ಅನುಸರಿಸುತ್ತಾ, ನಿಮ್ಮ ಮಕ್ಕಳಿಗೆ ಸಾಕಾಗುವಷ್ಟು ಕಪ್ ಕೇಕ್ಸ್ ತಯಾರಿಸಿರಿ ಅಥವಾ ಮೇಲ್ಭಾಗದಲ್ಲಿ ಸಕ್ಕರೆ ಅಲಂಕಾರದ ಮೂಲಕ ಮಾತ್ರವೇ ಮಾಡಲಾಗಿರುವ ಕೇಕ್ ಗಳನ್ನು ಬೇಕರಿಯಿಂದ ತರಿಸಿರಿ.
2. ಕ್ಯಾಂಡಿ ಜೆಮ್ಸ್ ಖರೀದಿಸಿರಿ

ನೀರುಗಡ್ಡೆ ಇದ್ದು ಅಥವಾ ಇಲ್ಲದೆ, ಮೇಲೆ ಜೆಮ್ಸ್ ಹಾಗಿರುವ ಸ್ವಾದಿಷ್ಟ ಕಪ್ ಕೇಕ್ ಇಂದು ನಿಮ್ಮ ವಿದ್ಯಾರ್ಥಿಗಳು ಸವಿಯುವವರಾಗಿದ್ದಾರೆ. ಭಾರತದಲ್ಲಿ ಸುಲಭವಾಗಿ ದೊರೆಯುವ ಜೆಮ್ಸ್ ಕ್ಯಾಂಡಿ ಮೂಲಕ ಕಪ್ ಕೇಕ್ ಗಳನ್ನು ಅಂಕರಿಸಬಹುದು. ಮಕ್ಕಳು ತಮಗೆ ಇಷ್ಟವಾಗುವ ವಿವಿಧ ಆಕಾರ ಮತ್ತು ಬಣ್ಣದಲ್ಲಿ ಜೆಮ್ಸ್ ಕ್ಯಾಂಡಿ ಇಡುವ ಮೂಲಕ ಸಂತೋಷಿಸಬಹುದು. ನೀವು ಕಪ್ ಕೇಕ್ ಗಳನ್ನು ಮಾಡಬಹುದು ಅಥವಾ ನಿಮ್ಮ ಸ್ಥಳೀಯ ಬೇಕರಿಗೆ ಹೋಗಿ ಚಿತ್ರದಲ್ಲಿ ತೋರಿಸಿರುವ ಪ್ರಕಾರ ಕೆಲವು ಸುಲಭದ ಇಡ್ಲಿಗಳನ್ನು ಖರೀದಿಸಬಹುದು.






## ಕರಕುಶಲ 1.ಬಾಗಿಲಿಗೆ ತೂಗುಹಾಕುವಂಥದ್ದು

**ಸಾಮಗ್ರಿಗಳು:**
-ಪ್ರತಿಯೊಬ್ಬ ವಿದ್ಯಾರ್ಥಿಗಾಗಿ ಅರಮನೆಯ ಪ್ರತಿಯನ್ನು ಮುದ್ರಿಸಿರಿ
-ಕತ್ತರಿಗಳು
-ಗೋಂದು
-ಉಡುಗೊರೆ ರಿಬ್ಬನ್ ಅಥವಾ ಗುಂಗುರು ರಿಬ್ಬನ್
-ಪೇಪರ್ ಪಂಚ್
-ಬಣ್ಣಗಳು

ಸೂಚನೆಗಳು:
ಹಂತ 1. ಅರಮನೆಗೆ ಬಣ್ಣ ಹಚ್ಚಿರಿ/ಅಲಂಕಾರ ಮಾಡಿರಿ.
ಹಂತ 2. ಚುಕ್ಕೆಗಳಿರುವ ಗೆರೆಗನುಸಾರವಾಗಿ ಕತ್ತರಿಸಿರಿ
ಹಂತ 3. ಪ್ರತ್ಯೇಕವಾದ ರಂಧ್ರಗಳು ಬೇಕಿರುವ ಕಡೆಗಳಲ್ಲಿ ಮಾತ್ರವೇ ಪಂಚ್ ಮಾಡಿರಿ, ಇದು ಆಯ್ಕೆಯಾಗಿದೆ.
ಹಂತ 4. ರಂಧ್ರಗಳೊಳಗೆ ರಿಬ್ಬನ್ ಕಟ್ಟಿರಿ. ನಿಮ್ಮ ಅದ್ಭುತವಾದ ಬಾಗಿಲಿಗೆ ತಕಲಾಗುವ ಸಾಧನ ಸಿದ್ಧವಾಗಿದೆ.

# ಕರಕುಶಲ **2** – ಬಾಗಿಲಿಗೆ ತಗಲಾಕುವಂಥದ್ದು



# 3 ಜಾಮೀನು

## ಸತ್ಯವೇದದ ಕಥೆ: ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಕೊಟ್ಟನು

## ನಾಟಕ/ಸ್ಕಿಟ್

ಪ್ರಮುಖ ಇನ್ಸಪೆಕ್ಟರ್: ಹೇ, ನೀವಿಬ್ಬರು, ಎದ್ದೇಳಿರಿ!
ಪತ್ಲು: [ನಿದ್ದೆಯಿಂದ ನಿಧಾನವಾಗಿ ಎದ್ದೇಳುತ್ತಾ.]
ಮೋಟು: [ಕೆಳಗಿನಿಂದ ಜಿಗಿಯುತ್ತಾ] ಹೌದು, ಇದೇನಿದು? ನಿನಗೆ ಬೇಸರವಾಗುತ್ತಿದೆಯೇ ಮತ್ತು ಇನ್ನೊಂದು ಕಥೆಯನ್ನು ಕೇಳಬೇಕೆಂದು ಅನ್ನಿಸುತ್ತಿದೆಯೇ?
ಪ್ರಮುಖ ಇನ್ಸಪೆಕ್ಟರ್: ಬೇಡ, ಬೇಡ ದಯವಿಟ್ಟು ಇನ್ನೊಂದು ಕಥೆ ಬೇಡ. ನಿಮಗೊಂದು ಪ್ರಸ್ತಾಪದ ಬಗ್ಗೆ ತಿಳಿಸಲು ನಾನು ಬಂದಿದ್ದೇನೆ.
ಪತ್ಲು: ಪ್ರಸ್ತಾಪಾನಾ? ಇಲ್ಲಿಗೆ ಬಂದು ನಿನ್ನನ್ನು ಭೇಟಿ ಮಾಡುವಂಥ ಸ್ನೇಹಿತರು ಯಾರಾದರು ನಿನಗೆ ಇದ್ದಾರೆಯೇ?
ಮೋಟು: ಒಂದು ನಿಮಿಷ, ಯೋಚಿಸುತ್ತೇನೆ . . . ಯಾರೂ ಇಲ್ಲ.
ಪತ್ಲು: ನನಗೂ ಇಲ್ಲ.
ಮೋಟು: ಬಂದಿರುವವರು ಯಾರು, ಪ್ರಮುಖ ಇನ್ಸಪೆಕ್ಟರ್?
ಪ್ರಮುಖ ಇನ್ಸಪೆಕ್ಟರ್: ಒಬ್ಬ ವ್ಯಕ್ತಿ ಒಂದು ಪ್ರಸ್ತಾಪದೊಂದಿಗೆ ಬಂದಿದ್ದಾನೆ.
ಪತ್ಲು: ಯಾವ ರೀತಿಯ ಪ್ರಸ್ತಾಪ? ಉದ್ಯೋಗದ ಪ್ರಸ್ತಾಪವೇ?
ಪ್ರಮುಖ ಇನ್ಸಪೆಕ್ಟರ್: ಹೌದು, ಸ್ವಲ್ಪ ಹಾಗೆಯೇ ಅಂದುಕೊಳ್ಳಿರಿ.
ಮೋಟು: ಅಯ್ಯೋ, ನಮಗೆ ಯಾವ ಉದ್ಯೋಗವೂ ಬೇಡ, ಅಲ್ಲವೇ, ಪತ್ಲು? [ಪಕ್ಷಿಯಂತೆ ರೆಕ್ಕೆಗಳನ್ನು ಬಡಿಯುತ್ತಾ] ನಾವು ಸ್ವತಂತ್ರವಾಗಿ ಇದ್ದೇವೆ.
ಪ್ರಮುಖ ಇನ್ಸಪೆಕ್ಟರ್: ನೀವು ಇಲ್ಲಿ ಸ್ವತಂತ್ರವಾಗಿ ಇಲ್ಲ ಎಂಬದು ನಿಮಗೂ ಗೊತ್ತಿದೆ. ಬಹುಶಃ ನೀವು ಅತನ ಮಾತುಗಳನ್ನು ಕೇಳಬೇಕು.
ಪತ್ಲು: ಹೇ, ಮೋಟು, ಹೇಗೂ ನಮ್ಮನ್ನು ನೋಡಲು ಯಾರೂ ಬರುವದಿಲ್ಲ; ನಾವು ಅವನ ಪ್ರಸ್ತಾಪವನ್ನು ಕೇಳಬೇಕು ಅನ್ನಿಸುತ್ತದೆ.
ಪ್ರಮುಖ ಇನ್ಸಪೆಕ್ಟರ್: ಕೆಲವು ವರ್ಷಗಳ ಹಿಂದೆ ನಾನು ಅತನ ಪ್ರಸ್ತಾಪವನ್ನು ಅಂಗೀಕರಿಸಿಕೊಂಡೆನು. ಅದು ಇಲ್ಲಿಯ ತನಕ ಅತ್ಯುತ್ತಮವಾದ ಪ್ರಸ್ತಾಪವಾಗಿದೆ.
ಪತ್ಲು: ಮೋಟು, ಕೇಳಿಸಿಕೊಂಡೆಯಾ? ನಾವೂ ಆತನ ಮಾತನ್ನು ಕೇಳಿಸಿಕೊಳ್ಳೋಣ.
ಮೋಟು: ಏನೋ ನನಗೆ ಗೊತ್ತಿಲ್ಲ.
ಪತ್ಲು: [ಮೋಟುದ ತಲೆಯ ಮೇಲೆ ಒಂದು ಏಟು ಕೊಟ್ಟನು.]
ಮೋಟು: ನಾವು ಕೇಳಿಸಿಕೊಳ್ಳಬೇಕು ಎಂದು ನನಗೂ ಅನ್ನಿಸುತ್ತಿದೆ.
ಪತ್ಲು: ಸರಿ ಆಗಲಿ, ಪ್ರಮುಖ ಇನ್ಸಪೆಕ್ಟರ್, ಆತನನ್ನು ಕರೆದುಕೊಂಡು ಬನ್ನಿರಿ.
ಪ್ರಮುಖ ಇನ್ಸಪೆಕ್ಟರ್: ನೋಡಿ, ಆತನು ಇಲ್ಲಿಗೆ ಬರುವದಿಲ್ಲ, ಬೆಟ್ಟದ ಮೇಲಿರುವ ಅರಮನೆಯಲ್ಲಿರುವ ಆತನ ಬಳಿಗೆ ನೀವೇ ಹೋಗಬೇಕು.
ಪತ್ಲು: ಏನು ನಿನ್ನ ಮಾತಿನ ಅರ್ಥ ನಾವು ಹೊರಗೆ ಹೋಗಬೇಕೇ? ನಾವು ಓಡಿ ಹೋದರೆ ಏನು ಮಾಡುವೆ?
ಪ್ರಮುಖ ಇನ್ಸಪೆಕ್ಟರ್: ನಿಮಗೆ ಅರ್ಥವಾಗಲಿಲ್ಲ, ಅಲ್ಲವೇ? ಆತನು ಈಗಾಗಲೇ ನಿಮಗೆ ಜಾಮೀನು ಕೊಟ್ಟಿದ್ದಾನೆ. ನೀವು ಈಗ ಸ್ವತಂತ್ರವಾಗಿ ಹೋಗಬಹುದು. ಆತನು ನಿಮಗಾಗಿ ದೊಡ್ಡ ತ್ಯಾಗವನ್ನು ಮಾಡಿದ್ದಾನೆ.
ಮೋಟು: [ಬಹಳ ಸಂತೋಷವಾಗಿ ಮಾತನಾಡುತ್ತಾ] ಸಿಕ್ಕಿಕೊಂಡಿರುವ ನಾವು ಮೂರ್ಖರು ಎಂಬದಾಗಿ ನಾನು ಯೋಚಿಸುತ್ತಿದ್ದೆನು. ಈಗ ಮೂರ್ಖ ಯಾರು ಎಂದು ನೋಡು. ಒಂದುವೇಳೆ ನಾವು ಅಲ್ಲಿಗೆ ಹೋಗಲಿಲ್ಲವೆಂದರೆ ಮತ್ತು ಅವನ ಪ್ರಸ್ತಾಪವನ್ನು ಕೇಳಲಿಲ್ಲವೆಂದರೆ ಏನಾಗುವದು ಯೋಚಿಸು?
ಪತ್ಲು: ಅಬ್ಬಾ, ಹೇಗೋ ಇಲ್ಲಿಂದ ಹೊರಗೆ ಹೋದರೆ ಸಾಕು. ಈಗಾಗಲೇ ನನ್ನ ತಲೆ ಕೂದಲ ನಡುವೆ ಗಾಳಿ ಆಡುವ ಅನುಭವ ನನಗೆ ಆಗುತ್ತಿದೆ. ಹೋಗೋಣ.
ಮೋಟು: ಅರಮನೆಗಾ? ಅಥವಾ ಬಚ್ಚಿಟ್ಟುಕೊಳ್ಳುವದಕ್ಕಾ?
ಪತ್ಲು: ಈಗ ನಾವು ಅಲ್ಲಿಗೆ ಹೋಗದೆ ಹೋದರೆ ಆತನು ನಮ್ಮನ್ನು ಹೇಗೆ ಹುಡುಕುವನು? ಅಥವಾ ವಿಚಾರಣೆಗೆ ಹೋಗದೆ ಇದ್ದರೆ? ಆತನು ರಾಜನಿಗೆ ಅಥವಾ ರಾಣಿಗೆ ಏನು ಹೇಳುವನು?
ಪ್ರಮುಖ ಇನ್ಸಪೆಕ್ಟರ್: "ಆತನು ರಾಜನಿಗೆ ಅಥವಾ ರಾಣಿಗೆ ಏನು ಹೇಳುವನು?" ಎಂಬ ನಿನ್ನ ಮಾತಿನ ಅರ್ಥ ಏನು. ಆತನೇ ರಾಜ. ನೀನು ಮಾಡಿರುವ ಕಾರ್ಯಗಳೆಲ್ಲವೂ ಆತನಿಗೆ ಗೊತ್ತಿದೆ, ಮತ್ತು ಒಂದುವೇಳೆ ನೀನು ಹೋಗದೆ ಇದ್ದರೂ ಆತನಿಗೆ ಗೊತ್ತಾಗುತ್ತದೆ. ಆದ್ದರಿಂದಲೇ ಆತನು ನಿನಗಾಗಿ ಒಳ್ಳೆಯ ಪ್ರಸ್ತಾಪವನ್ನು ತಂದಿದ್ದಾನೆ.
ಪತ್ಲು: ಅರಸನು ನಮಗೆ ಜಾಮೀನು ಕೊಟ್ಟಿದ್ದಾನೆ? ತಪ್ಪಿಸಿಕೊಳ್ಳಬೇಕೆಂಬ ನಮ್ಮ ಯೋಚನೆಯಲ್ಲಿ ಇಲ್ಲಿ ತಿರುವು ಉಂಟಾಗುತ್ತದೆ, ಅಲ್ಲವೇ?
ಮೋಟು: ಹೌದು, ನನಗೂ ಹಾಗೆಯೇ ಅನ್ನಿಸುತ್ತದೆ. ನಾವು ಹೋಗಿ ಆತನ ಮಾತು ಕೇಳಬೇಕು ಎಂದು ನನಗೂ ಅನ್ನಿಸುತ್ತಿದೆ. [ತಲೆಯ ಮೇಲೆ ಹೊಡೆತ ಬೀಳುವದೇನೋ ಎಂದು ಹಿಂಜರಿದನು ಆದರೆ ಪತ್ಲು ಅದನ್ನು ಗಮನಿಸಲಿಲ್ಲ.]

# ಮುಖ್ಯಪಾಠ

ಮತ್ತಾಯ **26-27**

ನೀವು ಬೇಕಾದವರಾಗಿದ್ದಿರಿ. ನಿಮ್ಮನ್ನು ಕಾರಾಗೃಹದೊಳಗೆ ಹಾಕಲಾಗಿತ್ತು.
ಜನರು ನಿಮ್ಮನ್ನು ಹುಡುಕುತ್ತಾ ಇದ್ದರು. ನಿಮ್ಮನ್ನು ಬಂಧಿಸಿ ಕಾರಾಗೃಹಕ್ಕೆ ಹಾಕಿದರು.
ಆದರೆ ಈಗ ನಿಮಗೆ ಜಾಮೀನು ಕೊಡಲಾಗಿದೆ! ಹೌದು; ನಿಮ್ಮನ್ನು ಬಿಡುಗಡೆ ಮಾಡಲು ಯಾರೋ ಒಬ್ಬರು ನಿಮಗಾಗಿ ಕ್ರಯವನ್ನು ಪಾವತಿಸಿದ್ದಾರೆ! ಆದರೆ ನಿಮಗೆ ನೀವಿನ್ನೂ ಬಿಡುಗಡೆಯಾದಂತೆ ಅನ್ನಿಸುತ್ತಿಲ್ಲ, ಅಲ್ಲವೇ? ನಿಮ್ಮ ಪಾಪಗಳು, ಸುಳ್ಳುಗಳು ಮತ್ತು ತಪ್ಪುಗಳು ಈಗಲೂ ನಿಮ್ಮ ನೆನಪಿನಲ್ಲಿವೆ ಅಲ್ಲವೇ. ಇತ್ತೀಚೆಗೆ ನೀವು ಮಾಡಿರುವ ಯಾವುದೇ ಕಾರ್ಯದಿಂದ ನೀವು ಮತ್ತು ನಿಮ್ಮ ಸ್ನೇಹಿತರು ಈಗಲೂ ತೊಂದರೆಯಲ್ಲಿರಬಹುದು. ನಿಜವಾಗಿ ಹೇಳುವದಾದರೆ, ನೀವು ಮನೆಗೆ ಹೋದ ನಂತರ ನಿಮಗೆ ಶಿಕ್ಷೆ ಆಗಬಹುದು!
ಇಂದಿನ ನಮ್ಮ ಸತ್ಯವೇದದ ಪ್ರಮುಖ ವಚನ, "ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ." ರೋಮಾ 5:8
ಮೊದಲನೆಯ ಪಾಠ ನಿಮಗೆ ನೆನಪಿದೆಯೇ? ನಾವೆಲ್ಲರೂ ಪಾಪಮಾಡಿದ್ದೇವೆ, ಪ್ರತಿಯೊಬ್ಬರೂ!
ನೆನ್ನೆಯ ವಿಷಯ ನಿಮಗೆ ನೆನಪಿದೆಯೇ? ನಾವೆಲ್ಲರೂ ಬಂಧಿಸಲ್ಪಟ್ಟಿದ್ದೇವೆ ಮತ್ತು ಸೆರೆಗೆ ಹಾಕಲ್ಪಟ್ಟಿದ್ದೇವೆ.
ಆದರೂ, ಆ ಪಾಪಕ್ಕೆ ನಿಜವಾದ ಕ್ರಯವನ್ನು ಪಾವತಿಸಲಾಗಿದೆ. ಇಂದಿನ ನಾಟಕ/ಸ್ಕಿಟ್ ನಲ್ಲಿ ನೋಡಿದಂತೆಯೇ, ಅವರಿಗೆ ಜಾಮೀನು ಕೊಡಲಾಯಿತು ಮತ್ತು ಅವರು ಪ್ರಸ್ತಾಪವನ್ನು ಅಂಗೀಕರಿಸಿಕೊಂಡರು.
ನೀವು ಮುರಿದಿರುವ ಅಥವಾ ಕದ್ದುಕೊಂಡಿರುವ ಸ್ನೇಹವನ್ನು ಮತ್ತೆ ಪಡೆಯಲು ಎಂದಾದರು ಏನಾದರು ಪಾವತಿಸಿದ್ದೀರೋ? ಅದು ನಾವು ಜನರ ವಸ್ತುಗಳಲ್ಲಿ ಏನಾದರೂ ಹಾಳುಮಾಡಿದ್ದರೆ ನಮ್ಮ ಸಂಬಂಧವನ್ನು ಸರಿಪಡಿಸಿಕೊಳ್ಳಲು ಸಹಜವಾಗಿ ಕೊಡುವ ಕ್ರಯವಾಗಿರುತ್ತದೆ.
ನಾವೂ ಕ್ರಯ ಪಾವತಿಸಬೇಕೆಂದು ದೇವರು ಬಯಸುತ್ತಾನೆ. ಪಾಪ ಮಾಡಿರುವವರೆಲ್ಲರೂ ದೇವರೊಂದಿಗೆ ತಮ್ಮ ಸಂಬಂಧವನ್ನು ಸರಿಪಡಿಸಿಕೊಳ್ಳಬೇಕು.
ಆದರೆ ದೇವರು ಪ್ರೀತಿಸ್ವರೂಪನು ಮತ್ತು ಆತನೊಂದಿಗಿನ ನಮ್ಮ ಸಂಬಂಧವನ್ನು ನಾವು ಸರಿಪಡಿಸಿಕೊಳ್ಳಲು ನಮಗಾಗಿ ಮಾರ್ಗವನ್ನು ಸಿದ್ಧಮಾಡಿದ್ದಾನೆ.

ಯೇಸು ಕ್ರಿಸ್ತನು ತನಗೆ ಹತ್ತಿರದ ಸ್ನೇಹಿತರಾಗಿದ್ದ ತನ್ನ ಶಿಷ್ಯರೊಂದಿಗೆ ಕಡೇ ಭೋಜನ ಮಾಡಲು ಕೂತುಕೊಂಡನು.
ಆ ಭೋಜನದಲ್ಲಿ ಯೇಸು ಕ್ರಿಸ್ತನನ್ನು ಅಲ್ಲಗಳೆಯುವ ಇಬ್ಬರು ವ್ಯಕ್ತಿಗಳೂ ಇದ್ದರು. ಊಟವಾದ ನಂತರ, ಯೇಸು ಕ್ರಿಸ್ತನನ್ನು ಶಿಲುಬೆಗೆ ಜಡಿದು ಕೊಂದ ಜನರಿಗೆ ಹಿಡಿದುಕೊಡುವ ಮೂಲಕ ಯೂದನು ಆತನನ್ನು ಅಲ್ಲಗಳೆದನು. ಅವರು ಯೇಸು ಕ್ರಿಸ್ತನನ್ನು ಹಿರೀಸಭೆಯಲ್ಲಿ ವಿಚಾರಿಸುತ್ತಾ ಇದ್ದಾಗ, ಯಾರೋ ಒಬ್ಬರು ಪೇತ್ರನಿಗೆ ನೀನು ಸಹ ಯೇಸು ಕ್ರಿಸ್ತನ ಜೊತೆಯಲ್ಲಿ ಇದ್ದವನು ಎಂದು ಹೇಳಿದರು. ಆಗ ಪೇತ್ರನು ಒಮ್ಮೆಯಲ್ಲ ಮೂರು ಸಲ "ಇಲ್ಲ" ಎಂದು ಹೇಳಿದನು! ಯೇಸು ಕ್ರಿಸ್ತನು ಮೊದಲೇ ಹೇಳಿದ್ದಂತೆ, ಪೇತ್ರನು ಮೂರನೆಯ ಸಲ ಯೇಸು ಕ್ರಿಸ್ತನನ್ನು ಅಲ್ಲಗಳೆದಾಗ ಕೋಳಿ ಕೂಗಿತು. ಯೇಸು ಕ್ರಿಸ್ತನನ್ನು ಅಲ್ಲಗಳೆಯುವ ಮೂಲಕ ಅವರಿಬ್ಬರೂ ಪಾಪ ಮಾಡಿದರು. ನಮ್ಮ ಪ್ರತಿಯೊಂದು ಪಾಪಗಳಂತೆಯೇ, ಆ ಎರಡು ಪಾಪಗಳಿಗೆ ಮರಣ ದಂಡನೆಯೇ ಶಿಕ್ಷೆಯಾಗಿತ್ತು.

ಈ ಇಬ್ಬರು ಯೇಸು ಕ್ರಿಸ್ತನನ್ನು ಅಲ್ಲಗಳೆದ ನಂತರ, ಅತನ ವಿಚಾರಣೆಯ ಸಮಯದಲ್ಲಿ ಜನರ ದೊಡ್ಡ ಗುಂಪು ಸೇರಿ ಬಂದಿತು. ಅವರು ಆತನಿಗೆ ಮರಣಶಿಕ್ಷೆ ಆಗಬೇಕೆಂದು ಒತ್ತಾಯ ಮಾಡಿದರು. ನಾವು ನಮ್ಮ ಸ್ವಂತ ಪಾಪಗಳಿಗಾಗಿ ಸಾಯಬಾರದೆಂಬ ಕಾರಣಕ್ಕೆ, ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಸತ್ತನು. ಆತನ ಮರಣವು ಪ್ರತಿಯೊಬ್ಬರನ್ನು ಅವರ ಪಾಪಗಳಿಗಾಗಿ ಕ್ಷಮಿಸಲು ಶಕ್ತವಾಗಿತ್ತು ಯಾಕಂದರೆ ಆತನು ಪರಿಪೂರ್ಣನಾಗಿದ್ದನು. ದೇವರೊಂದಿಗೆ ನಮಗಿದ್ದ ಸಂಬಂಧವನ್ನು ಯೇಸು ಕ್ರಿಸ್ತನು ಬದಲಾಯಿಸಿದನು. ಈಗ, ಪರಿಪೂರ್ಣರಾಗಿರಲು ಪ್ರಯತ್ನಿಸುವ ಬದಲು, ನಮ್ಮ ಪಾಪಗಳಿಗಾಗಿ ಆತನು ಸತ್ತನು ಎಂಬದನ್ನು ಅಂಗೀಕರಿಸಿಕೊಳ್ಳಬೇಕೋ ಬೇಡವೋ ಎಂಬ ಆಯ್ಕೆಯನ್ನು ನಾವು ಮಾಡಿಕೊಳ್ಳಬೇಕು. ಆತನ ಮರಣವು ನಮ್ಮ ಅಪೂರ್ಣತೆಯನ್ನು ಮುಚ್ಚಿಹಾಕುವಂಥದ್ದಾಗಿದೆ!

ಯೂದ ಮತ್ತು ಪೇತ್ರ ಇಬ್ಬರೂ ಪಾಪ ಮಾಡಿದರು. ಯೂದನು ಯೇಸು ಕ್ರಿಸ್ತನ ತ್ಯಾಗವನ್ನು ಅಂಗೀಕರಿಸಿಕೊಳ್ಳುವ ಆಯ್ಕೆಯನ್ನು ಮಾಡಲಿಲ್ಲ, ಆದರೆ ಪೇತ್ರನು ಅದನ್ನು ಅಂಗೀಕರಿಸಿಕೊಳ್ಳುವ ಆಯ್ಕೆಯನ್ನು ಮಾಡಿದನು. ಯೇಸು ಕ್ರಿಸ್ತನು ಸತ್ತು ಪುನರುತ್ಥಾನಗೊಂಡ ಮೇಲೆ, ತನ್ನ ಶಿಷ್ಯರಿಗೆ ಕಾಣಿಸಿಕೊಂಡನು. ಪೇತ್ರನು ಮೀನು ಹಿಡಿಯಲು ಹೋಗಿದ್ದಾಗ, ಮೂರನೆಯ ಸಲ ಯೇಸುವನ್ನು ನೋಡಿದನು. ಯೇಸು ಕ್ರಿಸ್ತನು ದಡದ ಮೇಲೆ ಕಾಣಿಸಿಕೊಂಡನು, ಶಿಷ್ಯರಿಗೆ ಕೂಡಲೇ ಅದು ಆತನೇ ಎಂದು ಗೊತ್ತಾಯಿತು. ಪೇತ್ರನು ದೋಣಿಯಿಂದ ಜಿಗಿದು ಈಜುತ್ತಾ ಯೇಸು ಕ್ರಿಸ್ತನ ಬಳಿಗೆ ಹೋದನು. ಯೇಸು ಕ್ರಿಸ್ತನು ಪೇತ್ರನ ಪಾಪವನ್ನು ಕ್ಷಮಿಸಿದನು ಮತ್ತು ಅವನಿಗೆ "ನನ್ನನ್ನು ಹಿಂಬಾಲಿಸು" ಎಂದು ಹೇಳಿದನು.
ಯಾರನ್ನು ಅನುಕರಿಸುವ ಆಯ್ಕೆಯನ್ನು ನೀವು ಮಾಡಿಕೊಳ್ಳುವಿರಿ? ತನ್ನ ಸ್ವಂತ ಪಾಪಗಳನ್ನು ಹೊತ್ತುಕೊಳ್ಳುವ ಆಯ್ಕೆ ಮಾಡಿಕೊಂಡ ಯೂದನಂತೆ ಇರುವಿರೋ? ಅಥವಾ ಪಾಪ ಮಾಡಿದ ನಂತರ, ಯೇಸು ಕ್ರಿಸ್ತನ ಬಳಿಗೆ ಬಂದು ಅತನನ್ನು ಹಿಂಬಾಲಿಸುವ ಆಯ್ಕೆಯನ್ನು ಮಾಡಿದಂಥ ಪೇತ್ರನಂತೆ ಇರುವಿರೋ?

ನಾವು ಮಾಡಿದ ಪಾಪಗಳಿಗಾಗಿ ಯೇಸು ಕ್ರಿಸ್ತನು ಪ್ರಾಣ ಕೊಟ್ಟನು ಮತ್ತು ದೇವರೊಂದಿಗಿನ ನಮ್ಮ ಸಂಬಂಧವನ್ನು ಸರಿಪಡಿಸಿಕೊಳ್ಳಲು ಮಾರ್ಗವನ್ನು ಸಹ ಸಿದ್ಧಮಾಡಿದ್ದಾನೆ.
ನಾವೂ, ಯೇಸು ಕ್ರಿಸ್ತನನ್ನು ಹಿಂಬಾಲಿಸಬಹುದು, ಮತ್ತು ನಮ್ಮ ಪಾಪಗಳಿಗೆ ಅರ್ಹವಾದ ಶಿಕ್ಷೆಯನ್ನು ಹೊಂದದೆ ಇರಬಹುದು.
ನಿಮಗೆ ಇದು ಬೇಕೇ?
ಪ್ರಾರ್ಥನೆ ಮಾಡೋಣ.

"ಯೇಸು ಕ್ರಿಸ್ತನೇ, ಶಿಲುಬೆಯ ಮೇಲೆ ಪ್ರಾಣ ಕೊಟ್ಟದ್ದಕ್ಕಾಗಿ ಸ್ತೋತ್ರ ಆದ್ದರಿಂದ ನಾನು ನನ್ನ ಸ್ವಂತ ಪಾಪಗಳಿಗೆ ಸಾಯ ಬೇಕಾಗಿಲ್ಲ. ದಯವಿಟ್ಟು ನನ್ನ ಪಾಪಗಳನ್ನು ಕ್ಷಮಿಸು. ನಾನು ನಿನ್ನನ್ನು ಹಿಂಬಾಲಿಸುತ್ತೇನೆ. ಧನ್ಯವಾದಗಳು."
ಇಂದಿನ ನಾಟಕ/ಸ್ಕಿಟ್ ನಂತೆಯೇ, ನನ್ನನ್ನು ಮತ್ತು ನಿಮ್ಮನ್ನು ಕಾರಾಗೃಹದಿಂದ ಬಿಡಿಸಲಾಗಿದೆ, ಮತ್ತು ನಾವು ಒಂದಾಗುವ ಅರಸನ ಪ್ರಸ್ತಾಪವನ್ನು ನಮಗೆ ಅಂಗೀಕರಿಸಿಕೊಂಡಿದ್ದೇವೆ. ಆದರೆ ಇಲ್ಲಿಗೆ ಕಥೆ ಮುಗಿಯುವದಿಲ್ಲ. ನಾಳೆ ನಾವು ಹೆಚ್ಚಿನ ನಾಟಕವನ್ನು ನೋಡೋಣ ಮತ್ತು ದೇವರ ಬಗ್ಗೆ ಹೆಚ್ಚಾಗಿ ಕಲಿತುಕೊಳ್ಳೋಣ.

# ಕಂಠಪಾಠ ವಚನ


" ಆದರೆ ನಾವಿನ್ನೂ ಪಾಪಿಗಳಾಗಿರುವಾಗಲೇ ಕ್ರಿಸ್ತಯೇಸು ನಮಗೋಸ್ಕರ ಪ್ರಾಣತ್ಯಾಗ ಮಾಡಿದರು. ಇದರಿಂದ ನಮ್ಮ ಮೇಲೆ ದೇವರಿಗಿರುವ ಪ್ರೀತಿ ಎಷ್ಟೆಂದು ವ್ಯಕ್ತವಾಗುತ್ತದೆ."
ರೋಮನರಿಗೆ 5:8


# ಮತದಾನ

ಯೇಸು ಕ್ರಿಸ್ತನು ಪ್ರಾಣ ಕೊಡುವಂತೆ ಮಾಡಿದವರು ಯಾರು?

*ಪೊಂತ ಪಿಲಾತನು ಆತನಿಗೆ ಮರಣ ಶಿಕ್ಷೆಯನ್ನು ವಿಧಿಸಿದನು. ಸಿಪಾಯಿಗಳು ಅದನ್ನು ನೆರವೇರಿಸಿದರು.

*ನಮ್ಮ ಪಾಪಗಳಿಗೆ ಕ್ರಯವಾಗಿ ಶಿಲುಬೆಯ ಮೇಲೆ ಪ್ರಾಣ ಕೊಡುವಂತೆ ದೇವರು ಆತನಿಗೆ ಹೇಳಿದನು. ಯೇಸು ಕ್ರಿಸ್ತನು ದೇವರಿಗೆ ವಿಧೇಯನಾದನು ಮತ್ತು ಪ್ರಾಣ ಕೊಡುವ ಆಯ್ಕೆ ಮಾಡಿಕೊಂಡನು; ಯಾರೂ ಆತನಿಗೆ ಅದನ್ನು ವಿಧಿಸಲಿಲ್ಲ.



# ದಿನ 3 ವಿದ್ಯಾರ್ಥಿ ಪುಸ್ತಕಗಳು

## ದೊಡ್ಡ ಮಕ್ಕಳಿಗೆ ಪ್ರಶ್ನೆಗಳು ಮತ್ತು ಉತ್ತರಗಳು


**1. ಜಾಮೀನು ಹಣ ಪಾವತಿಸುವದು ಅಂದರೆ ಏನು? ವಿವಿಧ ಅಪರಾಧಗಳಿಗೆ ಎಷ್ಟು ಜಾಮೀನು ಕೊಡಬೇಕು?**
ಆರೋಪಕ್ಕೆ ಒಳಗಾಗಿರುವ ವ್ಯಕ್ತಿ ನ್ಯಾಯಾಲಯದಲ್ಲಿ ಹಾಜರಾಗುವನು ಮತ್ತು ತನ್ನ ಅಪರಾಧದಿಂದ ತಪ್ಪಿಸಿಕೊಳ್ಳಲು ಎಲ್ಲಿಗೂ ಓಡಿಹೋಗದಂತೆ ಮತ್ತು ಅಡಗಿಕೊಳ್ಳದಂತೆ ಇರಲು ಭರವಸೆಯಾಗಿ ಕೊಡುವದು ಜಾಮೀನು ಹಣವಾಗಿದೆ. ಯು ಎಸ್ ಎ ಯಲ್ಲಿ ಪ್ರತಿಯೊಂದು ರಾಜ್ಯವು ಕನಿಷ್ಠ ಮತ್ತು ಗರಿಷ್ಠಗಳಿಗೆ ಮಾರ್ಗದರ್ಶನಗಳನ್ನು ನಿಗದಿಪಡಿಸುತ್ತದೆ. ಸಹಜವಾಗಿ 10% ರಿಂದ 20% ನಷ್ಟ ಪರಿಹಾರವನ್ನು ಕೊಡಬೇಕಾಗುತ್ತದೆ. ನ್ಯಾಯಾಲಯದ ದಿನಾಂಕದಂದು ಹಾಜರಾಗದೆ ಹೋದರೆ ಸಮರ್ಥನೆಗೆ ಪ್ರಯತ್ನಿಸುವವನು ಹೆಚ್ಚಾಗಿಯೂ ಪಾವತಿಸಬೇಕಾಗುತ್ತದೆ.
ಮತ್ತಾಯ 18:25-34

**2.ಯೇಸು ಕ್ರಿಸ್ತನು ಏನನ್ನು ಪಾವತಿಸಬೇಕಾಯಿತು? ಆತನು ಯಾಕೆ ಪಾವತಿಸಬೇಕಾಯಿತು? ಆತನು ಮಾಡಿದ ಅಪರಾಧವಾದರೂ ಏನು?**
ಯೇಸು ಕ್ರಿಸ್ತನು ನಾವು ಮಾಡುವ ಪಾಪಗಳಿಗಾಗಿ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಕೊಡುವ ಮೂಲಕ ಪಾವತಿಸಿದನು. ಆತನು ಪಾವತಿಸಲು ಕಾರಣ ಏನೆಂದರೆ ಆತನಲ್ಲಿ ನಂಬಿಕೆಯನ್ನಿಡುವ ಮತ್ತು ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವ ಜನರೆಲ್ಲರನ್ನು ವಿಮೋಚಿಸಲು ದೇವರು ಯೋಚಿಸಿದನು. ಆತನು ಯಾವುದೇ ಅಪರಾಧಗಳನ್ನು ಮಾಡಲಿಲ್ಲ ಆದ್ದರಿಂದ ಹಳೆ ಒಡಂಬಡಿಕೆಯಲ್ಲಿರುವಂತೆ ನಿರ್ದೋಷವಾಗಿ ಮತ್ತು ನಿಷ್ಕಳಂಕವಾಗಿದ್ದ ಕುರಿಯನ್ನು ಯಜ್ಞವಾಗಿ ಅರ್ಪಿಸುತ್ತಿದ್ದಂತೆಯೇ ಆತನನ್ನು ಯಜ್ಞವಾಗಿ ಸಮರ್ಪಿತನಾದನು.

**3. ಇಂದಿಗೂ ಅಮಾಯಕ ಜನರು ಅಪರಾಧಿಗಳೆಂದು ಪರಿಗಣಿಸಲ್ಪಟ್ಟು ಸೆರೆಮನೆಗಳಿಗೆ ಹಾಕಲ್ಪಡುತ್ತಾರೆಯೇ ಅಥವಾ ಮರಣ ಶಿಕ್ಷೆಗೆ ಒಳಗಾಗುತ್ತಾರೆಯೇ?**
ದುಃಖದ ವಿಷಯ ಎಂದರೆ, ಕೆಲವೊಮ್ಮೆ ಈಗಲೂ ಆಗುತ್ತದೆ. ಯೇಸು ಕ್ರಿಸ್ತನನ್ನು ಅಲ್ಲಗಳೆಯಲು ನಿರಾಕರಿಸಿದವರನ್ನು ಕೊಂದು ಹಾಕಿರುವಂಥ ಎಷ್ಟೋ ಘಟನೆಗಳು ನಡೆದಿವೆ. ಮತ್ತಾಯ 10:33 "ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು." ಕ್ರಿಸ್ತನನ್ನು ಅಲ್ಲಗಳೆಯದೆ ಕೊಂದರೂ ಸರಿಯೇ ಕ್ರೈಸ್ತರಾಗಿಯೇ ಉಳಿಯುವ ಆಯ್ಕೆಯನ್ನು ರಕ್ತಸಾಕ್ಷಿಗಳು ಮಾಡಿಕೊಂಡರು. ಆದರೂ: ಇಬ್ರಿಯ 11:37 ಹೇಳುವದೇನೆಂದರೆ ಇವೆಲ್ಲವೂ ಹೊಸದಲ್ಲ.

ಮರೆಯಾಗಿರುವ 7 ಶಿಲುಬೆಯನ್ನು ಹುಡುಕಿರಿ ಮತ್ತು ಚಿತ್ರಕ್ಕೆ ಬಣ್ಣ ಹಚ್ಚಿರಿ.





ಎಂಟು ವ್ಯತ್ಯಾಸಗಳನ್ನು ಕಂಡುಹಿಡಿಯಿರಿ

ಶಿಲುಬೆಗೆ ಜಡಿಯಲ್ಪಟ್ಟಿರುವ ಚಿತ್ರದಲ್ಲಿರುವ ಶಿಲುಬೆಗಳನ್ನು ಹುಡುಕಿರಿ. 18 ಇವೆ.



# ವಿದ್ಯಾರ್ಥಿ ಪುಸ್ತಕಗಳು

## ಅವ್ಯವಸ್ಥೆ

ಚಿತ್ರವನ್ನು ತೋರಿಸುವ ಬಾಣದೊಂದಿಗೆ ಪ್ರಾರಂಭಿಸಿರಿ ಮತ್ತು ನಿರ್ಗಮಿಸುವ ಬಾಣದ ಸಾಲುಗಳನ್ನು ದಾಟದಂಥ ತೆರೆದ ಮಾರ್ಗವನ್ನು ತಿಳಿದುಕೊಳ್ಳಿರಿ.

### ಮುಂದುವರೆದ - ಕಷ್ಟ



### ಮಧ್ಯಮ



### ಸುಲಭ



### ಪದ ಹುಡುಕಾಟ

| | | | | | | | | | | | |
|---|---|---|---|---|---|---|---|---|---|---|---|
| ಮ | ಪ್ರ | ಜಾ | ಯ | ಹಿಂ | ಅ | ಕ್ಷ | ಶಿ | ರ | ಕ್ಷ | ಣೆ | ಪ್ರ |
| ರ | ಯೇ | ಪು | ಕ್ಷ | ಜ್ಞ | ಧಿ | ಪು | ಪ್ರ | ಮಾ | ಹಿಂ | ಅ | ಧಿ |
| ಣ | ಮ | ಸು | ಅ | ಪ್ರ | ಮ | ರ | ಪ | ಧಿ | ಸೆ | ಶಿ | ಕ |
| ದಂ | ಪ್ರ | ಕ್ಷ | ಪಾ | ಶಿ | ಜಾ | ಣೆ | ಪೇ | ಮ | ರೆ | ಕ್ರಿ | ಳ್ಳ |
| ಡ | ಜಾ | ಧಿ | ವ | ರ | ಪು | ಹಿಂ | ಅ | ಪು | ಕ್ಷ | ಜಾ | ಅ |
| ನೆ | ಅ | ಮ | ತಿ | ಪ್ರ | ಅ | ಪ | ರಾ | ಧಿ | ಶಿ | ಹಿಂ | ನ್ಯಾ |
| ಧಿ | ಶಿ | ಪ್ರ | ಹಿಂ | ಜಾ | ಶಿ | ಕ್ಷ | ಪ್ರ | ರ | ಪೇ | ಪು | ಯಾ |
| ಪು | ಅ | ಲು | ಶಿ | ಬಾ | ಹಿಂ | ಪು | ಪೇ | ತ್ರ | ಅ | ಧಿ | ಧಿ |
| ಪ್ರಾ | ರ | ಕ್ಷ | ಬೆ | ಪೇ | ಲಿ | ಕ್ರಿ | ನಃ | ಮ | ಪು | ಶಿ | ಪ |
| ಜಾ | ರ್ಥ | ಪು | ಪ್ರ | ನ | ಹಿಂ | ಸು | ಕ್ಷ | ಸ್ಥಾ | ಪ್ರ | ಅ | ತಿ |
| ಧಿ | ಮ | ನೆ | ರ್ಶ | ಅ | ಶಿ | ಜಾ | ಪು | ಧಿ | ಪ | ಮ | ಕ್ಷ |
| ಶಿ | ಅ | ದ | ಧಿ | ಪು | ಪ್ರ | ಕ್ಷ | ಅ | ರ | ಶಿ | ನೆ | ಧಿ |
| ಪ್ರ | ಪ್ರ | ಕ್ರಿ | ಸ್ತ | ನು | ರ | ಜಾ | ಮೀ | ನು | ಮ | ಪು | ಅ |

ಅಪರಾಧಿ
ಸೆರೆ
ಜಾಮೀನು
ನ್ಯಾಯಾಧಿಪತಿ
ಪ್ರದರ್ಶನ
ಪಾವತಿ
ಪುನಃಸ್ಥಾಪನೆ
ಮರಣದಂಡನೆ
ಶಿಲುಬೆ
ರಕ್ಷಣೆ
ಕ್ಷಮಾಪಣೆ
ಯಜ್ಞ
ಹಿಂಬಾಲಿಸು
ಪ್ರಾರ್ಥನೆ
ಪೇತ್ರ
ಯೇಸು
ಕ್ರಿಸ್ತನು
ಕಳ್ಳ

# ಜೇಡಿಮಣ್ಣಿನೊಂದಿಗೆ ಸತ್ಯವೇದದ ವಿಮರ್ಶೆ

ಇಂದಿನ ಸತ್ಯವೇದ ಕಥೆಗಾಗಿ ಮನೆಯಲ್ಲಿಯೇ ಸಿದ್ಧಮಾಡಿರುವ ಜೇಡಿಮಣ್ಣನ್ನು ತೆಗೆದುಕೊಳ್ಳೋಣ!

ಯೇಸು ಕ್ರಿಸ್ತನು ತನಗೆ ಹತ್ತಿರದ ಸ್ನೇಹಿತರಾಗಿದ್ದ, ತನ್ನ ಶಿಷ್ಯರೊಂದಿಗೆ ಕಡೇ ಭೋಜನ ಮಾಡಲು ಕೂತುಕೊಂಡನು. ನಿಮ್ಮ ಜೇಡಿಮಣ್ಣಿನಿಂದ ರೊಟ್ಟಿ ಮತ್ತು ತಟ್ಟೆಯನ್ನು ಮಾಡಿರಿ. ಆ ಭೋಜನದಲ್ಲಿ ಯೇಸು ಕ್ರಿಸ್ತನನ್ನು ಅಲ್ಲಗಳೆಯುವ ಇಬ್ಬರು ವ್ಯಕ್ತಿಗಳೂ ಇದ್ದರು. ಊಟವಾದ ನಂತರ, ಯೇಸು ಕ್ರಿಸ್ತನನ್ನು ಶಿಲುಬೆಗೆ ಜಡಿದು ಕೊಂದ ಜನರಿಗೆ ಹಿಡಿದುಕೊಡುವ ಮೂಲಕ ಯೂದನು ಆತನನ್ನು ಅಲ್ಲಗಳೆದನು. ಅವರು ಯೇಸು ಕ್ರಿಸ್ತನನ್ನು ಹಿರೀಸಭೆಯಲ್ಲಿ ವಿಚಾರಿಸುತ್ತಾ ಇದ್ದಾಗ, ಯಾರೋ ಒಬ್ಬರು ಪೇತ್ರನಿಗೆ ನೀನು ಸಹ ಯೇಸು ಕ್ರಿಸ್ತನ ಜೊತೆಯಲ್ಲಿ ಇದ್ದವನು ಎಂದು ಹೇಳಿದರು. ಆಗ ಪೇತ್ರನು ಒಮ್ಮೆಯಲ್ಲ ಮೂರು ಸಲ "ಇಲ್ಲ" ಎಂದು ಹೇಳಿದನು! ಯೇಸು ಕ್ರಿಸ್ತನು ಮೊದಲೇ ಹೇಳಿದ್ದಂತೆ, ಪೇತ್ರನು ಮೂರನೆಯ ಸಲ ಯೇಸು ಕ್ರಿಸ್ತನನ್ನು ಅಲ್ಲಗಳೆದಾಗ ಕೋಳಿ ಕೂಗಿತು. (ನಿಮ್ಮ ಜೇಡಿ ಮಣ್ಣಿನಿಂದ ಕೋಳಿಯನ್ನು ಮಾಡಿರಿ.) ಯೇಸು ಕ್ರಿಸ್ತನನ್ನು ಅಲ್ಲಗಳೆಯುವ ಮೂಲಕ ಅವರಿಬ್ಬರೂ ಪಾಪ ಮಾಡಿದರು.
ನಮ್ಮ ಪ್ರತಿಯೊಂದು ಪಾಪಗಳಂತೆಯೇ, ಆ ಎರಡು ಪಾಪಗಳಿಗೆ ಮರಣ ದಂಡನೆಯೇ ಶಿಕ್ಷೆಯಾಗಿತ್ತು.

ಈ ಇಬ್ಬರು ಯೇಸು ಕ್ರಿಸ್ತನನ್ನು ಅಲ್ಲಗಳೆದ ನಂತರ, ಅತನ ವಿಚಾರಣೆಯ ಸಮಯದಲ್ಲಿ ಜನರ ದೊಡ್ಡ ಗುಂಪು ಸೇರಿ ಬಂದಿತು. ಅವರು ಆತನಿಗೆ ಮರಣಶಿಕ್ಷೆ ಆಗಬೇಕೆಂದು ಒತ್ತಾಯ ಮಾಡಿದರು. ನಾವು ನಮ್ಮ ಸ್ವಂತ ಪಾಪಗಳಿಗಾಗಿ ಸಾಯಬಾರದೆಂಬ ಕಾರಣಕ್ಕೆ, ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಸತ್ತನು. (ಈಗ ನಿಮ್ಮ ಜೇಡಿಮಣ್ಣಿನಿಂದ ಶಿಲುಬೆಯನ್ನು ಮಾಡಿರಿ). ಆತನ ಮರಣವು ಪ್ರತಿಯೊಬ್ಬರನ್ನು ಅವರ ಪಾಪಗಳಿಗಾಗಿ ಕ್ಷಮಿಸಲು ಶಕ್ತವಾಗಿತ್ತು ಯಾಕಂದರೆ ಆತನು ಪರಿಪೂರ್ಣನಾಗಿದ್ದನು. ದೇವರೊಂದಿಗೆ ನಮಗಿದ್ದ ಸಂಬಂಧವನ್ನು ಯೇಸು ಕ್ರಿಸ್ತನು ಬದಲಾಯಿಸಿದನು. ಈಗ, ಪರಿಪೂರ್ಣರಾಗಿರಲು ಪ್ರಯತ್ನಿಸುವ ಬದಲು, ನಮ್ಮ ಪಾಪಗಳಿಗಾಗಿ ಆತನು ಸತ್ತನು ಎಂಬದನ್ನು ಅಂಗೀಕರಿಸಿಕೊಳ್ಳಬೇಕೋ ಬೇಡವೋ ಎಂಬ ಆಯ್ಕೆಯನ್ನು ನಾವು ಮಾಡಿಕೊಳ್ಳಬೇಕು. ಆತನ ಮರಣವು ನಮ್ಮ ಅಪೂರ್ಣತೆಯನ್ನು ಮುಚ್ಚಿಹಾಕುವಂಥದ್ದಾಗಿದೆ!

ಯೂದ ಮತ್ತು ಪೇತ್ರ ಇಬ್ಬರೂ ಪಾಪ ಮಾಡಿದರು. ಯೂದನು ಯೇಸು ಕ್ರಿಸ್ತನ ತ್ಯಾಗವನ್ನು ಅಂಗೀಕರಿಸಿಕೊಳ್ಳುವ ಆಯ್ಕೆಯನ್ನು ಮಾಡಲಿಲ್ಲ, ಆದರೆ ಪೇತ್ರನು ಅದನ್ನು ಅಂಗೀಕರಿಸಿಕೊಳ್ಳುವ ಆಯ್ಕೆಯನ್ನು ಮಾಡಿದನು. ಯೇಸು ಕ್ರಿಸ್ತನು ಸತ್ತು, ಪುನರುತ್ಥಾನಗೊಂಡ ಮೇಲೆ, ತನ್ನ ಶಿಷ್ಯರಿಗೆ ಕಾಣಿಸಿಕೊಂಡನು. ಪೇತ್ರನು ಮೀನು ಹಿಡಿಯಲು ಹೋಗಿದ್ದಾಗ, ಮೂರನೆಯ ಸಲ ಯೇಸುವನ್ನು ನೋಡಿದನು. (ಈಗ ನಿಮ್ಮ ಜೇಡಿಮಣ್ಣಿನಿಂದ ದೋಣಿಯನ್ನು ಮಾಡಿರಿ) ಯೇಸು ಕ್ರಿಸ್ತನು ದಡದ ಮೇಲೆ ಕಾಣಿಸಿಕೊಂಡನು, ಶಿಷ್ಯರಿಗೆ ಕೂಡಲೇ ಅದು ಆತನೇ ಎಂದು ಗೊತ್ತಾಯಿತು. ಪೇತ್ರನು ದೋಣಿಯಿಂದ ಜಿಗಿದು ಈಜುತ್ತಾ ಯೇಸು ಕ್ರಿಸ್ತನ ಬಳಿಗೆ ಹೋದನು. ಯೇಸು ಕ್ರಿಸ್ತನು ಪೇತ್ರನ ಪಾಪವನ್ನು ಕ್ಷಮಿಸಿದನು ಮತ್ತು ಅವನಿಗೆ "ನನ್ನನ್ನು ಹಿಂಬಾಲಿಸು" ಎಂದು ಹೇಳಿದನು.
ಯಾರನ್ನು ಅನುಕರಿಸುವ ಆಯ್ಕೆಯನ್ನು ನೀವು ಮಾಡಿಕೊಳ್ಳುವಿರಿ? ತನ್ನ ಸ್ವಂತ ಪಾಪಗಳನ್ನು ಹೊತ್ತುಕೊಳ್ಳುವ ಆಯ್ಕೆ ಮಾಡಿಕೊಂಡ ಯೂದನಂತೆ ಇರುವಿರೋ? ಅಥವಾ ಪಾಪ ಮಾಡಿದ ನಂತರ, ಯೇಸು ಕ್ರಿಸ್ತನ ಬಳಿಗೆ ಬಂದು ಅತನನ್ನು ಹಿಂಬಾಲಿಸುವ ಆಯ್ಕೆಯನ್ನು ಮಾಡಿದಂಥ ಪೇತ್ರನಂತೆ ಇರುವಿರೋ?
(ವಿದ್ಯಾರ್ಥಿಗಳಿಂದ ಜೇಡಿ ಮಣ್ಣನ್ನು ಹಿಂದಕ್ಕೆ ತೆಗೆದುಕೊಳ್ಳಿರಿ.)



# ಆಟ ಕಂಠಪಾಠ ವಚನ ಸಮಯ

ಕಂಠಪಾಠ ವಚನದ ಒಂದೊಂದು ಪದಕ್ಕೆ ಒಂದೊಂದು ಬಲೂನ್ ಊದಿರಿ. ಪರ್ಮನೆಂಟ್ ಮಾರ್ಕರ್ ನಿಂದ, ಪ್ರತಿಯೊಂದು ಬಲೂನ್ ಮೇಲೆ ಕಂಠಪಾಠ ವಚನದ ಒಂದು ಪದವನ್ನು ಬರೆಯಿರಿ. ಸ್ಪಷ್ಟವಾದ ಪ್ಯಾಕಿಂಗ್ ಟೇಪ್ ಉಪಯೋಗಿಸಿ, ಬಲೂನ್ ಗಳನ್ನು ಗೋಡೆಯ ಮೇಲೆ ಕ್ರಮವಾಗಿ ಜೋಡಿಸಿರಿ (ಒಂದುವೇಳೆ ಸಮಯವಿದ್ದರೆ, ಮಕ್ಕಳೇ ಸರದಿ ಪ್ರಕಾರ ಇದನ್ನು ಮಾಡಬಹುದು). ಒಂದುವೇಳೆ ನೀವು ತರಗತಿಯ ಸಮಯದಲ್ಲಿ ಬಲೂನ್ ಗಳನ್ನು ಹಾಕುವ ಯೋಚನೆ ಮಾಡಿದರೆ, ನೀವು ಪದಗಳನ್ನು ಹಾಕುವಾಗ ಮಕ್ಕಳಿಂದ ವಾಕ್ಯವನ್ನು ಓದಿಸಿರಿ. ಬಲೂನ್ ಗಳನ್ನೆಲ್ಲಾ ಕ್ರಮವಾಗಿ ಜೋಡಿಸಿದ ನಂತರ, ಸಹಾಯಕರಿಗೆ ಸರದಿಯ ಪ್ರಕಾರ ಬಲೂನ್ ಗಳನ್ನು ಒಡೆಯುವಂತೆ ಹೇಳಿರಿ ("ಗುಂಡು ಸೂಜಿ" ಉಪಯೋಗಿಸಿದರೆ ಒಳ್ಳೇದು), ಆ ಸಮಯದಲ್ಲಿ ಒಂದೊಂದೇ ಬಲೂನ್ ಒಡೆಯುವಾಗಲೂ ಎಲ್ಲರೂ ಒಟ್ಟಾಗಿ ದೇವರ ವಾಕ್ಯವನ್ನು ಹೇಳಬೇಕು.



# ತಿಂಡಿ ಚಿಕ್ಕ ಸ್ಯಾಂಡ್ ವಿಚ್

**ಸಾಮಗ್ರಿಗಳು:**

- ಬ್ರೆಡ್
- ಸೌತೇಕಾಯಿ ತುಂಡುಗಳು
- ಟಮೊಟೊ ತುಂಡುಗಳು
- ಕ್ಯಾರೆಟ್ ತುಂಡುಗಳು
- ಬೆಣ್ಣೆ
- ಟಮೊಟೊ ಕೆಚಪ್
- ಉಪ್ಪು



**ಸೂಚನೆಗಳು:**

1.ಬ್ರೆಡ್ ಮೂಲೆಗಳನ್ನು ಟ್ರಿಮ್ ಮಾಡಿರಿ ಮತ್ತು ಪ್ರತಿಯೊಂದು ಪದರವನ್ನು ನಾಲ್ಕು ಭಾಗಗಳಾಗಿ ಕತ್ತರಿಸಿರಿ
2.ಸೌತೇಕಾರಿ, ಟಮೊಟೊ ಮತ್ತು ಕ್ಯಾರೆಟ್ ತುಂಡುಗಳನ್ನು ಪ್ರತ್ಯೇಕವಾದ ಬಟ್ಟಲುಗಳಲ್ಲಿ ಇಡಿರಿ
3.ಬೆಣ್ಣೆಯನ್ನು ಬಟ್ಟಲಿನೊಳಗೆ ಇಡಿರಿ
4.ಮಕ್ಕಳು ತಮ್ಮ ಆಯ್ಕೆಯ ತರಕಾರಿಗಳೊಂದಿಗೆ ತಾವೇ ಸ್ವಂತವಾಗಿ ಚಿಕ್ಕ ಸ್ಯಾಂಡ್ ವಿಚ್ ಮಾಡಬಹುದು.
5.ಬ್ರೆಡ್ ಮೇಲೆ ಬೆಣ್ಣೆ ಹಾಕಿರಿ, ಟಮೊಟೊ ಕೆಚಪ್ ಹಾಕಿರಿ ನಿಮ್ಮ ಆಯ್ಕೆಯ ತರಕಾರಿಯನ್ನು ಜೋಡಿಸಿರಿ ಮತ್ತು ಉಪ್ಪು ಸೇರಿಸಿರಿ
6.ಮೇಲೆ ಮತ್ತೊಂದು ಬ್ರೆಡ್ ಪದರವನ್ನು ಇಡಿರಿ ಮತ್ತು ನಿಮ್ಮ ಚಿಕ್ಕ ಸ್ಯಾಂಡ್ ವಿಚ್ ಸವಿಯಿರಿ.

# ಕರಕುಶಲ ಪ್ರಮುಖ ಇನ್ಸಪೆಕ್ಟರ್ ಕಾರ್

**ಸಾಮಗ್ರಿಗಳು:**


-ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರಮುಖ ಇನ್ಸಪೆಕ್ಟರ್ ಕಾರಿನ ಮುದ್ರಿತ ಪ್ರತಿಯನ್ನು ಕೊಡಬೇಕು
-ಕತ್ತರಿಗಳು
-ಬಣ್ಣದ ಪೆನ್, ಬಳಪಗಳು, ಅಥವಾ ಬಣ್ಣದ ಪೆನ್ಸಿಲ್ ಗಳು
-ಟೇಪ್
-ಚಿಕ್ಕ ಡೋವಲ್ಸ್ ಅಥವಾ ಸ್ಕ್ರೀವ್ಸ್





**।ಸೂಚನೆಗಳು:**


ಹಂತ 1. ನಿಮ್ಮ ಕ್ಷೇತ್ರದಲ್ಲಿ ಕಾಣಿಸುವ ರೀತಿಯಲ್ಲಿ, ಗಸ್ತು ತಿರುಗುವ ಕಾರನ್ನು ಅಲಂಕಾರ ಮಾಡಿರಿ.
ಹಂತ 2. ಚುಕ್ಕೆಯಿರುವ ಗೆರೆಗಳಿಗನುಸಾರ ಅದನ್ನು ಕತ್ತರಿಸಿರಿ.
ಹಂತ 3. ಗಸ್ತು ವಾಹವನ್ನು ಕಡ್ಡಿಗೆ ಟೇಪ್ ಹಾಕಿ ಅಂಟಿಸಿರಿ.
ಹಂತ 4. ಎಲ್ಲರೂ ಮುಗಿಸಿದ ಮೇಲೆ, ಸೈರನ್ ಶಬ್ದವನ್ನು ಮಾಡುತ್ತಾ ಮತ್ತು ಕಳ್ಳನು ಎಲ್ಲಿ ಅಡಗಿದ್ದಾನೆ ಎಂದು ಅನ್ನಿಸುತ್ತದೆಯೋ ಅಲ್ಲಿಗೆ ತಮ್ಮ ಕಾರುಗಳನ್ನು "ಓಡಿಸಿಕೊಂಡು" ಹೋಗುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹ ಪಡಿಸಿರಿ.

# ದಿನ 3 ಕರಕುಶಲ: ಪ್ರೋಲೀಸ್ ಕಾರ್



# 4 ಮುದ್ರೆ

## ಸತ್ಯವೇದ ಕಥೆ: ಜಕ್ಕಾಯ ಮರವನ್ನು ಹತ್ತಿದನು

# ನಾಟಕ/ಸ್ಕಿಟ್

ಮೋಟು: ಸರಿ, ಟ್ರೇಡ್ ಮಾರ್ಕ್ ಗಳಿಗೆ ಗೋಂದು ಹಾಕಲಾಗುತ್ತಿದೆ.
ಪತ್ಲು: ಆತನು ಬಯಸುವ ವಸ್ತು ಗುರುತಿಸಲ್ಪಟ್ಟು ಚಾವಣಿಯ ಮೇಲೆ ಕಾಯುತ್ತಿದೆ.
ಮೋಟು: ಆತನ ಸೂಚನೆಗಳನ್ನು ಅನುಸರಿಸುವದೇ ನಾವು ಮಾಡಬೇಕಾಗಿರುವ ಕೆಲಸವಾಗಿದೆ?
ಪತ್ಲು: ಹೌದು, ಆತನು ಅದನ್ನೇ ಹೇಳಿದ್ದಾನೆ.
ಮೋಟು: ಆತನು ನಮಗೆ ಬೇರೊಂದು ಕೆಲಸವನ್ನು ನೇಮಿಸುವ ತನಕ ನಾವು ನಮಗೆ ಇಷ್ಟ ಬಂದ ಹಾಗೆ ಬರಬಹುದು ಮತ್ತು ಹೋಗಬಹುದೇ?
ಪತ್ಲು: ಹೌದು. ನನಗೇನೋ ಇದು ಬಹಳ ಸುಲಭವಾದ ಕೆಲಸವೆಂದು ಅನ್ನಿಸುತ್ತದೆ. ಆಗ ನಾವು [ಪಕ್ಷಿಯಂತೆ ರೆಕ್ಕೆಗಳನ್ನು ಬಡಿಯುತ್ತಾ] ಸ್ವತಂತ್ರರಾಗಿರುವೆವು . . .
ಮೋಟು: ನಾವು ಮುದ್ರೆ ಒತ್ತುವ ಕಬ್ಬಿಣವನ್ನು ತೆಗೆದುಕೊಳ್ಳೋಣ ಮತ್ತು ಹೊಸ ವಸ್ತುಗಳಿಗೆ ಮುದ್ರೆ ಹಾಕಿದರೆ, ನಮ್ಮ ಕೆಲಸ ಮುಗಿದಂತೆಯೇ ಅಲ್ಲವೇ?
ಪತ್ಲು: ಹೌದು, ಹಾಗೇ ಅನ್ನಿಸುತ್ತದೆ.
ಮೋಟು: ಒಳ್ಳೇದು! ನಮ್ಮ ಕೆಲಸವನ್ನು ಪ್ರಾರಂಭಿಸೋಣ.
ಪತ್ಲು: ನೋಡು, ನಾನೇನು ಯೋಚನೆ ಮಾಡುತ್ತಾ ಇದ್ದೇನೆಂದರೆ . . .
ಮೋಟು: ಏನು?
ಪತ್ಲು: ಬೇಕರಿಯವನು ಎಲ್ಲವೂ ತನ್ನ ನಿಯಂತ್ರಣದಲ್ಲಿದೆ ಎಂಬದನ್ನು ತಮ್ಮ ಮುಖದಲ್ಲಿಯೇ ವ್ಯಕ್ತಪಡಿಸಲು ಹೇಗೆ ಸಾಧ್ಯ?
ಮೋಟು: ಹಾಗೇನೂ ಇಲ್ಲ.
ಪತ್ಲು: ನಾವು ಅವನ ಅಂಗಡಿಯಲ್ಲಿ ಕಳ್ಳತನ ಮಾಡಿದಾಗ, ಅವನು ತನ್ನ ನಿಯಂತ್ರಣವನ್ನು ಕಳೆದುಕೊಳ್ಳಿಲ್ಲ ಅಥವಾ ನಮ್ಮ ವಿಷಯದಲ್ಲಿ ಪ್ರಮಾಣ ಮಾಡಲಿಲ್ಲ, ಅಥವಾ ನಮ್ಮನ್ನು ಹೊಡೆಯಲಿಲ್ಲ ಹಾಗೆಯೇ ನಮ್ಮನ್ನು ಪ್ರಮುಖ ಇನ್ಸಪೆಕ್ಟರ್ ಗೆ ಹಿಡಿದು ಕೊಡಲೂ ಇಲ್ಲ?
ಮೋಟು: ಹೌದಲ್ಲವೇ.
ಪತ್ಲು: ನಮಗೆ ಗೊತ್ತಿಲ್ಲದ ಯಾವುದೋ ವಿಷಯ ಅವನಿಗೆ ಗೊತ್ತಿರಬೇಕು ಅನ್ನಿಸುತ್ತದೆ.
ಮೋಟು: ಹೌದು, ಈಗ ಹೇಳಿದರೆ ಏನು ಪ್ರಯೋಜನ. ಆದರೂ ನನಗೆ ಗೊತ್ತಿಲ್ಲದ ಎಷ್ಟೋ ವಿಷಯಗಳನ್ನು ತಿಳಿದುಕೊಂಡಿರುವ ಅನೇಕ ಜನರಿದ್ದಾರೆ.
ಪತ್ಲು: ನೀನು ಇದನ್ನು ಇನ್ನೊಮ್ಮೆ ಹೇಳಬಹುದು. ಬೇರೆ ಯಾರು ಹಾಗೆ ಇದ್ದರು ಎಂಬದು ನಿನಗೆ ಗೊತ್ತಿದೆ?
ಮೋಟು: ಟುಕ್ ಟುಕ್ ಚಾಲಕ ಮತ್ತು ಕ್ಷೌರಮಾಡುವವನು.
ಪತ್ಲು: ಮತ್ತು?
ಮೋಟು: ಬೇರೆ, ಯಾರು ನನ್ನ ನೆನಪಿಗೆ ಇಲ್ಲ.
ಪತ್ಲು: ಪ್ರಮುಖ ಇನ್ಸಪೆಕ್ಟರ್ ವಿಷಯ ಏನು?
ಮೋಟು: ಹೌದು. ಆತನೂ ಇದ್ದಾನೆ.
ಪತ್ಲು: [ಮುದ್ರೆಹಾಕುವ ಗುರುತನ್ನು ಹಿಡಿದುಕೊಂಡು ನೋಡುತ್ತಾ] ಪಟ್ಟಣದಲ್ಲಿರುವ ಯಾರೆಲ್ಲಾ ಅರಸನ ಪ್ರಸ್ತಾಪವನ್ನು ಅಂಗೀಕರಿಸಿಕೊಂಡಿದ್ದಾರೆ ಎಂದು ನೀನೇ ಹೇಳಿಬಿಡುವಂತೆ ಇದೆ.
ಮೋಟು: ನಾವೂ ಇದೇ ರೀತಿ ಆಗುತ್ತೇವೆ ಎಂದು ನಿನಗೆ ಅನ್ನಿಸುತ್ತದೆಯೇ?
ಪತ್ಲು: ನಿನ್ನ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಅರಸನ ಪ್ರಸ್ತಾಪವನ್ನು ಅಂಗೀಕರಿಸಿಕೊಂಡಾಗಿನಿಂದ ನನಗೆ ಯಾವುದೇ ರೀತಿಯ ಒತ್ತಡ ಅಥವಾ ಆತಂಕ ಉಂಟಾಗಿಲ್ಲ.
ಮೋಟು: ಹೌದು ನನಗೂ ಹಾಗೇನೂ ಇಲ್ಲ. ಆದರೆ ಇದು ಹೇಗೆ?
ಪತ್ಲು: ಸಿಕ್ಕಿಬೀಳುತ್ತೇನೆ ಎಂಬ ಭಯ ನನಗೆ ಇಲ್ಲ.
ಮೋಟು: ಹೌದು.
ಪತ್ಲು: ನಾವು ನಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ ಪ್ರಮುಖ ಇನ್ಸಪೆಕ್ಟರ್ ಕೈಗೆ ಸಿಕ್ಕದಂತೆ ಅಡಿಗಿಕೊಳ್ಳಲು ಬಹಳ ಪ್ರಯತ್ನಿಸಿದ್ದೇವೆ.
ಮೋಟು: ನಾವು ನಾವಂದುಕೊಂಡಷ್ಟು ಬುದ್ದಿವಂತರೇನೂ ಅಲ್ಲ.
ಪತ್ಲು: ಹೌದು, ನಿನ್ನ ಮಾತು ನಿಜ. ನಾವು ಬುದ್ದಿವಂತರೆಂದು ಅಂದುಕೊಂಡಿದ್ದೆವು, ಆದರೆ ನಮ್ಮ ತಿಳುವಳಿಕೆ ತಪ್ಪು.
ಮೋಟು: ಆದರೆ ನಾವು ಪ್ರಸ್ತಾಪವನ್ನು ಅಂಗೀಕರಿಸಿಕೊಂಡಾಗಿನಿಂದ, ಯಾರಿಗೂ ಹೆದರುವ ಅಥವಾ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುವ ಅವಶ್ಯಕತೆಯಿಲ್ಲ.
ಪತ್ಲು: ಈಗಲೂ ಎಲ್ಲವೂ ಸರಿಯಾಗಿದೆ! ಅವರೆಲ್ಲರು "ಪ್ರಮಾಣಿತ" ಮುದ್ರೆ ಹಾಕಿಸಿಕಂಡಿರುವಂತೆ ಇದೆ. ಅರಸನ ಪ್ರಸ್ತಾಪವನ್ನು ಅಂಗೀಕರಿಸಿಕೊಂಡಿರುವವರೆಲ್ಲರೂ ಓಡಿಹೋಗುತ್ತಿಲ್ಲ ಅಥವಾ ಅಡಗಿಕೊಳ್ಳುತ್ತಿಲ್ಲ.
ಮೋಟು: ನಾವೂ ಅವರಂತೆಯೇ ಇದ್ದೇವೆ! ನಾನು ನಿನಗೂ ಈ ಮುದ್ರೆಯನ್ನು ಹಾಕಬೇಕೆಂದು ಅನ್ನಿಸುತ್ತದೆ. [ಗೋಂದಿನ ಡಬ್ಬಿಯನ್ನು ತೋರಿಸುತ್ತಾ.]
ಪತ್ಲು: ಖಂಡಿತ ನಮಗೂ ಇದು ಬೇಕು. ನಿನಗೆ ಅದರಿಂದ ಏನಾದರು ಗಾಯವಾಗುವ ಮೊದಲು ಅದನ್ನು ಕೆಳಗೆ ಹಾಕು. ಬೇಗ ಈ ಕಾರ್ಯವನ್ನು ಮುಗಿಸೋಣ ಆತ ಮುಖ್ಯಬೀದಿಯಿಂದ ನಾವು ಪಟ್ಟದೊಳಗೆ ಹೋಗಬಹುದು.
ಮೋಟು: ಮುಖ್ಯಬೀದಿ? ನಾವು ಆ ಬೀದಿಯಲ್ಲಿ ಹೋಗಿ ಅನೇಕ ವರ್ಷಗಳೇ ಆಗಿವೆ.
ಪತ್ಲು: ಮೊದಲ ಗುರುತು ಯಾರಿಗೆ ಸಿಗುತ್ತದೆ.

# ಮುಖ್ಯ ಪಾಠ

ಲೂಕ **19:1-10**

ನೀವು ಬೇಕಾದವರಾಗಿದ್ದಿರಿ. ನಿಮ್ಮನ್ನು ಬಂಧಿಸಿ ಕಾರಾಗೃಹಕ್ಕೆ ಹಾಕಲಾಯಿತು.
ಆದರೆ ಅಲ್ಲಿಂದ ಜಾಮೀನು ಕೊಟ್ಟು ನಿಮಗೆ ಬಿಡುಗಡೆಯನ್ನುಂಟು ಮಾಡಲಾಯಿತು!
ಮತ್ತು ಇಂದು ನಾವು ಯಾವ ಗುರುತನ್ನು ಹೊಂದಿದ್ದೇವೆ ಎಂಬದರ ಬಗ್ಗೆ ಕಲಿತುಕೊಳ್ಳುತ್ತಾ ಇದ್ದೇವೆ!
ಸಾಕುವವರು ತಮ್ಮ ಪಶುಗಳಿಗೆ ಮುದ್ರೆಯನ್ನು ಹಾಕುತ್ತಾರೆ ಆದ್ದರಿಂದ ಒಂದುವೇಳೆ ಯಾವುದಾದರು ತಪ್ಪಿಸಿಕೊಂಡಾಗ ಅದು ಯಾರಿಗಾದರು ಸಿಕ್ಕಿದರೆ, ಅದು ಯಾರದ್ದು ಎಂದು ಗುರುತಿಸಲು ಸುಲಭವಾಗುತ್ತದೆ.
ತಪ್ಪಿಸಿಕೊಂಡುವ ಮಗು ಪೋಲೀಸರಿಗೆ ಅಥವಾ ಬೇರೆ ಯಾರಿಗಾದರೂ ಸಿಕ್ಕಿದರೆ ನಿಮ್ಮ ಮನೆ ಎಲ್ಲಿ ಎಂದು ಅವರು ಅದನ್ನು ಕೇಳುವ ಹಾಗೆ, ತಪ್ಪಿಸಿಕೊಂಡ ನಾಯಿ ಅಥವಾ ದ್ವಿಚಕ್ರ ವಾಹನ ಸಿಕ್ಕಿದರೆ ಅದನ್ನು ಕೇಳಲು ಆಗುವದಿಲ್ಲ. ಸತ್ಯವೇದವು ಹೇಳುವದೇನೆಂದರೆ ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರಾಗಿದ್ದೀರಿ (1 ಕೊರಿಂಥ 6:20).
ನಿಮ್ಮ ಬೆಲೆ ಎಷ್ಟು?
ನೆನ್ನೆಯ ಪಾಠದಲ್ಲಿ, ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಕೊಡುವ ಮೂಲಕ ನಮ್ಮ ಪಾಪಗಳಿಗೆ ಕ್ರಯವನ್ನು ಪಾವತಿಸಿದನು ಎಂಬದನ್ನು ನೆನಪುಮಾಡಿಕೊಳ್ಳಿರಿ. ಹೀಗಿರುವಾಗ ನನ್ನ ಮತ್ತು ನಿಮ್ಮ ಬೆಲೆ ಅದುವೇ ಆಗಿದೆ! ಯೇಸು ಕ್ರಿಸ್ತನ ಮರಣ ಅತ್ಯಂತ ವೇದನೆಯುಳ್ಳದ್ದಾಗಿತ್ತು. ನಿಮ್ಮನ್ನು ವಿಮೋಚಿಸಲು ಆತನು ಕೇವಲವಾದ ಕ್ರಯವನ್ನು ಪಾವತಿಸಲಿಲ್ಲ. ನಿಮ್ಮ ಕುಟುಂಬದವರು ನಿಮಗಾಗಿ ಕೊಟ್ಟಿರುವ ಅಮೂಲ್ಯವಾದ ಬೆಲೆ ಏನು? ಬಹುಶಃ ಒಂದು ಬೈಸ್ಕೆಲ್ ಅಥವಾ ಕಾರ್ ಆಗಿರಬಹುದು? ಅದು ನಿಮ್ಮ ಕುಟುಂಬಕ್ಕೆ ಸೇರಿದೆ ಎಂಬದನ್ನು ಪರೀಕ್ಷಿಸಲು ಮತ್ತು ಗುರುತಿಸಲು ಅದಕ್ಕೆ ಗುರುತನ್ನು ಹಾಕಲಾಗಿದೆಯೇ? ಹೌದು. ಪ್ರತಿಯೊಂದು ಕಾರಿನ ಮೇಲೆ ವಿಶೇಷವಾಗಿ ಸಂಖ್ಯೆಯನ್ನು ಹಾಕಿರಲಾಗುತ್ತದೆ ಅದು ಯಜಮಾನನ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ. ಕೆಲವೊಮ್ಮೆ ಜನರು ತಮ್ಮ ಬೈಕೆ ಮೇಲೆಯೂ ತಮ್ಮ ಹೆಸರು ಅಥವಾ ಸಂಖ್ಯೆಯನ್ನು ಹಾಕಿಸಿಕೊಳ್ಳುತ್ತಾರೆ. ಯಾಕಂದರೆ ಒಂದುವೇಳೆ ಕಳ್ಳತನವಾದರೆ, ಕಳ್ಳನನ್ನು ಹಿಡಿಯಲು ಬೇಕಾದ ಸೂಚನೆಗಳನ್ನು ಅಧಿಕಾರಿಗಳಿಗೆ ತಿಳಿಸಿ ಸಹಾಯಮಾಡಬಹುದು.
ಇವುಗಳು ಮುದ್ರೆ ಹಾಕುವದಕ್ಕೆ ಉದಾಹರಣೆಗಳಾಗಿವೆ!
ಮಂಗಳವಾರದ ಸತ್ಯವೇದ ಕಥೆ ನಿಮಗೆ ನೆನಪಿದೆಯೇ? ಜನರ ದೊಡ್ಡ ಗುಂಪು ಯೇಸು ಕ್ರಿಸ್ತನ ಹಿಂದೆ ಹೋಗುತ್ತಾ ಇತ್ತು ಮತ್ತು ಆತನು ಅವರಿಗೆ ಹೇಳುವದನ್ನೆಲ್ಲಾ ಕೇಳಿಸಿಕೊಳ್ಳುತ್ತಾ ಇತ್ತು. ನೆನ್ನೆ ಸಹ ನಾವು ಕೇಳಿಸಿಕೊಂಡದ್ದೇನೆಂದರೆ ಯೇಸು ಕ್ರಿಸ್ತನ ಮೇಲೆ ಕೆಲವರು ದೂಷಣೆಗಳನ್ನು ಮಾಡುತ್ತಿದ್ದಾಗ ಆತನಿಗೆ ಏನಾಗುವದೋ ಎಂದು ಜನರ ದೊಡ್ಡ ಗುಂಪು ಎಲ್ಲವನ್ನು ನೋಡುತ್ತಾ ಇತ್ತು. ನಿಮಗೆ ಒಂದು ವಿಷಯ ಗೊತ್ತಿದೆಯೇ? ಯೇಸು ಕ್ರಿಸ್ತನ ಹಿಂದೆ ಯಾವಾಗಲು ಜನರ ದೊಡ್ಡ ಗುಂಪು ಇರುತ್ತಲೇ ಇತ್ತು. ಅವನ ಹೆಸರು ಜಕ್ಕಾಯನು ನಾವು ಅವನನ್ನು ಜಕ್ಕಾಯ ಎಂದು ಕರೆಯೋಣ. ಅವನು ಯೆರಿಕೋ ಪಟ್ಟಣದಲ್ಲಿ ವಾಸವಾಗಿದ್ದನು. ಹೌದು ಯೆಹೋಶುವನು ತನ್ನ ಜನರನ್ನು ಕರೆದುಕೊಂಡು ಇದೇ ಪಟ್ಟಣದ ಸುತ್ತಲೂ ಸುತ್ತಿದನು ಮತ್ತು ದೇವರು ಅದರ ಗೋಡೆಗಳು ಬಿದ್ದುಹೋಗುವಂತೆ ಮಾಡಿದನು. ಯೇಸು ಕ್ರಿಸ್ತನು ಯೆರಿಕೋ ಪಟ್ಟಣಕ್ಕೆ ಬಂದನು ಮತ್ತು ಅದನ್ನು ಹಾದುಹೋಗಬೇಕೆಂದಿದ್ದಾಗ ಜಕ್ಕಾಯನಿಗೆ ಆತನ ಬಗ್ಗೆ ಗೊತ್ತಾಯಿತು. ಅವನು ಯೇಸು ಕ್ರಿಸ್ತನನ್ನು ನೋಡಲು ಮತ್ತು ಆತನ ಮಾತುಗಳನ್ನು ಕೇಳಲು ಬಯಸಿದನು! ನಿಮಗೆ ಆ ಬಯಕೆ ಇದೆಯೇ?
ನಿಮ್ಮಂತೆ, ಜಕ್ಕಾಯನು ಎತ್ತರವಾಗಿ ಇರಲಿಲ್ಲ ಆದ್ದರಿಂದ ಅವನಿಗೆ ಒಂದು ಸಮಸ್ಯೆ ಎದುರಾಯಿತು. ಯೇಸು ಕ್ರಿಸ್ತನು ಹೇಗಿದ್ದಾನೆಂದು ನೋಡಲು ಅವನಿಗೆ ಹೇಗೆ ಸಾಧ್ಯ? ಯೇಸು ಕ್ರಿಸ್ತನು ಹೇಳುವ ಮಾತುಗಳನ್ನು ಅವನು ಕೇಳಿಸಿಕೊಳ್ಳಲು ಹೇಗೆ ಸಾಧ್ಯ? ಎಲ್ಲಾ ಸಮಯಗಳಲ್ಲಿಯೂ ಯೇಸು ಕ್ರಿಸ್ತನ ಹಿಂದೆ ಜನರ ಗುಂಪು ಕೂಡಿರುತ್ತಾ ಇತ್ತು. ದೊಡ್ಡ ಮೆರವಣಿಗೆಯನ್ನು ನೊಡಲು ಬಯಸಿ ಅಲ್ಲಿಗೆ ತಡವಾಗಿ ಹೋದರೆ ಹೇಗಿರವದೋ ಹಾಗೆಯೇ ಇದು ಇತ್ತು. ಒಂದುವೇಳೆ ಎರಡನೇ ಮಹಡಿಯಲ್ಲಿರುವ ಕಿಟಕಿಯಿಂದ ನೋಡುವ ಅವಕಾಶ ದೊರೆತರೆ ಉತ್ತಮವಾಗಿರತ್ತದೆ ಅಲ್ಲವೇ? ಜನರು ಮುಂದೆ ಸಾಲು ಸಾಲಾಗಿ ಇರುವಾಗ ಹಿಂದೆಯಿಂದ ಏನೂ ಕಾಣಿಸುವದಿಲ್ಲ! ಯೇಸು ಕ್ರಿಸ್ತನು ಬರುವ ದಾರಿಯಲ್ಲಿ ಜಕ್ಕಾಯನು ಮುಂಚಿತವಾಗಿಯೇ ಓಡಿದನು ಮತ್ತು ಆತನನ್ನು ಸ್ಪಷ್ಟವಾಗಿ ನೋಡುವ ಸಲುವಾಗಿ ಒಂದು ಮರವನ್ನು ಕಂಡು ಅದನ್ನು ಹತ್ತಿದನು.
ಯೇಸು ಕ್ರಿಸ್ತನು ಮರದ ಬಳಿಗೆ ಬಂದಾಗ, ಅಲ್ಲಿಯೇ ನಿಂತನು ಮತ್ತು ಮೇಲಕ್ಕೆ ನೋಡಿದನು ಹಾಗೂ ಗಿಡ್ಡನಾಗಿದ್ದ ವ್ಯಕ್ತಿಗೆ, "ಜಕ್ಕಾಯನೇ, ತಟ್ಟನೆ ಇಳಿದು ಬಾ, ನಾನು ಈಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು, ಅಂದನು." ಜಕ್ಕಾಯನು ಬಹಳ ಸಂತೋಷದಿಂದ ಯೇಸು ಕ್ರಿಸ್ತನನ್ನು ತನ್ನ ಮನೆಗೆ ಕರೆದುಕೊಂಡು ಹೋದನು.
ನಿಜವಾಗಿ ಹೇಳುವದಾದರೆ, ಅವನು ಅಲ್ಲಿಯೇ ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟನು! ಆತನು ಯೇಸು ಕ್ರಿಸ್ತನಿಗೆ ಹೇಳಿದ್ದೇನೆಂದರೆ, "ಕರ್ತನೇ ನೋಡು, ನನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ; ಮತ್ತು ನಾನು ಅನ್ಯಾಯವಾಗಿ ಯಾರಿಂದ ಏನಾದರೂ ಎಳಕೊಂಡದ್ದೇಯಾದರೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ."
ಅದು ಬೇಸರದಿಂದ ಇರಬಾರದು! ಜಕ್ಕಾಯನು ಐಶ್ವರ್ಯವಂತನಾಗಿದ್ದನು, ಆದ್ದರಿಂದ ಅವನು ತನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆಂದು ಹೇಳಿದಾಗ, ಅದು ಸಣ್ಣ ಮೊತ್ತವಾಗಿರಲಿಲ್ಲ.
ಅವನ ಮನೆಯ ಹೊರಗಿದ್ದ ಜನರು ಯೇಸು ಕ್ರಿಸ್ತನು ಅವನ ಮನೆಗೆ ಹೋಗಿದ್ದಾನೆಂದು ಗುಣಗುಟ್ಟುತ್ತಿದ್ದರು. ಅವನು ಪಾಪಿಯಾಗಿದ್ದನು, ಕೆಟ್ಟವನಾಗಿದ್ದನು, ಮೋಸಗಾರನಾಗಿದ್ದನು ಮತ್ತು ಸುಂಕದವನಾಗಿದ್ದನು. ಯೇಸು ಕ್ರಿಸ್ತನು ಜಕ್ಕಾಯನ ಮನೆಗೆ ಹೋದ ಕಾರಣ ಅವನು ಸಂಪೂರ್ಣವಾಗಿ ಬದಲಾದ ವ್ಯಕ್ತಿಯಾಗಿದ್ದನು.
ಅವನು ಕುಳ್ಳನಾಗಿದ್ದನು ಮತ್ತು ಮರದ ಕೊಂಬೆಗಳ ನಡುವೆ ಅಡಗಿಕೊಂಡಿದ್ದರೂ ಯೇಸು ಕ್ರಿಸ್ತನು ಅವನನ್ನು ಯಾಕೆ ಮಾತನಾಡಿಸಿದನು?
ಯೇಸು ಕ್ರಿಸ್ತನು ಅವನಿಗೆ ಹೇಳಿದ್ದೇನೆಂದರೆ, "ಮನುಷ್ಯಕುಮಾರನು ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು." ನಾವು ನಾಶನದ ಮಾರ್ಗದಲ್ಲಿದ್ದೇವೆ ಮತ್ತು ನಮಗೆ ರಕ್ಷಣೆಯ ಅವಶ್ಯಕತೆಯಿದೆ ಎಂದು ಯಾರು ಅರಿತಿರುತ್ತಾರೋ ಅವರನ್ನು ರಕ್ಷಿಸಲು ತಾನು ಬಯಸುವದಾಗಿ ಯೇಸು ಕ್ರಿಸ್ತನು ವಿವರಿಸಿದನು. ಜಕ್ಕಾಯನು ಅಂದು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡನು. ತಕ್ಷಣವೇ ಅವನು ತೋರಿದ ಉದಾರತೆ ಅವನು ಸಂಪೂರ್ಣವಾಗಿ ಬದಲಾಗಿದ್ದಾನೆ ಎಂಬದಕ್ಕೆ ಗುರುತಾಗಿತ್ತು. ಅದು ಹಸುವಿನ ಮೇಲಿನ ಮುದ್ರೆಯಂತಿತ್ತು; ಅವನು ಈಗ ದೇವರಿಗೆ ಸೇರಿದವನು ಎಂಬದನ್ನು ತೋರಿಸುವಂಥದ್ದಾಗಿತ್ತು. ಶಾರೀರಿಕವಾಗಿ ಅವನು ಮುದ್ರೆಯನ್ನು ಹೊಂದಿರಲಿಲ್ಲ, ಆದರೂ ಜನರಿಗೆ ಅವನಲ್ಲಾದ ಬದಲಾವಣೆ ಕಾಣಿಸುತ್ತಾ ಇತ್ತು. ನಮ್ಮ ನಾಟಕದಲ್ಲಿ ಬರುವ, ಪತ್ಲು ಮತ್ತು ಮೋಟು ಇತರರಲ್ಲಿ ಏನೋ ವ್ಯತ್ಯಾಸವನ್ನು ನೋಡಿದಂತೆಯೇ ಅದು ಇತ್ತು.
ನಿಮಗಾಗಿ ಮತ್ತು ನಿಮ್ಮ ಪಾಪಗಳಿಗಾಗಿ ಕ್ರಯ ಪಾವತಿಸಲು ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಾಗ, ನೀವು ಆತನವರಾಗುವಿರಿ. ನೀವು ಆತನಿಗೆ ಸೇರಿದವರು ಎಂಬದಕ್ಕೆ ಪುರಾವೆಯಾಗಿ ಆತನು ನಿಮಗೆ ಪವಿತ್ರಾತ್ಮನನ್ನು ಕೊಡುತ್ತಾನೆ. ಪವಿತ್ರಾತ್ಮನು ನಿಮ್ಮಲ್ಲಿ ಪಾಪದ ಅರುಹನ್ನು ಹುಟ್ಟಿಸುತಾನೆ ಮತ್ತು ನೀವು ಕೆಟ್ಟ ಕಾರ್ಯಗಳನ್ನು ಮಾಡುವಾಗ ಅದನ್ನು ಒಪ್ಪಿಕೊಳ್ಳಲು ಹಾಗೂ ತಪ್ಪಾಯಿತೆಂದು ಹೇಳಲು ಸಹಾಯ ಮಾಡುತ್ತಾನೆ. ನೀವು ದೇವರೊಂದಿಗೆ ಅನ್ಯೋನ್ಯವಾಗಿ ಜೀವಿಸಲು ಮತ್ತು ಕ್ರೈಸ್ತನಾಗಿ ಬೆಳೆಯಲು ಆತನು ನಿಮಗೆ ಸಹಾಯ ಮಾಡುತ್ತಾನೆ.
ಇಂದು ಯೇಸು ಕ್ರಿಸ್ತನನ್ನು ನಿಮ್ಮ ಹೃದಯದೊಳಗೆ ಅಂಗೀಕರಿಸಿಕೊಳ್ಳಲು ನಿಮ್ಮಲ್ಲಿ ಎಷ್ಟು ಜನ ಪ್ರಾರ್ಥನೆ ಮಾಡಲು ಬಯಸುತ್ತೀರಿ? ನಿಮ್ಮ ತಪ್ಪುಗಳಿಗೆ ಕ್ರಯ ಕೊಡಲು ಆತನು ಶಿಲುಬೆಯ ಮೇಲೆ ತನ್ನ ಪ್ರಾಣ ಕೊಟ್ಟನು ಎಂಬದನ್ನು ನೀವು ಅಂಗೀಕರಿಸಿಕೊಳ್ಳುತ್ತೀರೋ? ನಿಮ್ಮ ವ್ಯತ್ಯಾಸವಾಗಿದ್ದೀರಿ ಮತ್ತು ಬದಲಾಗಿದ್ದೀರಿ ಎಂದು ಇತರರು ಗುರುತಿಸಬೇಕೆಂದು ನೀವು ಬಯಸುವದಾದರೆ ನಿಮ್ಮ ಕೈಯನ್ನು ಮೇಲಕ್ಕೆ ಎತ್ತಿರಿ.
ಪ್ರಾರ್ಥನೆ ಮಾಡೋಣ.
"ಕರ್ತನಾದ ದೇವರೇ, ನಾನು ಪರಿಪೂರ್ಣನಲ್ಲ, ನನಗೆ ಸಹಾಯ ಬೇಕು. ಯೇಸು ಕ್ರಿಸ್ತನು ಜಕ್ಕಾಯನ ಬಳಿಗೆ ಬಂದು ಅವನನ್ನು ಮಾತನಾಡಿಸಿದಂತೆಯೇ ನನ್ನ ಬಳಿಗೆ ಬಂದು ನನ್ನನ್ನು ಮಾತನಾಡಿಸಬೇಕೆಂದು ನಾನು ಬಯಸುತ್ತೇನೆ. ಯೇಸುವೇ, ನೀನು ಇಂದು ನನ್ನ ಹೃದಯದೊಳಗೆ ಬರುವೆಯಾ? ಯೇಸುವೇ, ನಾನು ನಿನ್ನವನಾಗಲು ಬಯಸುತ್ತೇನೆ ಮತ್ತು ನನ್ನ ಜೀವಿತದ ಉಳಿದ ದಿನಗಳು ನಿನ್ನನ್ನು ಹಿಂಬಾಲಿಸಲು ನಿನ್ನಿಂದ ಸಹಾಯ ಹೊಂದಲು ಬಯಸುತ್ತೇನೆ. ನಾನು ನಿನ್ನನ್ನು ಹಿಂಬಾಲಿಸುವ ಆಯ್ಕೆಯನ್ನು ಮಾಡಿಕೊಳ್ಳುತ್ತೇನೆ."

# ಕಂಠಪಾಠ ವಚನ


" "ಯೇಸುಸ್ವಾಮಿಯೇ ಪ್ರಭು" ಎಂದು ನೀನು ಬಾಯಿಂದ ನಿವೇದಿಸಿ, ಅವರನ್ನು ದೇವರು ಸಾವಿನಿಂದ ಪುನರುತ್ಥಾನಗೊಳಿಸಿದ್ದಾರೆಂದು ಹೃದಯದಿಂದ ವಿಶ್ವಾಸಿಸಿದರೆ ಜೀವೋದ್ಧಾರವನ್ನು ಹೊಂದುತ್ತೀಯೆ." ರೋಮನರಿಗೆ 10:9

# ಮತದಾನ

ನಿಮಗೆ ಏನು ಅನ್ನಿಸುತ್ತದೆ?

*ಜಕ್ಕಾಯನು ಮರವನ್ನು ಹತ್ತಿ ಯೇಸು ಕ್ರಿಸ್ತನನ್ನು ನೋಡಿದ್ದು ಒಳ್ಳೆಯದಾಯಿತು.

*ಜಕ್ಕಾಯನು ಸ್ವಲ್ಪ ಧೈರ್ಯ ಮಾಡಿ ತಾನೇ ನೇರವಾಗಿ ಯೇಸು ಕ್ರಿಸ್ತನ ಬಳಿಗೆ ಹೋಗಬೇಕಾಗಿತ್ತು.


4 ಮತದಾನದ ಸಮಯ

ಜಕ್ಕಾಯ ಮರವನ್ನು ಹತ್ತಿದನು

ನಿಮಗೆ ಏನು ಅನ್ನಿಸುತ್ತದೆ?

| ಜಕ್ಕಾಯನು ಮರವನ್ನು ಹತ್ತಿ ಯೇಸು ಕ್ರಿಸ್ತನನ್ನು ನೋಡಿದ್ದು ಒಳ್ಳೆಯದಾಯಿತು. | ಜಕ್ಕಾಯನು ಸ್ವಲ್ಪ ಧೈರ್ಯ ಮಾಡಿ ತಾನೇ ನೇರವಾಗಿ ಯೇಸು ಕ್ರಿಸ್ತನ ಬಳಿಗೆ ಹೋಗಬೇಕಾಗಿತ್ತು. |
|---|---|
| ಸುಲಭ | |
| ಸುಲಭ | |
| ಕಷ್ಟ | |
| ಕಷ್ಟ | |

Equip & Grow



# ದಿನ 4 ವಿದ್ಯಾರ್ಥಿ ಪುಸ್ತಕಗಳು


## ಪ್ರಶ್ನೆಗಳು ಮತ್ತು ಉತ್ತರಗಳು

**1.ನೀವು ರಕ್ಷಣೆ ಹೊಂದಿ ಪರಲೋಕಕ್ಕೆ ಹೋಗಲು ಒಳ್ಳೆಯವರಾಗಿದ್ದರೆ ಸಾಕೇ? ಅದು ಏನು ಬೇಕು?**
ಯಾರೂ ನೀತಿವಂತರಲ್ಲ. (ರೋಮಾ 3:23) ಯಾರೂ ಒಳ್ಳೆಯವರಲ್ಲ. (ರೋಮಾ 10:19) ನಂಬುವದು ಮತ್ತು ನಿಮ್ಮ ನಂಬಿಕೆಯನ್ನು ಬಾಯಿಂದ ಅರಿಕೆಮಾಡುವದು ಅವಶ್ಯವಾಗಿರುತ್ತದೆ.

**2. ನೀವು ನೋಡಬೇಕೆಂದು ಬಯಸಿದರೋ ನೋಡಲು ಆಗದಷ್ಟು ಕುಳ್ಳರಾಗಿದ್ದೀರೋ? ಯಾವಾಗ ಮತ್ತು ಎಲ್ಲಿ?**
ಸಾಧ್ಯವಿರುವ ಅನುಭವಗಳು ಯಾವುವೆಂದರೆ: ಆಟಗಳ ಸಮಯದಲ್ಲಿ ನಿಮ್ಮನ್ನು ಪಕ್ಕಕ್ಕೆ ಸರಿಸಿ ಜನರು ಮುಂದೆ ನಿಂತಿರುವಾಗ, ಪರೇಡ್ ಗಳು, ಅಂಗಡಿ ಮಳಿಗೆಗಳ ಪ್ರದರ್ಶನಗಳು ಕಾಣದೆ ಇರುವಂಥದ್ದು ಇತ್ಯಾದಿ. ಜಕ್ಕಾಯನು ಬಯಸಿದಂತೆ, ಜನರಿಗೆ ಮೇಲಿಂದ ನೋಡಲು ಸಾಧ್ಯವಾಗುವ ಸಲುವಾಗಿ ಎತ್ತರದ ಸಭಾಂಗಣಗಳನ್ನು ಕಟ್ಟುತ್ತಾರೆ. ಮಕ್ಕಳು ಜಕ್ಕಾಯನೊಂದಿಗೆ ಗುರುತಿಸಿಕೊಳ್ಳಲು ಮತ್ತು ಆತನು ಏನು ಆಲೋಚಿಸಿದನು ಹಾಗು ಅನುಭವಿಸುತ್ತಿದ್ದನು ಎಂಬದನ್ನು ತಿಳಿಯಲು ಮಕ್ಕಳಿಗೆ ಸಹಾಯ ಮಾಡಿರಿ.

**1.ಯೇಸು ಕ್ರಿಸ್ತನು ಇಂದು ನಿಮ್ಮ ಬರುವದಾಗಿ ಹೇಳಿದ್ದಾನೆಂದು ಊಹಿಸಿಕೊಳ್ಳಿರಿ, ನಿಮ್ಮ ಆಲೋಚನೆಗಳು ಮತ್ತು ಚಿಂತೆಗಳು ಹೇಗಿರುತ್ತವೆ? ಇಂದು ಆತನು ಜನರಿಗೆ ಹೀಗೆ ಹೇಳುತ್ತಾನೆ ಎಂದು ನಿಮಗೆ ಅನ್ನಿಸುತ್ತದೆಯೇ? ತನ್ನ ಮನೆಯನ್ನು ಭೇಟಿಮಾಡುವ ರೀತಿಯಲ್ಲಿ ಆತನು ಸಭೆಗೆ ಹೋಗುತ್ತಾ ಇದ್ದಾನೆಯೇ? ಒಬ್ಬನು ಯೇಸು ಕ್ರಿಸ್ತನನ್ನು ಅಲ್ಲಿ ಭೇಟಿ ಮಾಡಬಹುದೇ? ಒಂದುವೇಳೆ ಜಕ್ಕಾಯನು ಯೇಸು ಕ್ರಿಸ್ತನನ್ನು ನೋಡಲು ಹೋಗಿದ್ದರೆ ಫಲಿತಾಂಶಗಳು ಬೇರೆಯಾಗಿರುತ್ತಿದ್ದವೇ?**
ಶಿಕ್ಷಕರು, ಎಲ್ಲಾ ಉತ್ತರಗಳನ್ನು ಅಂಗೀಕರಿಸಿಕೊಳ್ಳಬೇಕು ಮತ್ತು ವಿದ್ಯಾರ್ಥಿಗಳು ಯಥಾರ್ಥರಾಗಿರಬೇಕು ಹಾಗೂ ಅತಿಯಾಗಿ ಆತ್ಮೀಕರಾಗಿ ನಡೆದುಕೊಳ್ಳಬಾರದೆಂದು ಅವರಿಗೆ ಪ್ರೋತ್ಸಾಹಪಡಿಸಿರಿ.
ಉದಾಹರಣೆ: ನಾನು ಏನು ಧರಿಸಿಕೊಳ್ಳಬಹುದು? ನನ್ನ ಚಿಕ್ಕ ತಮ್ಮನು ಆಟದ ವಸ್ತುಗಳನ್ನು ಎಲ್ಲಾ ಕಡೆಗಳಲ್ಲಿಯೂ ಹರಡುತ್ತಾನೆಯೇ ಮತ್ತು ಬಹಳ ಗಲಾಟೆ ಮಾಡುತ್ತಾನೆಯೇ? ಆತನಿಗೆ ಇಷ್ಟವಾಗುವಂತೆ ನಾವು ಏನು ಅಡುಗೆ ಮಾಡಬಹುದು


ಐದು ವ್ಯತ್ಯಾಸಗಳನ್ನು ಕಂಡುಹಿಡಿಯಿರಿ



ಚಿತ್ರಕ್ಕೆ ಬಣ್ಣ ಹಚ್ಚಿರಿ



ಇವುಗಳಲ್ಲಿ ಎರಡು ಅರಮನೆಗಳು ಮಾತ್ರವೇ ಸಮಾನವಾಗಿವೆ. ಅವುಗಳನ್ನು ಗುರುತಿಸಿ ವೃತ್ತ ಹಾಕಿರಿ.




# ವಿದ್ಯಾರ್ಥಿ ಪುಸ್ತಕಗಳು


## ಅವ್ಯವಸ್ಥೆ

ಚಿತ್ರವನ್ನು ತೋರಿಸುವ ಬಾಣದೊಂದಿಗೆ ಪ್ರಾರಂಭಿಸಿರಿ ಮತ್ತು ನಿರ್ಗಮಿಸುವ ಬಾಣದ ಸಾಲುಗಳನ್ನು ದಾಟದಂಥ ತೆರೆದ ಮಾರ್ಗವನ್ನು ತಿಳಿದುಕೊಳ್ಳಿರಿ.


### ಮುಂದುವರೆದ - ಕಷ್ಟ



### ಮಧ್ಯಮ



### ಸುಲಭ



### ಪದ ಹುಡುಕಾಟ

| | | | | | | | | | | |
|---|---|---|---|---|---|---|---|---|---|---|
| ಅ | ಕ | ಒ | ಪ್ಪಿ | ಗೆ | ಅಂ | ಪ | ಅ | ಪೋ | ಕ | ಅ |
| ನ | ರಾ | ನ | ಹ | ರಾ | ಒ | ವಿ | ಕ | ಅಂ | ರಾ | ಒ |
| ನೋ | ಪೋ | ಅಂ | ರ | ಕ | ಅ | ತ್ರಾ | ನ | ರಾ | ಕೇ | ಣಿ |
| ಒ | ಡು | ಅ | ಹ | ಗುಂ | ಬೆ | ತ್ಮ | ಅ | ಅಂ | ಅ | ಕ |
| ಅ | ರ | ಕ | ಒ | ಲೆ | ಪು | ನು | ರ | ಕ | ಒ | ಹ |
| ನ | ಮಾ | ಅಂ | ಹ | ಅ | ಒ | ರಾ | ಮ | ಅಂ | ತ್ತು | ನ |
| ರಾ | ಕು | ಜ | ನ | ಮ | ರ | ಪೋ | ನೆ | ವ | ಕ | ರಾ |
| ಅಂ | ಜ | ಕೇ | ಕ್ಕಾ | ಅಂ | ಹ | ಅ | ದು | ಅಂ | ರಾ | ಕ |
| ಅ | ರಾ | ಜ | ರು | ಯ | ರಾ | ಅಂ | ಕ | ಒ | ರ್ತ | ಒ |
| ಕ | ಕೇ | ಗ | ನ | ಪೋ | ನು | ಕೇ | ಗೀ | ನು | ಅ | ಕ |
| ಪೋ | ಳು | ಅ | ಒ | ಲೀ | ನ | ರಾ | ಹ | ಕಾ | ಅಂ | ಪೋ |
| ಕೇ | ಅಂ | ರಾ | ಕ | ಸ್ಥ | ಅ | ಂಅ | ಕು | ಕ | ರ | ರಾ |
| ಅ | ಕ | ಳ್ಳ | ತ | ನ | ಹ | ಕ | ಳ್ಳ | ನ | ಅ | ಒ |

ರಾಣಿ
ಅರಮನೆ
ರಾಜ
ರಾಜಕುಮಾರ
ಬೆಲೆ
ಕಳ್ಳತನ
ಅಂಗೀಕಾರ
ಒಪ್ಪಿಗೆ
ಪೋಲೀಸ್ಥ
ನರ ಗುಂಪು
ಹತ್ತುವದು
ಮರ
ನೋಡು
ಕುಳ್ಳ
ಕೇಳುಗರು
ಪವಿತ್ರಾತ್ಮನು
ಕರ್ತನು
ಜಕ್ಕಾಯನು

# ಜೇಡಿಮಣ್ಣಿನೊಂದಿಗೆ ಸತ್ಯವೇದದ ವಿಮರ್ಶೆ

ಇಂದಿನ ಸತ್ಯವೇದ ಕಥೆಗಾಗಿ ಜೇಡಿಮಣ್ಣನ್ನು ತೆಗೆದುಕೊಳ್ಳೋಣ.

ಮೊದಲನೆಯದಾಗಿ ನಿಮ್ಮ ಜೇಡಿಮಣ್ಣಿನಿಂದ ಹಸುವನ್ನು ಮಾಡಿರಿ ಮತ್ತು ಅದರ ಬೆನ್ನ ಮೇಲೆ ನಿಮ್ಮ ಬೆರಳ ಉಗುರಿನಿಂದ ಗುರುತು ಹಾಕಿರಿ (ಮುದ್ರೆಯ ಹಾಗೆ). ಆ ಮುದ್ರೆಗನುಸಾರ, ಹಸು ನಿಮ್ಮದು ಎಂದು ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಾಗುತ್ತದೆ!
ಮಂಗಳವಾರದ ಸತ್ಯವೇದ ಕಥೆ ನಿಮಗೆ ನೆನಪಿದೆಯೇ? ಜನರ ದೊಡ್ಡ ಗುಂಪು ಯೇಸು ಕ್ರಿಸ್ತನ ಹಿಂದೆ ಹೋಗುತ್ತಾ ಇತ್ತು ಮತ್ತು ಆತನು ಅವರಿಗೆ ಹೇಳುವದನ್ನೆಲ್ಲಾ ಕೇಳಿಸಿಕೊಳ್ಳುತ್ತಾ ಇತ್ತು. ನೆನ್ನೆ ಸಹ ನಾವು ಕೇಳಿಸಿಕೊಂಡದ್ದೇನೆಂದರೆ ಯೇಸು ಕ್ರಿಸ್ತನ ಮೇಲೆ ಕೆಲವರು ದೂಷಣೆಗಳನ್ನು ಮಾಡುತ್ತಿದ್ದಾಗ ಆತನಿಗೆ ಏನಾಗುವದೋ ಎಂದು ಜನರ ದೊಡ್ಡ ಗುಂಪು ಎಲ್ಲವನ್ನು ನೋಡುತ್ತಾ ಇತ್ತು. ನಿಮಗೆ ಒಂದು ವಿಷಯ ಗೊತ್ತಿದೆಯೇ? ಯೇಸು ಕ್ರಿಸ್ತನ ಹಿಂದೆ ಯಾವಾಗಲು ಜನರ ದೊಡ್ಡ ಗುಂಪು ಇರುತ್ತಲೇ ಇತ್ತು. ಈಗ ನಿಮ್ಮ ಆಟದ ಹಿಟ್ಟಿನಿಂದ ಒಬ್ಬ ಕುಳ್ಳ ವ್ಯಕ್ತಿಯನ್ನು ಮಾಡಿರಿ. ಅವನ ಹೆಸರು ಜಕ್ಕಾಯನು ನಾವು ಅವನನ್ನು ಜಕ್ಕಾಯ ಎಂದು ಕರೆಯೋಣ. ಅವನು ಯೆರಿಕೋ ಪಟ್ಟಣದಲ್ಲಿ ವಾಸವಾಗಿದ್ದನು. ಹೌದು ಯೆಹೋಶುವನು ತನ್ನ ಜನರನ್ನು ಕರೆದುಕೊಂಡು ಇದೇ ಪಟ್ಟಣದ ಸುತ್ತಲೂ ಸುತ್ತಿದನು ಮತ್ತು ದೇವರು ಅದರ ಗೋಡೆಗಳು ಬಿದ್ದುಹೋಗುವಂತೆ ಮಾಡಿದನು. ಯೇಸು ಕ್ರಿಸ್ತನು ಯೆರಿಕೋ ಪಟ್ಟಣಕ್ಕೆ ಬಂದನು ಮತ್ತು ಅದನ್ನು ಹಾದುಹೋಗಬೇಕೆಂದಿದ್ದಾಗ ಜಕ್ಕಾಯನಿಗೆ ಆತನ ಬಗ್ಗೆ ಗೊತ್ತಾಯಿತು. ಅವನು ಯೇಸು ಕ್ರಿಸ್ತನನ್ನು ನೋಡಲು ಮತ್ತು ಆತನ ಮಾತುಗಳನ್ನು ಕೇಳಲು ಬಯಸಿದನು! ನಿಮಗೆ ಆ ಬಯಕೆ ಇದೆಯೇ?
ಈಗ ನಿಮ್ಮ ಜೇಡಿಮಣ್ಣಿನಿಂದ ದೊಡ್ಡ ಮರವನ್ನು ಮಾಡಿರಿ ಆದರೆ ಸ್ವಲ್ಪ ಜೇಡಿಮಣ್ಣನ್ನು ಪ್ರತ್ಯೇಕವಾಗಿ ಇಡಿರಿ.
ನಿಮ್ಮಂತೆ, ಜಕ್ಕಾಯನು ಎತ್ತರವಾಗಿ ಇರಲಿಲ್ಲ ಆದ್ದರಿಂದ ಅವನಿಗೆ ಒಂದು ಸಮಸ್ಯೆ ಎದುರಾಯಿತು. ಯೇಸು ಕ್ರಿಸ್ತನು ಹೇಗಿದ್ದಾನೆಂದು ನೋಡಲು ಅವನಿಗೆ ಹೇಗೆ ಸಾಧ್ಯ? ಯೇಸು ಕ್ರಿಸ್ತನು ಹೇಳುವ ಮಾತುಗಳನ್ನು ಅವನು ಕೇಳಿಸಿಕೊಳ್ಳಲು ಹೇಗೆ ಸಾಧ್ಯ? ಎಲ್ಲಾ ಸಮಯಗಳಲ್ಲಿಯೂ ಯೇಸು ಕ್ರಿಸ್ತನ ಹಿಂದೆ ಜನರ ಗುಂಪು ಕೂಡಿರುತ್ತಾ ಇತ್ತು. ದೊಡ್ಡ ಮೆರವಣಿಗೆಯನ್ನು ನೊಡಲು ಬಯಸಿ ಅಲ್ಲಿಗೆ ತಡವಾಗಿ ಹೋದರೆ ಹೇಗಿರವದೋ ಹಾಗೆಯೇ ಇದು ಇತ್ತು. ಒಂದುವೇಳೆ ಎರಡನೇ ಮಹಡಿಯಲ್ಲಿರುವ ಕಿಟಕಿಯಿಂದ ನೋಡುವ ಅವಕಾಶ ದೊರೆತರೆ ಉತ್ತಮವಾಗಿರತ್ತದೆ ಅಲ್ಲವೇ? ಜನರು ಮುಂದೆ ಸಾಲು ಸಾಲಾಗಿ ಇರುವಾಗ ಹಿಂದೆಯಿಂದ ಏನೂ ಕಾಣಿಸುವದಿಲ್ಲ! ಯೇಸು ಕ್ರಿಸ್ತನು ಬರುವ ದಾರಿಯಲ್ಲಿ ಜಕ್ಕಾಯನು ಮುಂಚಿತವಾಗಿಯೇ ಓಡಿದನು ಮತ್ತು ಆತನನ್ನು ಸ್ಪಷ್ಟವಾಗಿ ನೋಡುವ ಸಲುವಾಗಿ ಒಂದು ಮರವನ್ನು ಕಂಡು ಅದನ್ನು ಹತ್ತಿದನು.
(ಜೇಡಿಮಣ್ಣಿನಿಂದ ಚೆಂಡನ್ನು ಮಾಡಿರಿ ಮತ್ತು ಅದನ್ನು ತಲೆಯಂತೆ ಮಾಡಿ ಮರದ ಮೇಲೆ ಇಡಿರಿ. ಜಕ್ಕಾಯನು ಕೊಂಬೆಗಳ ಮಧ್ಯದಿಂದ ಯೇಸು ಕ್ರಿಸ್ತನನ್ನು ನೋಡಲಿ.)
ಯೇಸು ಕ್ರಿಸ್ತನು ಮರದ ಬಳಿಗೆ ಬಂದಾಗ, ಅಲ್ಲಿಯೇ ನಿಂತನು ಮತ್ತು ಮೇಲಕ್ಕೆ ನೋಡಿದನು ಹಾಗೂ ಗಿಡ್ಡನಾಗಿದ್ದ ವ್ಯಕ್ತಿಗೆ, "ಜಕ್ಕಾಯನೇ, ತಟ್ಟನೆ ಇಳಿದು ಬಾ, ನಾನು ಈಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು, ಅಂದನು." ಈಗ ಜಕ್ಕಾಯನ ಮುಖದಲ್ಲಿ ನಗು ತೋರಿಸಿರಿ ಮತ್ತು ಅವನನ್ನು ಮರದಿಂದ ಕೆಳಗೆ ಇಳಿಸಿರಿ. ಜಕ್ಕಾಯನು ಬಹಳ ಸಂತೋಷದಿಂದ ಯೇಸು ಕ್ರಿಸ್ತನನ್ನು ತನ್ನ ಮನೆಗೆ ಕರೆದುಕೊಂಡು ಹೋದನು.
ನಿಜವಾಗಿ ಹೇಳುವದಾದರೆ, ಅವನು ಅಲ್ಲಿಯೇ ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟನು! ಆತನು ಯೇಸು ಕ್ರಿಸ್ತನಿಗೆ ಹೇಳಿದ್ದೇನೆಂದರೆ, "ಕರ್ತನೇ ನೋಡು, ನನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ; ಮತ್ತು ನಾನು ಅನ್ಯಾಯವಾಗಿ ಯಾರಿಂದ ಏನಾದರೂ ಎಳಕೊಂಡದ್ದೇಯಾದರೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ." ನಿಮ್ಮ ಜೇಡಿಮಣ್ಣಿನಿಂದ ನಿಮ್ಮ ಬಹಳ ಇಷ್ಟದ ಸ್ವಾಸ್ಥ್ಯವನ್ನು ಮಾಡಿರಿ. ಯಾರಿಗಾದರು ನಾಲ್ಕರಷ್ಟು ಕೊಡುವದನ್ನು ಊಹಿಸಿಕೊಳ್ಳಿರಿ! ಅದು ಬೇಸರದಿಂದ ಇರಬಾರದು! ಜಕ್ಕಾಯನು ಐಶ್ವರ್ಯವಂತನಾಗಿದ್ದನು, ಆದ್ದರಿಂದ ಅವನು ತನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆಂದು ಹೇಳಿದಾಗ, ಅದು ಸಣ್ಣ ಮೊತ್ತವಾಗಿರಲಿಲ್ಲ.
ಅವನ ಮನೆಯ ಹೊರಗಿದ್ದ ಜನರು ಯೇಸು ಕ್ರಿಸ್ತನು ಅವನ ಮನೆಗೆ ಹೋಗಿದ್ದಾನೆಂದು ಗುಣುಗುಟ್ಟುತ್ತಿದ್ದರು. ಅವನು ಪಾಪಿಯಾಗಿದ್ದನು, ಕೆಟ್ಟವನಾಗಿದ್ದನು, ಮೋಸಗಾರನಾಗಿದ್ದನು ಮತ್ತು ಸುಂಕದವನಾಗಿದ್ದನು. ಯೇಸು ಕ್ರಿಸ್ತನು ಜಕ್ಕಾಯನ ಮನೆಗೆ ಹೋದ ಕಾರಣ ಅವನು ಸಂಪೂರ್ಣವಾಗಿ ಬದಲಾದ ವ್ಯಕ್ತಿಯಾಗಿದ್ದನು.
ನಿಮ್ಮ ಜೇಡಿಮಣ್ಣಿನಿಂದ ಜಕ್ಕಾಯನನ್ನು ಮಾಡಿರಿ ಮತ್ತು ಅವನು ಸಂತೋಷವಾಗಿರುವಂತೆ ತೋರಿಸಿರಿ. ಅವನ ಕುಳ್ಳನಾಗಿದ್ದನು ಮತ್ತು ಮರದ ಕೊಂಬೆಗಳ ನಡುವೆ ಅಡಗಿಕೊಂಡಿದ್ದರೂ ಯೇಸು ಕ್ರಿಸ್ತನು ಅವನನ್ನು ಯಾಕೆ ಮಾತನಾಡಿಸಿದನು?
ಯೇಸು ಕ್ರಿಸ್ತನು ಅವನಿಗೆ ಹೇಳಿದ್ದೇನೆಂದರೆ, "ಮನುಷ್ಯಕುಮಾರನು ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು." ನಾವು ನಾಶನದ ಮಾರ್ಗದಲ್ಲಿದ್ದೇವೆ ಮತ್ತು ನಮಗೆ ರಕ್ಷಣೆಯ ಅವಶ್ಯಕತೆಯಿದೆ ಎಂದು ಯಾರು ಅರಿತಿರುತ್ತಾರೋ ಅವರನ್ನು ರಕ್ಷಿಸಲು ತಾನು ಬಯಸುವದಾಗಿ ಯೇಸು ಕ್ರಿಸ್ತನು ವಿವರಿಸಿದನು. ಜಕ್ಕಾಯನು ಅಂದು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡನು. ತಕ್ಷಣವೇ ಅವನು ತೋರಿದ ಉದಾರತೆ ಅವನು ಸಂಪೂರ್ಣವಾಗಿ ಬದಲಾಗಿದ್ದಾನೆ ಎಂಬದಕ್ಕೆ ಗುರುತಾಗಿತ್ತು. ಅದು ಹಸುವಿನ ಮೇಲಿನ ಮುದ್ರೆಯಂತಿತ್ತು; ಅವನು ಈಗ ದೇವರಿಗೆ ಸೇರಿದವನು ಎಂಬದನ್ನು ತೋರಿಸುವಂಥದ್ದಾಗಿತ್ತು. ಶಾರೀರಿಕವಾಗಿ ಅವನು ಮುದ್ರೆಯನ್ನು ಹೊಂದಿರಲಿಲ್ಲ, ಆದರೂ ಜನರಿಗೆ ಅವನಲ್ಲಾದ ಬದಲಾವಣೆ ಕಾಣಿಸುತ್ತಾ ಇತ್ತು. ನಮ್ಮ ನಾಟಕದಲ್ಲಿ ಬರುವ, ಮೋಟು ಮತ್ತು ಪತ್ಲು ಇತರರಲ್ಲಿ ಏನೋ ವ್ಯತ್ಯಾಸವನ್ನು ನೋಡಿದಂತೆಯೇ ಅದು ಇತ್ತು.

ನಿಮಗಾಗಿ ಮತ್ತು ನಿಮ್ಮ ಪಾಪಗಳಿಗಾಗಿ ಕ್ರಯ ಪಾವತಿಸಲು ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಾಗ, ನೀವು ಆತನವರಾಗುವಿರಿ. ನೀವು ಆತನಿಗೆ ಸೇರಿದವರು ಎಂಬದಕ್ಕೆ ಪುರಾವೆಯಾಗಿ ಆತನು ನಿಮಗೆ ಪವಿತ್ರಾತ್ಮನನ್ನು ಕೊಡುತ್ತಾನೆ. ಪವಿತ್ರಾತ್ಮನು ನಿಮ್ಮಲ್ಲಿ ಪಾಪದ ಅರುಹನ್ನು ಹುಟ್ಟಿಸುತಾನೆ ಮತ್ತು ನೀವು ಕೆಟ್ಟ ಕಾರ್ಯಗಳನ್ನು ಮಾಡುವಾಗ ಅದನ್ನು ಒಪ್ಪಿಕೊಳ್ಳಲು ಹಾಗೂ ತಪ್ಪಾಯಿತೆಂದು ಹೇಳಲು ಸಹಾಯ ಮಾಡುತ್ತಾನೆ. ನೀವು ದೇವರೊಂದಿಗೆ ಅನ್ಯೋನ್ಯವಾಗಿ ಜೀವಿಸಲು ಮತ್ತು ಕ್ರೈಸ್ತನಾಗಿ ಬೆಳೆಯಲು ಆತನು ನಿಮಗೆ ಸಹಾಯ ಮಾಡುತ್ತಾನೆ.

ಈಗ, ಜೇಡಿಮಣ್ಣಿನಿಂದ ನಿಮ್ಮನ್ನು ಮಾಡಿರಿ.
ನಾವು ಇಂದು ಪ್ರಾರ್ಥನೆ ಮಾಡಿದೆವು, ಮತ್ತು ಇಂದಿನ ಕಥೆಯಲ್ಲಿ ಬರುವ ಜಕ್ಕಾಯನ ಹಾಗೆ ಒಂದುವೇಳೆ ನೀವು ಯೇಸು ಕ್ರಿಸ್ತನ ಹಿಂಬಾಲಕರಾಗಲು ಬಯಸುವದಾದರೆ, ನೀವು ದೇವರಿಗೆ ಸೇರಿದವರೆಂದು ತೋರಿಸಲು ನಿಮ್ಮ ಜೇಡಿಮಣ್ಣಿನ ಮೇಲೆ ಶಿಲುಬೆಯ "ಮುದ್ರೆಯನ್ನು" ಹಾಕಬಹುದು.
(ವಿದ್ಯಾರ್ಥಿಗಳಿಂದ ಜೇಡಿಮಣ್ಣನ್ನು ಹಿಂದಕ್ಕೆ ತೆಗೆದುಕೊಳ್ಳಿರಿ.)

# ಆಟ ಕಂಠಪಾಠ ವಚನ ಸಮಯ

ಮಕ್ಕಳನ್ನು ವೃತ್ತಾಕಾರದಲ್ಲಿ ನೆಲದ ಮೇಲೆ ಕೂರಿಸಿರಿ. ಮಕ್ಕಳಿಗೆ ಕಾಣಿಸುವ ರೀತಿಯಲ್ಲಿ ವಚನವನ್ನು ಫಲಕದ ಮೇಲಾಗಲಿ ಅಥವಾ ಹಾಳೆಯ ಮೇಲಾಗಲಿ ಬರೆಯಿರಿ. ನಂತರ ಪೋಲೀಸ್ ನಕ್ಷತ್ರ ಅಥವಾ ಬೇಡಿಗಳನ್ನು ತಮ್ಮ ಪಕ್ಕದಲ್ಲಿರುವ ಮಕ್ಕಳಿಗೆ ಕೊಡುವಂತೆ ಮಕ್ಕಳಿಗೆ ಹೇಳಿರಿ. ಯಾರ ಕೈಯಲ್ಲಿ ನಕ್ಷತ್ರ ಅಥವಾ ಬೇಡಿಗಳು ಸಿಗುತ್ತವೆಯೋ ಅವರು ವಚನದ ಮುಂದಿನ ಪದವನ್ನು ಹೇಳಬೇಕು. ಕಾರ್ಯಗಳನ್ನು ಕಷ್ಟಕರವನ್ನಾಗಿಸಲು, ವಚನದ ಮುಂದಿನ ಪದವನ್ನು ಹೇಳಲು ವೃತ್ತದೊಳಗಿರುವ ಯಾವ ಮಗುವಿಗಾದರೂ ನಕ್ಷತ್ರ ಅಥವಾ ಬೇಡಿಯನ್ನು ಬಿಸಾಡುವಂತೆ ವಿದ್ಯಾರ್ಥಿಗಳಿಗೆ ಹೇಳಿರಿ.ಯಾರ




# ತಿಂಡಿ ಹಣ್ಣುಗಳ ಕಬಾಬ್

**ಸಾಮಗ್ರಿಗಳು:**

- 2 ಆರೆಂಜ್
- 2 ಬಾಳೆ ಹಣ್ಣು
- 1 ಬಟ್ಟಲು ದ್ರಾಕ್ಷಿ
- 1 ಸಣ್ಣ ಪಪ್ಪಾಯ ಚಿಕ್ಕ ತುಂಡುಗಳಾಗಿ ಕತ್ತರಿಸಿರಿ
- 1 ಸಣ್ಣ ಕಲ್ಲಂಗಡಿ ಹಣ್ಣು ಚಿಕ್ಕ ತುಂಡುಗಳಾಗಿ ಕತ್ತರಿಸಿರಿ
- ಟೂತ್ ಪಿಕ್ಸ್
- ಚಾಟ್ ಮಸಾಲ ಎರಡು ಚಮಚ

(ಗಮನಿಸಿರಿ: ಮೇಲೆ ಉಪಯೋಗಿಸಬೇಕಾದ ಹಣ್ಣುಗಳ ಕುರಿತು ಸೂಚನೆಯನ್ನು ಕೊಡಲಾಗಿದೆ ಆದರೆ ನೀವು ನಿಮ್ಮ ಇಷ್ಟದ ಹಣ್ಣುಗಳನ್ನು ಸ್ಥಳೀಯ ಲಭ್ಯತೆಗನುಸಾರ ಬದಲಾಯಿಸಬಹುದು. ಎರಡು ಅಥವಾ ಮೂರು ವಿವಿಧ ಬಣ್ಣದ ಹಣ್ಣುಗಳನ್ನು ಬಳಸಬೇಕೆಂಬದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ. ಒಂದುವೇಳೆ ದೊಡ್ಡ ಗುಂಪಿನ ನಡುವೆ ಸೇವೆ ಮಾಡುತ್ತಾ ಇರುವದಾದರೆ ಹೆಚ್ಚು ಹಣ್ಣುಗಳನ್ನು ಉಪಯೋಗಿಸಿರಿ.)



**ಸೂಚನೆಗಳು:**

1.ಎಲ್ಲಾ ಹಣ್ಣುಗಳ ಸಿಪ್ಪೆ ತೆಗೆದು ಸಣ್ಣ ತುಂಡುಗಳಾಗಿ ಕತ್ತರಿಸಿ ಪ್ರತ್ಯೇಕವಾದ ಬಟ್ಟಲುಗಳಲ್ಲಿ ಇಡಿರಿ
2.ಪ್ರತಿಯೊಂದು ಮಗುವಿಗೆ ಟೂತ್ ಪಿಕ್ಸ್ ಕೊಡಿರಿ ಮತ್ತು ತಮ್ಮ ಸ್ವಂತ ಕಬಾಬ್ ಮಾಡುವಂತೆ, ಚಾಟ್ ಮಸಾಲಾ ಉದುರಿಸುವಂತೆ ಮತ್ತು ತಾವೇ ಮಾಡಿದ ಹಣ್ಣಿನ ಕಬಾಬ್ ಸವಿಯುಂತೆ ಅವಕಾಶ ಕೊಡಿರಿ.

# ಕರಕುಶಲ ದುರ್ಬೀನುಗಳು

**ಸಾಮಗ್ರಿಗಳು:**

- ಕತ್ತರಿಗಳು
- ಬಣ್ಣದ ಪೆನ್ಸ್, ಬಳಪಗಳು, ಅಥವಾ ಬಣ್ಣದ ಪೆನ್ಸಿಲ್
- ಗೋಂದು
- ಗುಂಗುರು ರಿಬ್ಬನ್
- ಹಾಳೆಯ ಪಂಚ್



**ಸೂಚನೆಗಳು:**

ಹಂತ 1. ದುರ್ಬೀನುಗಳು ಮತ್ತು ಎರಡು ಹಾಳೆಯ ಪಟ್ಟಿಗಳಿಗೆ ಬಣ್ಣ ಹಾಕಿರಿ, ನಿಮ್ಮ ಇಷ್ಟದ ಪ್ರಕಾರ ಅಲಂಕಾರ ಮಾಡಿರಿ.
ಹಂತ 2. ಚುಕ್ಕೆಯ ಗೆರೆಗಳಿಗನುಸಾರ ದುರ್ಬೀನುಗಳನ್ನು ಮತ್ತು ಪಟ್ಟಿಗಳನ್ನು ಕತ್ತರಿಸಿರಿ.
ಹಂತ 3. ದುರ್ಬೀನುಗಳ ಎರಡು ನಳಿಕೆಗಳನ್ನು ಸುತ್ತಿರಿ ಮತ್ತು ಭದ್ರವಾಗಿರಲು ಎರಡು ಕಡೆಗಳಿಗೆ ಗೋಂದು ಹಾಕಿರಿ.
ಹಂತ 4. ಸಣ್ಣ ಪಟ್ಟಿಗಳನ್ನು ಜಿಗ್ ಜಾಗ್ ಮಾದರಿಯಲ್ಲಿ ಮಡಚಿರಿ. (ಹಿಂದಕ್ಕೂ ಮುಂದಕ್ಕೂ 4 ಸಲ)
ಹಂತ 5. ತೋರಿಸಲಾಗಿರುವ ಪ್ರಕಾರ ನಳಿಕೆಗಳಿಗೆ ಪಟ್ಟಿಗಳನ್ನು ಸೇರಿಸಿರಿ, ಆಗ ನೀವು ದುರ್ಬೀನುಗಳು ನಿಮ್ಮ ಕಣ್ಣುಗಳಿಗೆ ಹೊಂದಿಕೆಯಾಗುವ ಹಾಗೆ ಸೇರಿಸಲು ಮತ್ತು ಬೇರ್ಪಡಿಸಲು ಸಾಧ್ಯವಾಗುತ್ತದೆ.
ಹಂತ 6. ನಳಿಕೆಯಲ್ಲಿ ರಂಧ್ರವನ್ನು ಮಾಡಿರಿ, ಅಲ್ಲಿ ಹಾಳೆಯು ಅತಿಕ್ರಮಿಸುತ್ತದೆ (ಬಲಿಷ್ಠವಾದ ಸ್ಥಳ) ಗುಂಗುರು ರಿಬ್ಬನ್ ಅನ್ನು ಎರಡು ನಳಿಕೆಯ ಹೊರಭಾಗಕ್ಕೆ ಕಟ್ಟಿರಿ ಆಗ ದುರ್ಬೀನನ್ನು ಕುತ್ತಿಯ ಸುತ್ತ ಹಾಕಿಕೊಳ್ಳಲು ಸಾಧ್ಯವಾಗುತ್ತದೆ.

# ಕರಕುಶಲ 4
# ದುರ್ಬೀನುಗಳು

“ಯೇಸುಸ್ವಾಮಿಯೇ ಪ್ರಭು” ಎಂದು ನೀನು ಬಾಯಿಂದ ನಿವೇದಿಸಿ, ಅವರನ್ನು ದೇವರು ಸಾವಿನಿಂದ ಪುನರುತ್ಥಾನಗೊಳಿಸಿದ್ದಾರೆಂದು ಹೃದಯದಿಂದ ವಿಶ್ವಾಸಿಸಿದರೆ ಜೀವೋದ್ಧಾರವನ್ನು ಹೊಂದುತ್ತೀಯೆ.” ರೋಮನರಿಗೆ 10:9

# 5 ಪ್ರತಿನಿಧಿ

## ಸತ್ಯವೇದ ಕಥೆ: ಶಿಷ್ಯರು ಮನುಷ್ಯರನ್ನು ಹಿಡಿಯುವ ಬೆಸ್ತರಾದರು

## ನಾಟಕ/ಸ್ಕಿಟ್

ಪ್ರಮುಖ ಇನ್ಸಪೆಕ್ಟರ್: ಹೇ, ಸಂಭಾವಿತನೇ! [ಕೈಗಳಿಂದ ಬಾಯಿ ಮುಚ್ಚಿಕೊಂಡು, "ಕಳ್ಳರು"]
ಪತ್ಲು: ಕೂಗುತ್ತಾ, ಪ್ರಮುಖ ಇನ್ಸಪೆಕ್ಟರ್.
ಮೋಟು: ಎಲ್ಲಿರುವೆ!
ಪ್ರಮುಖ ಇನ್ಸಪೆಕ್ಟರ್: ಏನು ಸಮಾಚಾರ?
ಪತ್ಲು: ಅಂಥದ್ದೇನೂ ಇಲ್ಲ, ಆದರೆ ಪರವಾಗಿಲ್ಲ.
ಮೋಟು: ಹೌದು, ಎಲ್ಲಾ ಸಮಾರಾಗೇ ಇದೆ.
ಪ್ರಮುಖ ಇನ್ಸಪೆಕ್ಟರ್: ಹೌದು? ಒಂದುವಾರದ ಹಿಂದೆ ನೀನು ಅಡಗಿಕೊಂಡಿದ್ದ ಸ್ಥಳವನ್ನು ನಾನು ಪತ್ತೆಹಚ್ಚಿದ್ದೆನು, ಮತ್ತು ನಿನಗೇ ನೆನಪಿಲ್ಲದೆ ಇರುವಂಥ ನಿನ್ನ ಅಪರಾಧಗಳಿಗಾಗಿ ನಿನ್ನನ್ನು ಕಾರಾಗೃಹಕ್ಕೆ ಕಳುಹಿಸ ಬೇಕೆಂದಿದ್ದೆನು, ಅಲ್ಲವೇ?
ಪತ್ಲು: ಹೌದು, ನನಗೆ ನೆನಪಿದೆ.
ಮೋಟು: ನಾವು ಖಂಡಿತವಾಗಿಯೂ ಹಿಂದಿನ ಕಾರ್ಯಗಳನ್ನು ಬಿಟ್ಟು ಉತ್ತಮವಾಗಿ ಜೀವಿಸುತ್ತಾ ಇದ್ದೇವೆ.
ಪ್ರಮುಖ ಇನ್ಸಪೆಕ್ಟರ್: ನಾನೂ ಹಾಗೆಯೇ ಅಂದುಕೊಂಡಿದ್ದೇನೆ.
ಪತ್ಲು: ನಾವು ಅರಸನ ಪ್ರಸ್ತಾಪವನ್ನು ಅಂಗೀಕರಿಸಿಕೊಂಡಿದ್ದೇವೋ ಇಲ್ಲವೋ ಎಂದು ನೀನು ನಮ್ಮನ್ನು ಕೇಳಿಯೇ ಇಲ್ಲಾ.
ಪ್ರಮುಖ ಇನ್ಸಪೆಕ್ಟರ್: [ನಗುತ್ತಾ] ನಾನು ಇದನ್ನು ಮರೆತುಹೋಗಿದ್ದೇನೆ ಎಂದು ನೀವು ನೆನೆಸಿದಿರೋ? ಆತನ ಪ್ರಸ್ತಾಪವನ್ನು ನೀವು ಅಂಗೀಕರಿಸಿಕೊಳ್ಳುವಿರಿ ಎಂದು ನನಗೆ ಮೊದಲೇ ಗೊತ್ತಿತ್ತು. ಇದು ಆತನಿಗೂ ಗೊತ್ತಿತ್ತು.
ಪತ್ಲು: ಹೌದು, ಆ ಒಂದು ಕೆಲಸವನ್ನು ನಮಗಾಗಿ ಮಾಡುವಂತೆ ಆತನೇ ನಮಗೆ ಹೇಳಿದನು.
ಮೋಟು: ನಾವು ಆತನಿಗಾಗಿ ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡುವಂತೆ ಆತನು ಹೇಳುವನೇನೋ ಎಂದು ನಾವು ಯೋಚಿಸುತ್ತಾ ಇದ್ದೆವು.
ಪ್ರಮುಖ ಇನ್ಸಪೆಕ್ಟರ್: ಅರಸನ ಬಳಿಯಿಂದ ನಾನು ನಿಮಗೊಂದು ಹೊಸ ಕೆಲಸವನ್ನು ತೆಗೆದುಕೊಂಡು ಬಂದಿದ್ದೇನೆ.
ಪತ್ಲು: ಸರಿ, ಸರಿ, ಅದು ಯಾವ ರೀತಿಯ ಕೆಲಸ? ನಾವು ಸಿದ್ಧರಾಗಿದ್ದೇವೆ [ಪಕ್ಷಿಯಂತೆ ರೆಕ್ಕೆಗಳನ್ನು ಬಡಿಯುತ್ತಾ] ಸ್ವತಂತ್ರರಾಗಿದ್ದೇವೆ . . .
ಪ್ರಮುಖ ಇನ್ಸಪೆಕ್ಟರ್: ಪಟ್ಟಣದ ದಕ್ಷಿಣ ಭಾಗದಲ್ಲಿ ಕೆಲವು ಕಳ್ಳರು ಬಹಳ ತೊಂದರೆ ಕೊಡುತ್ತಿವೆ.
ಪತ್ಲು: ನನ್ನ ಅಮೂಲ್ಯವಾದ ಕೌಶಲ್ಯದಿಂದ ನಾನು ಹೋಗಿ ಅವುಗಳನ್ನು ಹುಡುಕಬೇಕೋ?
ಮೋಟು: ಹೌದು, ಅವರ ಮೇಲೆ ಬೀಳುವ ಸಾಮರ್ಥ್ಯ ನನಗೆ ಇದೆ?
ಪತ್ಲು: ನಾವು ಒಳ್ಳೆಯ ಬೇಟೆಗಾರರು, ಗೊತ್ತಿದೆಯೇ?
ಪ್ರಮುಖ ಇನ್ಸಪೆಕ್ಟರ್: ಹೌದು, ಅವುಗಳು ಈಗ ಎಲ್ಲಿರುತ್ತವೆ ಮತ್ತು ಏನು ಮಾಡುತ್ತಿರುತ್ತವೆ ಎಂಬದು ನಮಗೆ ಚೆನ್ನಾಗಿ ಗೊತ್ತಿದೆ.
ಪತ್ಲು: ಹಾಗಾದರೆ ನಮ್ಮ ಕೆಲಸ ಬಹಳ ಸುಲಭವಾಗುತ್ತದೆ.
ಮೋಟು: ಹಾಗಾದರೆ ನಾವೇನು ಮಾಡಬೇಕೆಂಬದು ನಿಮ್ಮ ಬಯಕೆ?
ಪ್ರಮುಖ ಇನ್ಸಪೆಕ್ಟರ್: ಇಂದು ರಾತ್ರಿಯೇ ನೀವು ಅವರನ್ನು ಹಳ್ಳದ ಹತ್ತಿರ ಇರುವ ಸೇತುವೆಯ ಕೆಳಗೆ ಹಿಡಿಯಬಹುದು.
ಮೋಟು: ಹಿಡಿದ ನಂತರ ನಾವು ಅವುಗಳನ್ನು ಏನು ಮಾಡಬೇಕು?
ಪ್ರಮುಖ ಇನ್ಸಪೆಕ್ಟರ್: ನೀವು ಅವರಿಗೆ ಅರಸನ ಪ್ರಸ್ತಾಪವನ್ನು ತಿಳಿಸಬೇಕು.
ಪತ್ಲು: ಅವುಗಳು ಪ್ರಸ್ತಾಪವನ್ನು ಕೇಳಿಸಿಕೊಳ್ಳುತ್ತವೆಯೇ?
ಪ್ರಮುಖ ಇನ್ಸಪೆಕ್ಟರ್: ಅವರು ನಿಮ್ಮಂತೆ ಇಲ್ಲದೆ ಇದ್ದರೆ ಮಾತ್ರ.
ಪತ್ಲು: ನಮ್ಮಂತೆಯೇ?
ಪ್ರಮುಖ ಇನ್ಸಪೆಕ್ಟರ್: ನೀವು ಬೇಕರಿಯಲ್ಲಿ ಕಳ್ಳತನ ಮಾಡಿದಾಗ, ಅಂಗಡಿಯವನು ನಿಮಗೊಂದು ಪ್ರಸ್ತಾಪ ಮಾಡಿದನು.
ಮೋಟು: ನಾವೇ ಅಲ್ಲಿಗೆ ಹೋಗಬೇಕೆಂದು ಆತನು ಹೇಳಿದನು.
ಪ್ರಮುಖ ಇನ್ಸಪೆಕ್ಟರ್: ಹೌದು, ಅದು ನಿಮಗೆ ದೊರೆತ ಮೊದಲ ಪ್ರಸ್ತಾಪವಾಗಿದೆ.
ಪತ್ಲು: ಅದು, ನ್ಯಾಯಾಧಿಪತಿಯಿಂದ, ಬೇಕರಿಯವನಿಂದ, ಅರಸನಿಂದ ಬಂದದ್ದು ತಾನೆ?
ಪ್ರಮುಖ ಇನ್ಸಪೆಕ್ಟರ್: ನೀವು ಬೇಗ ಗ್ರಹಿಸಿಕೊಳ್ಳುವದಿಲ್ಲ. ಇರಲಿ, ಇವುಗಳನ್ನು ತೆಗೆದುಕೊಳ್ಳಿರಿ.
ಪತ್ಲು: ಬ್ಯಾಡ್ಜ್ ಗಳಾ? ಅವುಗಳು ಆಟದ ನಕ್ಷತ್ರಗಳಂತೆ ಕಾಣಿಸುತ್ತವೆ.
ಮೋಟು: ಸರ್, ಏನು ಮಾಡಲು ಪ್ರಯತ್ನಿಸುತ್ತಾ ಇರುವೆ?
ಪ್ರಮುಖ ಇನ್ಸಪೆಕ್ಟರ್: ಈ ಪಟ್ಟಣದಲ್ಲಿರುವ ಉತ್ತಮರಿಗೆ ಪ್ರಸ್ತಾಪಗಳನ್ನು ತಿಳಿಸುವ ಕಾರ್ಯದಲ್ಲಿ ನೀವು ಆಸಕ್ತಿ ತೋರಿಸಬಹುದೇನೋ ಎಂಬದು ಮಾನ್ಯರ ಆಲೋಚನೆಯಾಗಿದೆ.
ಮೋಟು: ನಾವೂ ಜನರನ್ನು ಬಂಧಿಸಬಹುದೇ? ಈ ನಕ್ಷತ್ರದ ಅರ್ಥ "ನಾವು ಈ ದಿನಕ್ಕೆ ಪೋಲೀಸರಾಗಿದ್ದೇವೆ" ಎಂಬದಾಗಿದೆಯೇ?
ಪ್ರಮುಖ ಇನ್ಸಪೆಕ್ಟರ್: ಕೆಲವೊಮ್ಮೆ. ಅರಸನು ಎಲ್ಲರಿಗೂ ನ್ಯಾಯಸಿಗಬೇಕು ಎಂಬದನ್ನು ಎದುರುನೋಡುತ್ತಾ ಇದ್ದಾನೆ. ನೀವು ಆ ಯೋಜನೆಯ ಭಾಗವಾಗಿರುವಿರಿ. ಆತನು ಪ್ರಸ್ತಾಪವನ್ನು ತಿಳಿಸಲು ಬಯಸುವ ಜನರ ದೊಡ್ಡ ಪಟ್ಟಿಯೇ ನನ್ನ ಬಳಿ ಇದೆ. ಅದನ್ನು ತಿಳಿಸಲು ನಾವು ಸರಿಯಾಗಿರುವ ಸಮಯವನ್ನು ಎದುರುನೋಡುತ್ತಾ ಇದ್ದೇವೆ ಅಷ್ಟೆ.

# ಮುಖ್ಯ ಪಾಠ

## ಲೂಕ 5:1-11

ನೀವು ಬೇಕಾಗಿದ್ದಿರಿ. ನಿಮ್ಮನ್ನು ಕಾರಾಗೃಹಕ್ಕೆ ಹಾಕಲಾಯಿತು.
ಜಾಮೀನು ಕೊಟ್ಟು ಬಿಡಿಸಲಾಯಿತು. ನಿಮಗೆ ಮುದ್ರೆ ಹಾಕಲಾಗಿದೆ. ಇಂದು ನಾವು ಪ್ರಾತಿನಿಧ್ಯದ ಬಗ್ಗೆ ಮಾತನಾಡುತ್ತಾ ಇದ್ದೇವೆ! ಹೌದು; ಯೇಸು ಕ್ರಿಸ್ತನು ನಿಮಗಾಗಿ ಒಂದು ಕೆಲಸವನ್ನು ಇಟ್ಟಿದ್ದಾನೆ! "ಆದರೆ ನಾನು ಅದಕ್ಕೆ ಸಿದ್ಧನಿಲ್ಲ" ಎಂದು ನೀವು ಹೇಳುತ್ತೀರೋ? ಯೇಸು ಕ್ರಿಸ್ತನು ನಿಮ್ಮನ್ನು ಉಪಯೋಗಿಸಿಕೊಳ್ಳಲೆಂದೇ ಆರಿಸಿಕೊಂಡಿದ್ದಾನೆ. ಯೇಸು ಕ್ರಿಸ್ತನು ನನ್ನನ್ನು ಹಿಂಬಾಲಿಸಿರಿ ಎಂದು ಅನೇಕರಿಗೆ ಹೇಳಲು ಬಯಸುತ್ತಿದ್ದಾನೆ ಆದರೆ ಅವರು ಅದನ್ನು ಕೇಳಿಸಿಕೊಳ್ಳಬೇಕಾಗಿದೆ.
ದೇವರನ್ನು ಮೆಚ್ಚಿಸಲು ಒಳ್ಳೆಯವರಾಗಿರಬೇಕೆಂದು ನಂಬುವಂಥ ಅನೇಕ ಸ್ನೇಹಿತರು ನಿಮಗೆ ಇರಬಹುದು. ಆದರೆ ಅದು ಸತ್ಯವಲ್ಲ. ನಿಮಗೆ ಪಾಠ ನೆನಪಿದೆಯೇ? ಯೇಸು ಕ್ರಿಸ್ತನು ಆರೋಗ್ಯವಂತರಿಗಾಗಲ್ಲ, ಅನಾರೋಗ್ಯದಲ್ಲಿರುವವರಿಗಾಗಿ ಪ್ರಾಣ ಕೊಟ್ಟನು. ಆದ್ದರಿಂದ ನಾವು ಆರೋಗ್ಯವಾಗಿದ್ದೇವೆ ಎಂದು ಯೋಚಿಸಿ ನಮ್ಮ ಸ್ವಂತ ಬಲದಲ್ಲಿ ಒಳ್ಳೆಯವರಾಗಿರಲು ಪ್ರಯತ್ನಿಸುವದಾದರೆ, ಇಡೀ ವಿಷಯವನ್ನು ಗ್ರಹಿಸದವರಾಗಿದ್ದೇವೆ!
ನಾವು ಒಳ್ಳೆಯವರಾಗಿದ್ದರೆ ಮಾತ್ರ ದೇವರಿಗೆ ಸಾಲದು. ನಾವು ಪಾಪಿಗಳು ಎಂಬದನ್ನು ಒಪ್ಪಿಕೊಳ್ಳಬೇಕು ಮತ್ತು ನಮ್ಮ ಪಾಪಗಳಿಗೆ ಕ್ರಯ ಪಾವತಿಸಲು ಯೇಸು ಕ್ರಿಸ್ತನಿಗೆ ಅನುಮತಿಸಬೇಕು ಎಂಬದನ್ನು ಆತನು ಬಯಸುತ್ತಾನೆ.

ಸತ್ಯವೇದದ ಇಂದಿನ ನಮ್ಮ ಪ್ರಮುಖ ವಚನ ಏನೆಂದರೆ, "ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ? ಸಾರಿ ಹೇಳುವವನಿಲ್ಲದೆ ಕೇಳುವದು ಹೇಗೆ? ಸಾರುವವರು ಕಳುಹಿಸಲ್ಪಡದೆ ಸಾರುವದೆಲ್ಲಿ?" ರೋಮಾ 10:14ಬಿ

ಹೀಗಿರುವದರಿಂದ ನಿಮ್ಮ ಮುಂದಿರುವ ಪ್ರಶ್ನೆ ಏನೆಂದರೆ: ನೀವು ನಿಮ್ಮ ಸ್ನೇಹಿತರಿಗೆ ಯೇಸು ಕ್ರಿಸ್ತನ ಬಗ್ಗೆ ಹೇಳದಿದ್ದರೆ ಆತನ ಬಗ್ಗೆ ಅವರು ಕೇಳಿಸಿಕೊಳ್ಳಲು ಹೇಗೆ ಸಾಧ್ಯ?

ನೀವು ಎಂದಾದರು ಯಾರಿಗಾದರೂ ಸಾರಬೇಕಾದ ಶುಭವಾರ್ತೆಯನ್ನು ಹೊಂದಿದ್ದಿರೋ? ಏನಾಯಿತು ಎಂಬದನ್ನು ಅವರಿಗೆ ತಿಳಿಸುವ ಆತುರತೆ ನಿಮ್ಮಲ್ಲಿ ಇದ್ದಿರಬಹುದು. ಹೌದು, ದೇವರು ನಮಗೆ ಶುಭವಾರ್ತೆಯನ್ನು ಕೊಟ್ಟಿದ್ದಾನೆ. ನಮ್ಮ ಪಾಪಗಳಿಗಾಗಿ ನಾವು ಕ್ರಯಪಾವತಿಸುವ ಅವಶ್ಯಕತೆ ಇಲ್ಲ; ಆ ಕಾರ್ಯವನ್ನು ಮಾಡುವದಾಗಿ ಯೇಸು ಕ್ರಿಸ್ತನು ಹೇಳಿದ್ದಾನೆ.
ಆದ್ದರಿಂದ, ನಿಮ್ಮ ಸ್ನೇಹಿತರಿಗೆ ನೀವು ಸುವಾರ್ತೆ ಹೇಳದೆ ಹೋದರೆ ಅವರು ಕೇಳುವದು ಹೇಗೆ?

ಒಂದುದಿನ ಯೇಸು ಕ್ರಿಸ್ತನು ಗಲಿಲಾಯ ಸಮುದ್ರದ ಬಳಿಯಲ್ಲಿ ನಿಂತುಕೊಂಡಿದ್ದನು, ಮತ್ತು ಜನರ ದೊಡ್ಡ ಗುಂಪು ಆತನು ಹೇಳುವ ದೇವರ ವಾಕ್ಯಗಳನ್ನು ಕೇಳಲು ಸೇರಿ ಬರುತ್ತಾ ಇತ್ತು. ಜನರ ಗುಂಪು ದೊಡ್ಡದಾಗುತ್ತಿದ್ದಾಗ, ಎಲ್ಲರೂ ಕೇಳಿಸಿಕೊಳ್ಳಬೇಕೆಂದು ಯೇಸು ಕ್ರಿಸ್ತನು ಬಯಸಿದನು. ಆತನು ಪೇತ್ರನ ದೋಣಿಯನ್ನು ಹತ್ತಿದನು ಮತ್ತು ಅದನ್ನು ಸ್ವಲ್ಪ ದೂರಕ್ಕೆ ನೂಕಬೇಕೆಂದು ಹೇಳಿದನು. ನಂತರ ಆತನು ಕುಳಿತುಕೊಂಡನು ಮತ್ತು ದೋಣಿಯಿಂದಲೇ ಅವರಿಗೆ ಕಲಿಸಿದನು.

ಯೇಸು ಕ್ರಿಸ್ತನು ಜನರೊಂದಿಗೆ ಹಂಚಿಕೊಂಡದ್ದನ್ನು ಮುಗಿಸಿದ ನಂತರ, ಪೇತ್ರನಿಗೆ ತನ್ನೊಂದಿಗೆ ಮೀನು ಬೇಟೆಗೆ ಬರುವಂತೆ ಹೇಳಿದನು. ಪೇತ್ರನು ಇಡೀ ರಾತ್ರಿ ಕೆಲಸ ಮಾಡಿದ್ದನು ಆದರೂ ಮೀನು ಹಿಡಿಯಲು ಆತನೊಂದಿಗೆ ದೋಣಿಯನ್ನು ಹತ್ತಿದನು. (ಪೇತ್ರನೂ ಸೇರಿ) ಮೀನುಗಾರರು ತಮ್ಮ ಬಲೆಗಳನ್ನು ಬೀಸಿದಾಗ, ರಾಶಿರಾಶಿ ಮೀನುಗಳು ಸಿಕ್ಕಿದವು ಮತ್ತು ಬಲೆಗಳು ಹರಿದುಹೋಗಲಾರಂಭಿಸಿದವು! ಪೇತ್ರ, ಯಾಕೋಬ ಮತ್ತು ಯೋಹಾನ ತಮಗೆ ಮೀನು ದೊರಕಿದ್ದನ್ನು ನೋಡಿ ಬಹಳ ಆಶ್ಚರ್ಯಪಟ್ಟರು.
ಪೇತ್ರನು ಮೊಣಕಾಲೂರಿದನು ಮತ್ತು ಹೇಳಿದ್ದೇನೆಂದರೆ, "ಸ್ವಾಮಿ, ನಾನು ಪಾಪಾತ್ಮನು, ನನ್ನನ್ನು ಬಿಟ್ಟುಹೋಗಬೇಕು!" ಅವರನ್ನು ಅಲ್ಲಿಯೇ ಬಿಡದೆ, ಯೇಸು ಕ್ರಿಸ್ತನು ಹೇಳಿದ್ದೇನೆಂದರೆ, "ಅಂಜಬೇಡ, ಇಂದಿನಿಂದ ನೀನು ಮನುಷ್ಯರನ್ನು ಹಿಡಿಯುವವನಾಗಿರುವಿ."

ಯೇಸು ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು ಮತ್ತು ದೇವರೊಂದಿಗಿನ ನಮ್ಮ ಸಂಬಂಧವನ್ನು ಸರಿಪಡಿಸಿಕೊಳ್ಳಲು ಆತನೇ ನಮಗೆ ಮಾರ್ಗವನ್ನು ಸಿದ್ಧಮಾಡಿದ್ದಾನೆ ಎಂಬ ಸುವಾರ್ತೆಯನ್ನು ಸಾರಬೇಕೆಂದು ನಮಗೆ ಹೇಳಿದ್ದಾನೆ. ನಾವು ಯೇಸು ಕ್ರಿಸ್ತನನ್ನು ಹಿಂಬಾಲಿಸುವಾಗ, ನಮ್ಮ ಸ್ನೇಹಿತರೊಂದಿಗೆ, ಕುಟುಂಬದವರೊಂದಿಗೆ ಮತ್ತು ನೆರೆಯವರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳುವಂಥ ಜನರಾಗುತ್ತೇವೆ.
ನಿಮಗೆ ಇದು ಇಷ್ಟವೇ?
ಪ್ರಾರ್ಥನೆ ಮಾಡೋಣ.
"ಯೇಸುವೇ, ನಾನು ನನ್ನ ಸ್ನೇಹಿತರೊಂದಿಗೆ ಮತ್ತು ಕುಟುಂಬದವರೊಂದಿಗೆ ಹಂಚಿಕೊಳ್ಳುವಂಥ ಸುವಾರ್ತೆಯನ್ನು ನನಗೆ ಕೊಟ್ಟಿರುವದಕ್ಕಾಗಿ ನಿನಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಾನು ನಿನಗೆ ವಿಧೇಯನಾಗುತ್ತೇನೆ. ಇತರರೊಂದಿಗೆ ನಿನ್ನ ಬಗ್ಗೆ ಹೇಳುವ ಆಯ್ಕೆಯನ್ನು ನಾನು ಮಾಡಿಕೊಳ್ಳುತ್ತೇನೆ. ನನಗೆ ಸಹಾಯ ಮಾಡಿದ್ದಕ್ಕಾಗಿ ನಿನಗೆ ಸ್ತೋತ್ರಗಳು."

ಇಂದಿನ ನಾಟಕ/ಸ್ಕಿಟ್ ನಂತೆಯೇ, ನಾನು ಮತ್ತು ನೀವುಗಳು ಪ್ರತಿನಿಧಿಗಳಾಗಿದ್ದೇವೆ! ಆದರೆ ಇಲ್ಲಿಗೆ ಮುಗಿಯುವದಿಲ್ಲ, ಮನುಷ್ಯರನ್ನು ಹಿಡಿಯುವ ಬೆಸ್ತರಾಗಿರಿ ಎಂದು ಯೇಸು ಕ್ರಿಸ್ತನು ನಮಗೆ ಹೇಳಿದ್ದಾನೆ. ಇತರರೊಂದಿಗೆ ಹಂಚಿಕೊಳ್ಳುವ ಶುಭವಾರ್ತೆ ನಮಗಿದೆ.

ಐದು ವಚನಗಳನ್ನು ನಾವೆಲ್ಲರೂ ಒಟ್ಟಾಗಿ ಹೇಳೋಣ.
1.ರೋಮಾ 3:3 "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ."
2.ರೋಮಾ 6:23 "ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ."
3.ರೋಮಾ 5:8 "ಆದರೆ ನಾವು ಪಾಪಿಗಳಾಗಿದ್ದಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ."
4.ರೋಮಾ 10:9 "ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ."
5.ರೋಮಾ 10:14ಬಿ " . . . ಮತ್ತು ಆತನು ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ? ಸಾರುವವರು ಕಳುಹಿಸಲ್ಪಡದೆ ಸಾರುವದೆಲ್ಲಿ?"

# ಕಂಠಪಾಠ ವಚನ

" ಭುವಿನಲ್ಲಿ ವಿಶ್ವಾಸವಿಲ್ಲದಿದ್ದರೆ ಅವರ ನಾಮಸ್ಮರಣೆ ಮಾಡುವುದಾದರೂ ಹೇಗೆ? ಅವರ ವಿಷಯವನ್ನು ಕುರಿತು ಕೇಳದಿದ್ದರೆ ಅವರನ್ನು ವಿಶ್ವಾಸಿಸುವುದಾದರೂ ಹೇಗೆ? ಬೋಧಿಸುವವರು ಇಲ್ಲದಿದ್ದರೆ ಅವರ ವಿಷಯವನ್ನು ಕುರಿತು ಕೇಳುವುದಾದರೂ ಹೇಗೆ?" ರೋಮನರಿಗೆ 10:14


# ಮತದಾನ

ಒಂದುವೇಳೆ ಅವರು ಶಿಷ್ಯರಲ್ಲಿ ಒಬ್ಬರಾಗಿರುವದಾದರೆ, ವೈಯಕ್ತಿಕವಾಗಿ ಅವರ ಭಾವನೆ ಹೇಗಿರುವದು ಎಂಬದನ್ನು ಊಹಿಸಿಕೊಳ್ಳುವದು ಒಳ್ಳೆಯದಾಗಿದೆ? ಅವರು ಯಾವುದರ ಬಗ್ಗೆ ಚಿಂತಿಸುತ್ತಿರಬಹುದು? ತಮ್ಮ ಬಲೆಗಳಿಂದ ಮೀನು ಹಿಡಿಯುವದನ್ನು ನಿಲ್ಲಿಸಿದರೆ ಅವರು ಹೇಗೆ ಹಣವನ್ನು ಸಂಪಾದಿಸುವರು? ಅವರಿಂದ ಅವರ ಕುಟುಂಬದವರಿಗೆ ನಿರಾಸೆಯಾಗಬಹುದೇ?

"ಇಂದಿನಿಂದ ನೀನು ಮನುಷ್ಯರನ್ನು ಹಿಡಿಯುವವನಾಗಿರುವಿ" ಎಂದು ಯೇಸು ಕ್ರಿಸ್ತನು ಹೇಳಿದ ಮಾತುಗಳು ಶಿಷ್ಯರಿಗೆ ಅರ್ಥವಾಯಿತೇ?

*ದೋಣಿಯೊಳಗಿದ್ದ ವ್ಯಕ್ತಿಗಳಿಗೆ ಜನರನ್ನು ಅವರ ಮೀನಿನಬಡಿಗೆ ಮತ್ತು ಬಲೆಗಳೊಂದಿಗೆ ನೀರಿನಿಂದ ಹೊರಗೆ ಹೇಗೆ ಕಳುಹಿಸಬೇಕು ಎಂಬದು ಅರ್ಥವಾಗಲಿಲ್ಲ.

*ಮೀನು ಹಿಡಿಯುವದನ್ನು ಬಿಟ್ಟು ರಕ್ಷಣೆ ಹೊಂದುವದು ಹೇಗೆ ಎಂದು ಜನರಿಗೆ ಹೇಳುವದನ್ನು ಕಲಿತುಕೊಳ್ಳಬೇಖಕು ಎಂಬದಾಗಿ ಯೇಸು ಕ್ರಿಸ್ತನು ನಮಗೆ ಹೇಳುತ್ತಿದ್ದಾನೆ ಎಂಬದನ್ನು ದೋಣಿಯೊಳಗಿದ್ದ ವ್ಯಕ್ತಿಗಳು ಅರ್ಥಮಾಡಿಕೊಂಡರು.


5 ಮತದಾನದ ಸಮಯ

ಶಿಷ್ಯರು ಮನುಷ್ಯರನ್ನು ಹಿಡಿಯುವ ಬೆಸ್ತರಾದರು

"ಇಂದಿನಿಂದ ನೀನು ಮನುಷ್ಯರನ್ನು ಹಿಡಿಯುವವನಾಗಿರುವಿ" ಎಂದು ಯೇಸು ಕ್ರಿಸ್ತನು ಹೇಳಿದ ಮಾತುಗಳು ಶಿಷ್ಯರಿಗೆ ಅರ್ಥವಾಯಿತೇ?

| ದೋಣಿಯೊಳಗಿದ್ದ ವ್ಯಕ್ತಿಗಳಿಗೆ ಜನರನ್ನು ಅವರ ಮೀನಿನಬಡಿಗೆ ಮತ್ತು ಬಲೆಗಳೊಂದಿಗೆ ನೀರಿನಿಂದ ಹೊರಗೆ ಹೇಗೆ ಕಳುಹಿಸಬೇಕು ಎಂಬದು ಅರ್ಥವಾಗಲಿಲ್ಲ. | ಮೀನು ಹಿಡಿಯುವದನ್ನು ಬಿಟ್ಟು ರಕ್ಷಣೆ ಹೊಂದುವದು ಹೇಗೆ ಎಂದು ಜನರಿಗೆ ಹೇಳುವದನ್ನು ಕಲಿತುಕೊಳ್ಳಬೇಖಕು ಎಂಬದಾಗಿ ಯೇಸು ಕ್ರಿಸ್ತನು ನಮಗೆ ಹೇಳುತ್ತಿದ್ದಾನೆ ಎಂಬದನ್ನು ದೋಣಿಯೊಳಗಿದ್ದ ವ್ಯಕ್ತಿಗಳು ಅರ್ಥಮಾಡಿಕೊಂಡರು. |
|---|---|
| ಸುಲಭ | |
| ಸುಲಭ | |
| ಕಷ್ಟ | |
| ಕಷ್ಟ | |

Equip & Grow
ಮಕ್ಕಳ ಪ್ರಮುಖರು



# ದಿನ 5 ವಿದ್ಯಾರ್ಥಿ ಪುಸ್ತಕಗಳು


## ದೊಡ್ಡ ಮಕ್ಕಳಿಗೆ ಪ್ರಶ್ನೆಗಳು ಮತ್ತು ಉತ್ತರಗಳು

**1."ಈಗಿನಿಂದ ನೀನು, ಮನುಷ್ಯರನ್ನು ಹಿಡಿಯುವ ಬೆಸ್ತನಾಗುವೆ" ಎಂದು ಯೇಸು ಕ್ರಿಸ್ತನು ಪೇತ್ರನಿಗೆ ಹೇಳಿದ ಮಾತುಗಳ ಅರ್ಥ ಏನು?**
ಉತ್ತರ: ಆತನು ಪೇತ್ರನಿಗೆ ನಿನ್ನ ಕೆಲಸವು ಬದಲಾಗುತ್ತದೆ ಮತ್ತು ಈಗಿನಿಂದ ನೀನು ದೋಣಿಯಲ್ಲಿ ಕೆಲಸ ಮಾಡುವದಿಲ್ಲ. ಅವರಿಗೆ ಬೇರೆಬೇರೆ ಕಡೆಗಳಿಗೆ ಹೋಗಿ ಎಲ್ಲರಿಗೂ ತನ್ನ ಬಗ್ಗೆ ಹೇಳಬೇಕೆಂದು ಯೇಸು ಕ್ರಿಸ್ತನು ಬಯಸಿದನು. ಯೇಸು ಕ್ರಿಸ್ತನ ಬಗ್ಗೆ ಹೇಳುವಾಗ ಯಾರಾದರು ಆತನನ್ನು ನಂಬುವಾಗ, ಅದು ದೊಡ್ಡ ಬೆಲೆಯ ಮೀನು ಹಿಡಿಯುವದಕ್ಕೆ ಸಮಾನವಾಗಿರುತ್ತದೆ.


**2.ನಾವು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟ ನಂತರ ಆತನು ಏನು ಮಾಡಲು ಬಯಸುತ್ತಾನೆ ಎಂಬದನ್ನು ವಿವರಿಸಿರಿ?**
ಉತ್ತರ: "ಆದದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ" ... "ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ" (ಮತ್ತಾಯ 28:19,20). ಯೇಸು ಕ್ರಿಸ್ತನ ವಿಷಯವಾಗಿ ನಾವು ಏನನ್ನು ನಂಬುತ್ತೇವೆ ಮತ್ತು ಆತನು ಏನು ಮಾಡಿದ್ದಾನೆ ಎಂಬ ವಿಷಯವಾಗಿ ನಾವೆಲ್ಲರೂ ಇತರರಿಗೆ ಹೇಳಬೇಕೆಂದು ಆತನು ಬಯಸುತ್ತಾನೆ.

**3.ಒಂದುವೇಳೆ ನಿಮ್ಮ ಸ್ನೇಹಿತನು ಯೇಸು ಕ್ರಿಸ್ತನ ಬಗ್ಗೆ ನೀವು ಹೇಳುವದನ್ನು ಕೇಳಿಸಿಕೊಳ್ಳುತ್ತಾ ಇರುವದಾದರೆ ಮತ್ತು ನಂಬುವದಾದರೆ, ಮುಂದೇನು ಮಾಡುವಿರಿ?**
ಉತ್ತರ: ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಮತ್ತು ಕರ್ತನಾಗಿ ಅಂಗೀಕರಿಸಿಕೊಳ್ಳುವಂತೆ ಹಾಗೂ ನಮ್ಮ ಪಾಪಗಳನ್ನು ಕ್ಷಮಿಸು ಎಂಬದಾಗಿ ಬೇಡಿಕೊಳ್ಳುವಂತೆ ಅವರಿಗೆ ಹೇಳಿರಿ. ಶಿಕ್ಷಕರೇ, ಒಂದುವೇಳೆ ನಿಮಗೆ ಸಮಯ ಇರುವದಾದರೆ, ಮಕ್ಕಳೊಂದಿಗೆ ಸರಳವಾಗಿರುವ ರಕ್ಷಣೆಯ ಪ್ರಾರ್ಥನೆಯನ್ನು ಅಭ್ಯಾಸ ಮಾಡಿರಿ ಮತ್ತು ಅವರು ಒಬ್ಬರೊಂದಿಗೊಬ್ಬರು ಅಭ್ಯಾಸ ಮಾಡುವಂತೆ ಮುನ್ನಡೆಸಿರಿ.

ಈ ಚಿತ್ರವು ಅವ್ಯವಸ್ಥೆಯಾಗಿದೆ. ಈ ಡಬ್ಬಿಗಳಲ್ಲಿ ಪ್ರತಿಯೊಂದು ಸಂಖ್ಯೆ ಎಲ್ಲಿ ಬರಬೇಕೋ ಅಲ್ಲಿ ಬರೆಯಿರಿ.




"ನಾನು ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುತ್ತೇನೆ." ಇವುಗಳಲ್ಲಿ ಯಾವುದನ್ನು ಹಿಡಿಯಲು ನೀವು ಏನನ್ನು ಉಪಯೋಗಿಸುವಿರಿ?




# ವಿದ್ಯಾರ್ಥಿ ಪುಸ್ತಕಗಳು


## ಅವ್ಯವಸ್ಥೆ

ಚಿತ್ರವನ್ನು ತೋರಿಸುವ ಬಾಣದೊಂದಿಗೆ ಪ್ರಾರಂಭಿಸಿರಿ ಮತ್ತು ನಿರ್ಗಮಿಸುವ ಬಾಣದ ಸಾಲುಗಳನ್ನು ದಾಟದಂಥ ತೆರೆದ ಮಾರ್ಗವನ್ನು ತಿಳಿದುಕೊಳ್ಳಿರಿ.


### ಮುಂದುವರೆದ - ಕಷ್ಟ



### ಸುಲಭ



### ಮಧ್ಯಮ




## ಪದ ಹುಡುಕಾಟ


| | | | | | | | | | | | |
|---|---|---|---|---|---|---|---|---|---|---|---|
| ಉ | ಕೇ | ಉ | ಪ | ದೇ | ಶಿ | ಸು | ವ | ದು | ಉ | ಮ | ನಂ |
| ಮ | ಮ | ಪೇ | ಹೇ | ಮ | ನಂ | ಮೀ | ಹೇ | ಕೇ | ಗ | ಮೀ | ಮೀ |
| ನು | ತ್ರ | ಹಂ | ದೋ | ಣಿ | ಕೇ | ಉ | ಮ | ನಂ | ನು | ಹಂ | ಕೇ |
| ಷ್ಯ | ಹೃ | ನಂ | ಆ | ಮೀ | ಆ | ಮೀ | ನು | ಗಾ | ರ | ರು | ಸಂ |
| ರು | ಉ | ಕೇ | ಹೇ | ಯೇ | ಗ | ನಂ | ಉ | ಆ | ಹೇ | ಉ | ಬಂ |
| ನಂ | ಮ | ಹಂ | ಸು | ಳು | ನಂ | ದು | ದ | ಕೆ | ಕೇ | ಮೀ | ಧ |
| ಹಂ | ಚು | ವ | ದು | ಹೃ | ವ | ಆ | ಹೇ | ಗ | ಬಿ | ಹೃ | ಲಿ |
| ಮೀ | ಕೇ | ಹೇ | ಗ | ಳ್ಳು | ದ | ದು | ನಂ | ಲಿ | ನಂ | ನಂ | ಹೇ |
| ರೋ | ನಂ | ಉ | ಕೊ | ಮ | ಉ | ಯ | ಹೃ | ಲಾ | ಹೃ | ಬು | ಕೇ |
| ಆ | ಮ | ಸಿ | ನಂ | ಹೇ | ನಂ | ಹಂ | ಉ | ಯ | ಹೇ | ವ | ಮ |
| ಕೇ | ಳಿ | ನ್ನ | ಹಂ | ಆ | ಹ್ವಾ | ನ | ಕೇ | ಯ | ಆ | ದು | ನಂ |
| ಕೇ | ನಂ | ಆ | ರು | ಕೇ | ಮ | ಬ | ಲೆ | ಗ | ಳು | ಕೇ | ಉ |

- ಕೇಳಿಸಿಕೊಳ್ಳುವದು
- ನಂಬುವದು
- ಉಪದೇಶಿಸುವದು
- ಹೇಳುವದು
- ಮೀನು
- ಮನುಷ್ಯರು
- ಮೀನುಗಾರರು
- ಆಹ್ವಾನ
- ಹಂಚುವದು
- ನಂಬಿಕೆ
- ದೋಣಿ
- ಹೃದಯ
- ಸಂಬಂಧ
- ಬಲೆಗಳು
- ಪೇತ್ರ
- ಯೇಸು
- ರೋಮನ್ನರು
- ಗಲಿಲಾಯ

ಒಂದೇ ರೀತಿ ಇರುವ ಎರಡು ಚಿತ್ರಗಳಿಗೆ ವೃತ್ತ ಹಾಕಿರಿ.



ಒಂದೇ ರೀತಿ ಇರುವ ಎರಡು ಚಿತ್ರಗಳಿಗೆ ವೃತ್ತ ಹಾಕಿರಿ.



# ಜೇಡಿಮಣ್ಣಿನೊಂದಿಗೆ ಸತ್ಯವೇದದ ವಿಮರ್ಶೆ

ಇಂದಿನ ಸತ್ಯವೇದದ ಕಥೆಗೆ ಜೇಡಿಮಣ್ಣನ್ನು ತೆಗೆದುಕೊಳ್ಳೋಣ!

ಒಂದುದಿನ ಯೇಸು ಕ್ರಿಸ್ತನು ಗಲಿಲಾಯ ಸಮುದ್ರದ ಬಳಿಯಲ್ಲಿ ನಿಂತುಕೊಂಡಿದ್ದನು, ಮತ್ತು ಜನರ ದೊಡ್ಡ ಗುಂಪು ಆತನು ಹೇಳುವ ದೇವರ ವಾಕ್ಯಗಳನ್ನು ಕೇಳಲು ಸೇರಿ ಬರುತ್ತಾ ಇತ್ತು. (ನಮ್ಮ ಜೇಡಿಮಣ್ಣಿನಿಂದ ಜನರ ದೊಡ್ಡ ಗುಂಪನ್ನು ಮಾಡೋಣ.) ಜನರ ಗುಂಪು ದೊಡ್ಡದಾಗುತ್ತಿದ್ದಾಗ, ಎಲ್ಲರೂ ಕೇಳಿಸಿಕೊಳ್ಳಬೇಕೆಂದು ಯೇಸು ಕ್ರಿಸ್ತನು ಬಯಸಿದನು. ಆತನು ಪೇತ್ರನ ದೋಣಿಯನ್ನು ಹತ್ತಿದನು ಮತ್ತು ಅದನ್ನು ಸ್ವಲ್ಪ ದೂರಕ್ಕೆ ನೂಕಬೇಕೆಂದು ಹೇಳಿದನು. ನಂತರ ಆತನು ಕುಳಿತುಕೊಂಡನು ಮತ್ತು ದೋಣಿಯಿಂದಲೇ ಅವರಿಗೆ ಕಲಿಸಿದನು. (ನಿಮ್ಮ ಜೇಡಿಮಣ್ಣಿನಿಂದ ದೋಣಿ ಮತ್ತು ಕೆಲವು ಅಲೆಗಳನ್ನು ಮಾಡಿರಿ.)


ಯೇಸು ಕ್ರಿಸ್ತನು ಜನರೊಂದಿಗೆ ಹಂಚಿಕೊಂಡದ್ದನ್ನು ಮುಗಿಸಿದ ನಂತರ, ಪೇತ್ರನಿಗೆ ತನ್ನೊಂದಿಗೆ ಮೀನು ಬೇಟೆಗೆ ಬರುವಂತೆ ಹೇಳಿದನು. ಪೇತ್ರನು ಇಡೀ ರಾತ್ರಿ ಕೆಲಸ ಮಾಡಿದ್ದನು ಆದರೂ ಮೀನು ಹಿಡಿಯಲು ಆತನೊಂದಿಗೆ ದೋಣಿಯನ್ನು ಹತ್ತಿದನು. (ಪೇತ್ರನೂ ಸೇರಿ) ಮೀನುಗಾರರು ತಮ್ಮ ಬಲೆಗಳನ್ನು ಬೀಸಿದಾಗ, ರಾಶಿರಾಶಿ ಮೀನುಗಳು ಸಿಕ್ಕಿದವು ಮತ್ತು ಬಲೆಗಳು ಹರಿದುಹೋಗಲಾರಂಭಿಸಿದವು! ಪೇತ್ರ, ಯಾಕೋಬ ಮತ್ತು ಯೋಹಾನ ತಮಗೆ ಮೀನು ದೊರಕಿದ್ದನ್ನು ನೋಡಿ ಬಹಳ ಆಶ್ಚರ್ಯಪಟ್ಟರು. (ಈಗ ನಿಮ್ಮ ಜೇಡಿಮಣ್ಣಿನಿಂದ ಕೆಲವು ಮೀನುಗಳನ್ನು ಮಾಡಿರಿ.)
ಪೇತ್ರನು ಮೊಣಕಾಲೂರಿದನು ಮತ್ತು ಹೇಳಿದ್ದೇನೆಂದರೆ, "ಸ್ವಾಮಿ, ನಾನು ಪಾಪಾತ್ಮನು, ನನ್ನನ್ನು ಬಿಟ್ಟುಹೋಗಬೇಕು!" ಅವರನ್ನು ಅಲ್ಲಿಯೇ ಬಿಡದೆ, ಯೇಸು ಕ್ರಿಸ್ತನು ಹೇಳಿದ್ದೇನೆಂದರೆ, "ಅಂಜಬೇಡ, ಇಂದಿನಿಂದ ನೀನು ಮನುಷ್ಯರನ್ನು ಹಿಡಿಯುವವನಾಗಿರುವಿ." (ಈಗ ನಿಮ್ಮ ಜೇಡಿಮಣ್ಣಿನಿಂದ ಕೆಲವು ಜನರನ್ನು ಮಾಡಿರಿ.)

(ವಿದ್ಯಾರ್ಥಿಗಳಿಂದ ಜೇಡಿಮಣ್ಣನ್ನು ಹಿಂದಕ್ಕೆ ತೆಗೆದುಕೊಳ್ಳಿರಿ.)



# ಆಟ ಕಂಠಪಾಠ ವಚನ ಸಮಯ

ಕಂಠಪಾಠ ವಚನ ಒಂದಾದ ನಂತರ ಒಂದು ಹೇಳಲು ಮಕ್ಕಳನ್ನು ಸಾಲಾಗಿ ನಿಲ್ಲಿಸಿರಿ! ಅವರು ಒಬ್ಬರ ನಂತರ ಒಬ್ಬರು ನಡೆಯುವಾಗ ಹೆಜ್ಜೆಗಳನ್ನು ಲೆಕ್ಕ ಮಾಡಬೇಕು, ನಂತರ ಹಿಂದಕ್ಕೆ ತಿರುಗಬೇಕು ಮತ್ತು ವಚನವನ್ನು ಹೇಳಬೇಕು. ಯಾವ ವಿದ್ಯಾರ್ಥಿ ವಚನವನ್ನು ಬೇಗ ಹೇಳುತ್ತಾನೋ ಅವನು ಗೆಲ್ಲುತ್ತಾನೆ.




ಬಲೂನ್ ಒಡೆಯುವ ವಿಮರ್ಶೆಯ ಆಟದ ಮೂಲಕ ಇಡೀ ವಾರದ ವಾಕ್ಯಗಳನ್ನು ವಿಮರ್ಶೆ ಮಾಡಿರಿ. ಸತ್ಯವೇದದ ಮೇಲೆ ಬೈಬಲ್ ರೆಫರೆನ್ಸ್ ಬರೆಯಿರಿ. ವಿದ್ಯಾರ್ಥಿಗಳನ್ನು ಅವರ ತಂಡಗಳಾಗಿ ಬೇರ್ಪಡಿಸಿರಿ. ಪ್ರತಿಯೊಂದು ತಂಡವು ಗೋಡೆಗೆ ಅಂಟಿಸಲಾಗಿರುವ ಬಲೂನ್ ಬಳಿಗೆ ವಿದ್ಯಾರ್ಥಿಯನ್ನು ಕಳುಹಿಸುತ್ತದೆ, ಅಲ್ಲಿಗೆ ಹೋಗುವ ವಿದ್ಯಾರ್ಥಿಯು ರೆಫರೆನ್ಸ್ ಓದಬೇಕು. ತಂಡವು ಒಟ್ಟಾಗಿ ವಚನವನ್ನು ಓದಬೇಕು ಮತ್ತು ಅವರು ವಚನವನ್ನು ಸರಿಯಾಗಿ ಹೇಳಿದ್ದಾರೋ ಇಲ್ಲವೋ ಎಂದು ನೋಡಲು ವಿದ್ಯಾರ್ಥಿ ಬಲೂನ್ ಒಡೆಯುತ್ತಾನೆ. ಗೋಡೆಯ ಮೇಲಿರುವ ಬಲೂನ್ ಕೆಳಗೆ ಒಂದು ಸಣ್ಣ ಹಾಳೆಯ ಮೇಲೆ ವಚನ ಇರುತ್ತದೆ.

# ತಿಂಡಿ ಭೇಲ್ ಪುರಿ

**ಸಾಮಗ್ರಿಗಳು:**
ಕಳ್ಳೇಪುರಿ 4 ಕಪ್
ಹುರಿದ ಕಡಲೆ ಕಾಳು 1 ಕಪ್
ಹುರಿದ ಕಡಲೆಬೀಜ 4 ಟೇಬಲ್ ಸ್ಪೂನ್
ಚಿಕ್ಕದಾಗಿ ಕತ್ತರಿಸಿರುವ ಟಮೊಟೊ 4 ಟೇಬಲ್ ಸ್ಪೂನ್
ರುಚಿಗೆ ಉಪ್ಪು
ಚಾಟ್ ಮಸಾಲಾ 2 ಟೀ ಸ್ಪೂನ್
ಹುಣಸೆ ರಸ 2 ಟೇಬಲ್ ಸ್ಪೂನ್
ನಿಂಬೆ ರಸ 1 ಟೇಬಲ್ ಸ್ಪೂನ್
ಮೇಲೆ ಹಾಕಲು ಸೇವ್
ಮೇಲೆ ಹಾಕಲು ಸಣ್ಣದಾಗಿ ಕತ್ತರಿಸಿರುವ ಕೊತ್ತಂಬರಿ ಸೊಪ್ಪು



**ವಿಧಾನ**
1. ಕಳೇಪುರಿ, ಹುರಿದ ಕಡಲೆ ಕಾಳು, ಕಡಲೆ ಬೀಜ, ಈರುಳ್ಳಿ, ಟಮೊಟೊ, ಉಪ್ಪು, ಚಾಟ್ ಮಸಾಲಾ, ಹುಣಸೆ ರಸ, ನಿಂಬೆ ರಸ ಬಟ್ಟಲಿನೊಳಗೆ ಹಾಕಿ ಚೆನ್ನಾಗಿ ಕಲಸಿರಿ.
2. ಪೇಪರ್ ನಲ್ಲಿ ಮಾಡಿರುವ ಕೋನ್ ಒಳಗೆ ಭೇಲ್ ಹಾಕಿ, ಮೇಲೆ ಕೊತ್ತಂಬರಿ ಸೊಪ್ಪು ಮತ್ತು ಸೇವ್ ಉದುರಿಸಿ ಕೊಡಿರಿ.


# ಕರಕುಶಲ ರಾಜನ ಕಿರೀಟ

**ಸಾಮಗ್ರಿಗಳು:**
-ಕಿರೀಟದ ಮಾದರಿಯ ಮುದ್ರಿತ ಪ್ರತಿಗಳು. ಪ್ರತಿಯೊಬ್ಬ ವಿದ್ಯಾರ್ಥಿಗೆ ಮೂರು ಕಿರೀಟದ ಹಾಳೆಗಳು ಬೇಕು. ನೀವು ಭಾಗಗಳನ್ನು ಮುದ್ರಿಸುವಾಗ; "ನಾನು ಅರಸನ ಮಗ/ಮಗಳು" ಮಕ್ಕಳಿಗೆ ಬೇಕಾಗಿರುವಷ್ಟು ತೆಗೆದುಕೊಳ್ಳಿರಿ.
-ಕತ್ತರಿಗಳು
-ಗೋಂದು ಅಥವಾ ಟೇಪ್
-ಬಣ್ಣದ ಪೆನ್ ಗಳು, ಬಳಪಗಳು, ಅಥವಾ ಬಣ್ಣದ ಪೆನ್ಸಿಲ್ ಗಳು





**ಸೂಚನೆಗಳು:**
ಹಂತ 1. ಕಿರೀಟಕ್ಕೆ ಬಣ್ಣ ಹಚ್ಚಿರಿ ಮತ್ತು ನಿಮ್ಮ ಬಳಿಯಿರುವ ಸಾಮಗ್ರಿಗಳಿಂದ ಅಲಂಕಾರ ಮಾಡಿರಿ (ಸ್ಟಿಕರ್ಸ್, ಗ್ಲಿಟ್ಟರ್, ಮಿನುಗು, ಅಥವಾ ಒಂದುವೇಳೆ ನಿಮ್ಮ ಬಳಿ ಇರುವದಾದರೆ ಸಣ್ಣ ಪ್ಲಾಸ್ಟಿಕ್ ಆಭರಣಗಳು).
ಹಂತ 2. ಚುಕ್ಕೆಯ ಗೆರೆಗಳಿಗನುಸಾರವಾಗಿ ಕಿರೀಟವನ್ನು ಕತ್ತರಿಸಿರಿ.
ಹಂತ 3. ಟೇಪ್ ಅಥವಾ ಗೋಂದಿನ ಮೂಲಕ ಟ್ಯಾಬ್ ಒಟ್ಟುಗೂಡಿಸಿರಿ. ನಿಮ್ಮ ಅದ್ಭುತವಾದ ಕಿರೀಟವು ಅದ್ಭುತವಾಗಿದೆ.

# ಕರಕುಶಲ 5 – ರಾಜನ ಕಿರೀಟ



# ಕರಕುಶಲ 5 – ರಾಜನ ಕಿರೀಟ



# ಆಟದ ಸಮಯ

ಮಕ್ಕಳು ಮುಂದೆ ಸಾಗಬೇಕು ಮತ್ತು ತಮ್ಮ ಅಲುಗಾಡುವದನ್ನು ನಿಲ್ಲಿಸಬೇಕು. ಮುಕ್ತಾಯದ ಸಮಯದಲ್ಲಿ ಮಕ್ಕಳು ವಿಶ್ರಮಿಸಿಕೊಳ್ಳಲು ಬಯಸುವದರಿಂದ ಆಟಗಳು ಅವರು ಉತ್ತಮವಾಗಿ ಚಲಿಸಲು ಮತ್ತು ಕೇಳಿಸಿಕೊಳ್ಳಲು ಅವಕಾಶ ಕೊಡುವದರೊಂದಿಗೆ ಬೆರೆಯಲು, ಸ್ಪರ್ಧಿಸಲು ಮತ್ತು ಸಂತೋಷಪಡಲು ಸಹಾಯ ಮಾಡುತ್ತವೆ. ನಾವು ಪ್ರತಿಯೊಂದು ಪಾಠಕ್ಕೆ ಆಯ್ಕೆಯ ಆಟಗಳನ್ನು ಕೊಟ್ಟಿದ್ದೇವೆ ಮತ್ತು ನೀವು ಬದಲಾಯಿಸಿಕೊಳ್ಳಲು ಬಯಸಿದರೆ ಇಲ್ಲಿ ಬೇರೆ ಕೆಲವನ್ನು ಕೊಟ್ಟಿದ್ದೇವೆ ಅಥವಾ ನಿಮಗೆ ಸಮಯ ಇದ್ದರೆ ನೀವು ಯಾವುದನ್ನು ಬೇಕಾದರೂ ಸೇರಿಸಿಕೊಳ್ಳಬಹುದು.

# ದಿನ 1 ಆಟದ ಸಮಯದಲ್ಲಿ

## ತುದಿಗಾಲಲ್ಲಿ ನಡೆಯುವದು

**ದಿನ 1ರ ಅವಶ್ಯಕತೆಗಳು**

- 6 ಪ್ಲಾಸ್ಟಿಕ್ ನೀರಿನ ಬಾಟಲಿಗಳು
- ಕಣ್ಣಿಗೆ ಕಟ್ಟಲು ಬಟ್ಟೆ
- ಅಳಿಸಬಹುದಾದ ಮಾರ್ಕರ್ ಅಥವಾ ಬಳಪ

**ಅವಶ್ಯವಿರುವಂಥವುಗಳು:**

1. ನೀರು ತುಂಬಿರುವ ಆರು ಪ್ಲಾಸ್ಟಿಕ್ ಬಾಟಲಿಗಳು
2. ಕಣ್ಣಿಗೆ ಕಟ್ಟುವ ಬಟ್ಟೆ
3. ಅಳಸಿಹೋಗುವಂಥ ಮಾರ್ಕರ್ ಅಥವಾ ಬಳಪ

ಸೂಚನೆಗಳು

1. ನೆಲದ ಮೇಲೆ ತೊಳೆಯಬಹುದಾದ ಮಾರ್ಕರ್ ಅಥವಾ ಬಳಪವನ್ನು ಬಳಸಿ ನೇರವಾದ ಗೆರೆ ಮತ್ತು ಪ್ರಾರಂಭ ಹಾಗೂ ಅಂತಿಮ ಹಂತವನ್ನು ಗುರುತಿಸಿರಿ.
2. ನೀರು ತುಂಬಿದ ಬಾಟಲಿಗಳನ್ನು ಗೆರೆಯ ಮೇಲೆ ಇಡಿರಿ.
3. ಒಂದು ಮಗುವಿನ ಕಣ್ಣಿಗೆ ಬಟ್ಟೆಯನ್ನು ಕಟ್ಟಿರಿ.
4. ಕಣ್ಣಿಗೆ ಬಟ್ಟೆ ಕಟ್ಟಿಸಿಕೊಳ್ಳುವ ಪ್ರತಿಯೊಂದು ಮಗು ಬಾಟಲಿಗಳನ್ನು ಬೀಳಿಸದೆ ಪ್ರಾರಂಭದಿಂದ ಕೊನೆಯ ತನಕ ನೇರೆವಾಗಿ ಗೆರೆಗನುಸಾರ ತುದಿಗಾಲಿನಲ್ಲಿ ನಡೆಯಬೇಕು.
5. ಒಂದುವೇಳೆ ಮಗು ಬಾಟಲಿಯನ್ನು ಬೀಳಿಸಿದರೆ ಆಟದಿಂದ ಹೊರಗೆ ಹೋಗಬೇಕು.
6. ಬಾಟಲಿಯನ್ನು ಬೀಳಿಸದೆ ಕೊನೆಯ ತನಕ ಸಾಗುವ ಮಗು ಗೆಲ್ಲುತ್ತದೆ.





ಹೆಚ್ಚಿನ ಸಂತೋಷಕ್ಕಾಗಿ ಪ್ರತಿದಿನಕ್ಕೆ ಎರಡು ಆಟಗಳು ಇರುವದರಿಂದ ಇದು ಅಚ್ಚುಮೆಚ್ಚಿನ ಕೇಂದ್ರವಾಗಿರುತ್ತದೆ. ಪ್ರತಿದಿನ ಮುಕ್ತಾಯದ ಸಮಾರಂಭದಲ್ಲಿ ಪ್ರತಿಯೊಂದು ಕೇಂದ್ರದಲ್ಲಿಯೂ ಯಾವ ಬಣ್ಣದ ಬಂದನ ಅಥವಾ ರಿಬ್ಬನ್ ತಂಡದವರು ಗೆದ್ದಿದ್ದಾರೆ ಎಂಬದರ ದಾಖಲೆ ಇಟ್ಟುಕೊಳ್ಳುವದನ್ನು ಮರೆಯಬೇಡಿರಿ. ಸಂತೋಷಪಡಿರಿ!

# ದಿನ 2 ಆಟದ ಸಮಯದಲ್ಲಿ

## ಕೈಗಾಡಿಯ ಸ್ಪರ್ಧೆ

ಮಕ್ಕಳನ್ನು ಅವರ ಬಣ್ಣದ ತಂಡದಂತೆ ವಿಭಾಗಿಸಿರಿ ಮತ್ತು ಜೊತೆಗಾರರನ್ನು ಆಯ್ಕೆ ಮಾಡುವಂತೆ ಅವರಿಗೆ ಹೇಳಿರಿ. ಒಂದು ಮಗು ನೆಲದ ಮೇಲೆ ಮಲಗಿಕೊಳ್ಳಬೇಕು ಮತ್ತೊಂದು ಮಗು ಮಲಗಿರುವ ಮಗುವಿನ ಕಾಲುಗಳನ್ನು ಹಿಡಿದು ಮೇಲಕ್ಕೆ ಎತ್ತಬೇಕು. (ಇದು ಕೈಗಾಡಿಯ ಸ್ಥಿತಿಯಾಗಿದೆ.) ಹೀಗೆ ಮಕ್ಕಳು ಓಡುತ್ತಾ ಗುರಿಯನ್ನು ತಲುಪಬೇಕು.

### ದಿನ 2ರ ಅವಶ್ಯಕತೆಗಳು

- ತಂತಿ, ಟೇಪ್, ಅಥವಾ ಪ್ರಾರಂಭ ಮತ್ತು ಮುಕ್ತಾಯದ ಗೆರೆಗಳನ್ನು ನಿಗದಿಪಡಿಸಲು ನೆಲದ ಮೇಲೆ ಹಾಕುವ ಗೆರೆಗಳು
- ಬಾಳೆ ಹಣ್ಣುಗಳು
- ತಂತಿ



## ಒಳಗೆ ಅಥವಾ ಹೊರಗೆ ಬಾಳೆ ಹಣ್ಣು ಒಲಂಪಿಕ್ಸ್ (ರಿಲೇ ಓಟ)

ನಿಮ್ಮ ತರಗತಿಯನ್ನು ಅವರ ಬಣ್ಣದ ತಂಡಗಳಾಗಿ ವಿಭಾಗಿಸಿರಿ. ಪ್ರತಿಯೊಂದು ತಂಡಕ್ಕೆ ಒಂದು ಬಾಳೆಹಣ್ಣು ಕೊಡಿರಿ. ಕೆಳಗೆ ಕೊಡಲಾಗಿರುವ ಆಲೋಚನೆಗಳನ್ನು ಉಪಯೋಗಿಸಿ ಒಂದು ಓಟವನ್ನು ಆಯ್ಕೆ ಮಾಡಿಕೊಳ್ಳಿರಿ ಅಥವಾ ಎಲ್ಲವುಗಳನ್ನು ಉಪಯೋಗಿಸಿರಿ.

1. ಬಾಳೆಹಣ್ಣನ್ನು ಮೊಣಕಾಲುಗಳ ನಡುವೆ ಇಡಿರಿ ಮತ್ತು ಕುಪ್ಪಳಿಸುತ್ತಾ ಗುರಿಯ ಬಳಿಗೆ ಹೋಗಿ ಹಿಂದಿರುಗಿ ಬನ್ನಿರಿ.
2. ತಂಡದ ಇಬ್ಬರು ಸದಸ್ಯರು ಬಾಳೆಹಣ್ಣನ್ನು ಅಂತಿಮ ಗೆರೆ ಮತ್ತು ಹಿಂದಕ್ಕೆ ಹಿಂದಕ್ಕೂ ಹಾಗೂ ಮುಂದಕ್ಕೂ ಎಸೆಯಬೇಕು.
3. ಮಕ್ಕಳು ಬಾಳೆಹಣ್ಣನ್ನು ತಮ್ಮ ಕಂಕುಳ ಕೆಳಗೆ ಇಟ್ಟುಕೊಳ್ಳಬೇಕು ಮತ್ತು ಒಂದು ಕಾಲಲ್ಲಿ ಕುಂಟುತ್ತಾ ಮುಂದಕ್ಕೆ ಹೋಗಿ ಹಿಂದಕ್ಕೆ ಬರಬೇಕು, ಒಬ್ಬೊಬ್ಬರಾಗಿ ಇದನ್ನು ಮಾಡಬೇಕು.
4. ಪ್ರತಿಯೊಬ್ಬ ಆಟಗಾರನ ಸೊಂಟಕ್ಕೆ ದಾರದಿಂದ ಕಟ್ಟಿರುವ ಬಾಳೆಹಣ್ಣನ್ನು ಕಟ್ಟಬೇಕು. ಕಟ್ಟಿರುವ ಬಾಳೆಹಣ್ಣಿನಿಂದ ಅವರು ಚೆಂಡನ್ನು ಉರುಳಿಸಿಕೊಂಡು ಗುರಿ ತಲುಪಬೇಕು. (ಚಿತ್ರ ಇಲ್ಲಿ ಕೊಡಲಾಗಿದೆ.)

# ದಿನ 3 ಆಟದ ಸಮಯದಲ್ಲಿ

## ಹಗ್ಗ ಜಗ್ಗಾಟ

ಈ ಆಟಕ್ಕಾಗಿ ನೀವು ಗಟ್ಟಿಯಾದ ಹಗ್ಗವನ್ನು ತೆಗೆದುಕೊಳ್ಳಬೇಕು ಅದರ ಎರಡೂ ಮೂಲೆಗಳಿಗೆ ದೊಡ್ಡ ಗಂಟು ಹಾಕಬೇಕು. ಹಗ್ಗವು ಬಹಳ ಗಟ್ಟಿಯಾಗಿದ್ದು ಅದನ್ನು ಎಳೆಯುವಾಗ ಮಕ್ಕಳ ಕೈಗಳಿಗೆ ಉರಿ ಆಗಬಾರದು. ಮಕ್ಕಳನ್ನು ಅವರ ಬಣ್ಣದ ತಂಡಗಳಾಗಿ ವಿಭಾಗಿಸಿರಿ. ಒಂದು ತಂಡವು ಸಾಲಾಗಿ ನಿಲ್ಲಬೇಕು ಮತ್ತು ಹಗ್ಗದ ಒಂದು ಕೊನೆಯನ್ನು ಹಿಡಿದುಕೊಳ್ಳಬೇಕು; ಹಾಗೆಯೇ ಇನ್ನೊಂದು ಕೊನೆಯಲ್ಲಿ ಮತ್ತೊಂದು ತಂಡವು ಮಾಡಬೇಕು. ಹಗ್ಗದ ಮಧ್ಯಭಾಗಕ್ಕೆ ಸರಿಯಾಗಿ ಮಣ್ಣಿನಿಂದ ಗೆರೆ ಹಾಕಿರಿ. ಮಕ್ಕಳು ತಂಡವನ್ನು ಹಗ್ಗವನ್ನು ಎಳೆಯಬೇಕು ಮತ್ತು ಎದುರಿಗಿರುವ ತಂಡವು ಮಧ್ಯ ಗೆರೆಯಿಂದ ಆಚೆ ಬರುವಂತೆ ಎಳೆಯಬೇಕು. ಇನ್ನುಳಿದ ಎರಡು ತಂಡಗಳೊಂದಿಗೂ ಹಗ್ಗ ಜಗ್ಗಾಟದ ಅಟವನ್ನು ಮುಂದುವರೆಸಿರಿ. ನಂತರ ಗೆದ್ದ ಎರಡು ತಂಡಗಳ ನಡುವೆ ಸ್ಪರ್ಧೆಯನ್ನು ನಡೆಸಿರಿ.



### ದಿನ 3ರ ಅವಶ್ಯಕತೆಗಳು

- ಬಲೂನ್ಸ್
- ಟೇಪ್
- ಚೂಪಾದ ಪಿನ್
- ಗಟ್ಟಿಯಾದ ಹಗ್ಗ
- ಮಧ್ಯದ, ಮುಕ್ತಾಯದ, ಅಥವಾ ಪ್ರಾರಂಭದ ಗೆರೆಯನ್ನು ನೆಲದ ಮೇಲೆ ಹಾಕಲು ದಾರ ಅಥವಾ ಸಾಲು
- ಕಾಲುಗಳನ್ನು ಒಟ್ಟಾಗಿ ಕಟ್ಟಲು ಉದ್ದದ ಬಟ್ಟೆ

## ಮೂರು ಕಾಲಿನ ಓಟ

ಮಕ್ಕಳನ್ನು ಅವರ ಬಣ್ಣದ ತಂಡಗಳಾಗಿ ವಿಭಾಗಿಸಿರಿ ಮತ್ತು ಜೊತೆಗಾರರನ್ನು ಆರಿಸಿರಿ. ಜೊತೆಗಾರರು ಅಕ್ಕಪಕ್ಕ ನಿಂತುಕೊಳ್ಳಬೇಕು. ದೊಡ್ಡ ಹಗ್ಗದಿಂದ, ಜೊತೆಯಾಗುವ ಅವರ ಕಾಲುಗಳನ್ನು ಕಟ್ಟಿರಿ. ಅವರು ಮೂರು ಕಾಲುಗಳಲ್ಲಿ ಓಡಿ ಗುರಿ ಮುಟ್ಟಬೇಕು. ಯಾವ ತಂಡ ಮೊದಲು ಗುರಿ ತಲುಪದೆಯೋ ಅದು ಗೆಲ್ಲುತ್ತದೆ.



# ದಿನ 4 ಆಟದ ಸಮಯದಲ್ಲಿ

## ಅರಮನೆಯ ಆಟದಲ್ಲಿ ಪಾತ್ರವನ್ನು ಸೇರಿಸಿರಿ

ನೀವು 2 ಅಥವಾ ಹೆಚ್ಚು ತಂಡಗಳನ್ನು ಮಾಡಬಹುದು. ಒಂದು ಹಾಳೆಯ ಮೇಲೆ ಅರಮನೆಯ ದೊಡ್ಡ ಚಿತ್ರವನ್ನು ಬಿಡಿಸಿರಿ ಮತ್ತು ಮಧ್ಯದಲ್ಲಿ ದೊಡ್ಡ ಬಾಗಿಲನ್ನು ಬರೆಯಿರಿ, ಹಾಗೆಯೇ ಕಳ್ಳ ಪೋಲೀಸ್ ನಿಂದ ಅರಸನ ಅಥವಾ ಬೇರೆ ಯಾವುದಾದರು ಪಾತ್ರದ ಚಿತ್ರವನ್ನು ಬಿಡಿಸಿ ಕತ್ತರಿಸಿರಿ. ಮಕ್ಕಳನ್ನು ಸಾಲಾಗಿ ನಿಲ್ಲಿಸಿರಿ. ಪ್ರತಿಯೊಂದು ಮಗುವಿನ ಸರದಿ ಬರುವಾಗಲೂ, ಅವರ ಕಣ್ಣಿಗೆ ಬಟ್ಟೆ ಕಟ್ಟಿರಿ, ಕಳ್ಳ ಪೋಲೀಸ್ ಪಾತ್ರವನ್ನು ಬೆನ್ನ ಮೇಲೆ ಅಂಟಿಸಿರಿ, ಮತ್ತು ಮಗುವಿನ ವೃತ್ತದೊಳಗೆ ತಿರುಗಿಸಿರಿ. ನಂತರ ಮಗುವನ್ನು ಅರಮನೆಯ ದ್ವಾರದ ಕಡೆಗೆ ನಿಲ್ಲಿಸಿರಿ ಮತ್ತು ದ್ವಾರದೊಳಗೆ ಪಾತ್ರವನ್ನು ಇಡುವಂತೆ ಹೇಳಿರಿ. ಯಾರ ಬಾಗಿಲ ಒಳಗೆ ಇಡುತ್ತಾರೋ ಅವರು ಗೆಲ್ಲುತ್ತಾರೆ. ಹಾಗೆಯೇ ತಂಡದ ಸದಸ್ಯರು ಕಣ್ಣಿಗೆ ಬಟ್ಟೆ ಕಟ್ಟಿಸಿಕೊಂಡಿರುವ ಮಗುವಿಗೆ, "ಮೇಲೆ, ಕೆಳಗೆ, ಎಡಕ್ಕೆ, ಬಲಕ್ಕೆ, ಸರಿಯಾಗಿದೆ" ಎಂಬ ಸುಳಿವುಗಳನ್ನು ಕೊಡಬಹುದು.

### ದಿನ 4ರ ಅವಶ್ಯಕತೆಗಳು

- ದೊಡ್ಡದಾಗಿ ಬರೆದಿರುವ ಅಥವಾ ಪೇಂಟ್ ಮಾಡಿರುವ ಪೇಪರ್ ಅರಮನೆ
- ಪೇಪರ್ ಮೇಲೆ ಮುದ್ರಿಸಲಾಗಿರುವ ಪ್ರಮುಖ ಇನ್ಸಪೆಕ್ಟರ್ ಮತ್ತು ಕಳ್ಳರು
- ಕಣ್ಣುಮುಚ್ಚುವದು
- ಟೇಪ್



# ದಿನ 5 ಆಟದ ಸಮಯದಲ್ಲಿ

## ಕುಂಟೆ ಬಿಲ್ಲೆ

ಮಕ್ಕಳನ್ನು ಬಣ್ಣದ ತಂಡಗಳಾಗಿ ವಿಭಾಗಿಸಿರಿ ಮತ್ತು ಸಾಲಾಗಿ ನಿಲ್ಲಿಸಿರಿ. ಈ ಆಟದ ಪ್ರಕಾರ ನೆಲದ ಮೇಲೆ ಡಬ್ಬಿಗಳನ್ನು ಬರೆದು ಅಂಕಿಗಳನ್ನು ಅದರೊಳಗೆ ಬರೆಯಬೇಕು. ಕಂಠಪಾಠ ವಚನದಲ್ಲಿ ಎಷ್ಟು ಪದಗಳಿರುತ್ತವೆಯೋ ಅಷ್ಟು ಚೌಕದ ಡಬ್ಬಿಗಳನ್ನು ಬರೆಯಬೇಕು. ಆಟಗಾರರು ಅಂಕ ಬರೆದಿರುವ ಡಬ್ಬಿಯೊಳಗೆ ಸಣ್ಣ ಕಲ್ಲನ್ನು ಹಾಕಬೇಕು. ನಂತರ ಒಂದು ಕಾಲಿನಲ್ಲಿ ಕುಂಟುತ್ತಾ, ಮೇರೆಯ ಗೆರೆಗಳನ್ನು ಮುಟ್ಟದೆ ಕಲ್ಲನ್ನು ತೆಗೆದುಕೊಂಡು ಬರಬೇಕು. ಪ್ರತಿಬಾರಿ ಕುಂಟುವಾಗಲೂ ವಚನದ ಪದವನ್ನು ಹೇಳಬೇಕು. ತಂಡದ ಪ್ರತಿಯೊಬ್ಬರೂ ಕುಂಟುವ ಮೂಲಕ ವಚನವನ್ನು ಪೂರ್ತಿಯಾಗಿ ಹೇಳುವ ತನಕ ಇದನ್ನು ಮುಂದುವರೆಸಿರಿ.

### ದಿನ 5ರ ಅವಶ್ಯಕತೆಗಳು

- ಕಂಠಪಾಠ ವಚನ ಆಟಕ್ಕಾಗಿ ಬಲೂನ್ಸ್, ಟೇಪ್, ಮತ್ತು ಪಿನ್
- ಬಳಪ, ಸಣ್ಣ ಕಲ್ಲು
- ತಂತಿ, ಕುರ್ಚಿಗಳು, ಅಥವಾ ಪ್ರಾರಂಭ ಮತ್ತು ಕೊನೆಯ ಸಾಲುಗಳನ್ನು ನೆಲದ ಮೇಲೆ ಗುರುತಿಸಲು ಸಾಲು
- ಎರಡು ಬೇರೆ ಬಣ್ಣದ ಬಲೂನ್ಸ್
- ನಾಲ್ಕು ಪೊರಕೆಗಳು ಅಥವಾ ನೀರಿನ ನೂಡಲ್ಸ್ (ಒಂದುವೇಳೆ ಬಲವಾದ ಹೊಡೆತಗಳು ಬಿದ್ದರೆ ಮೃದುವಾದ ಮೂಲೆಗಳಿರುವ ಕಂಬಗಳು)

## ಕಳ್ಳನನ್ನು ಹಿಡಿಯಿರಿ

ನಿಮ್ಮ ಗುಂಪನ್ನು ಬಣ್ಣದ ತಂಡಗಳಾಗಿ ವಿಭಾಗಿಸಿರಿ. ಪ್ರತಿಯೊಂದು ತಂಡಕ್ಕೆ ನಿಮಗೆ ಎರಡು ಪೊರಕೆಗಳು ಅಥವಾ ವಾಟರ್ ನೂಡಲ್ಸ್ ಮತ್ತು ಆರು ಬಲೂನ್ ಗಳು, ಮೂರು ಒಂದು ಬಣ್ಣದ್ದು ಮತ್ತು ಮೂರು ಇನ್ನೊಂದು ಬಣ್ಣದ್ದು ಬೇಕಾಗುತ್ತದೆ. ಕೋಣೆಯ ಮತ್ತೊಂದು ಕೊನೆಯಲ್ಲಿ ಎರಡು ಕುರ್ಚಿಗಳನ್ನು ಇಡಿರಿ. ತಂಡದ ಪ್ರತಿಯೊಬ್ಬ ಸದಸ್ಯನು ಬಲೂನಿನ "ಹಿಂಡನ್ನು" ಕೋಣೆಯ ಇನ್ನೊಂದು ಮೂಲೆಗೆ, ಕುರ್ಚಿಯ ಸುತ್ತಲು ತಳ್ಳಬೇಕು ಮತ್ತು ತಂಡದ ಇನ್ನೊಬ್ಬ ಸದಸ್ಯನ ಬಳಿಗೆ ಬರಬೇಕು, ತಳ್ಳಲು ಪೊರಕೆಯನ್ನು ಉಪಯೋಗಿಸಬೇಕು. ಒಂದುವೇಳೆ ಕೆಲವು ಒಡೆದು ಹೋದರೆ ಉಪಯೋಗಿಸಲು ಹೆಚ್ಚುವರಿ ಬಲೂನ್ ಇಟ್ಟುಕೊಳ್ಳಿರಿ!



# ಹೆಚ್ಚುವರಿ ಆಟಗಳು



## ಗೋಣಿ ಓಟ

ಒಂದುವೇಳೆ ನಿಮಗೆ ದೊಡ್ಡ ಗೋಣಿಗಳು ದೊರೆತರೆ (ಅಂದರೆ ಅಕ್ಕಿ ಚೀಲ, ಆಲೂಗಡ್ಡೆ ಚೀಲ, ಗೋಣಿ ಚೀಲ, ಇತ್ಯಾದಿ), ಗೋಣಿ ಓಟ ಬಹಳ ಸಂತೋಷಕರವಾಗಿರುತ್ತದೆ.

## ಬಲೂನ್ ತುಳಿತ

ಬಲೂನ್ ತುಳಿತ
ನಿಮ್ಮ ಆಟದ ಸ್ಥಳವನ್ನು ಬಲೂನ್ ಗಳಿಂದ ತುಂಬಿಸಿರಿ. ನಂತರ ಬಲೂನ್ ತುಳಿಯಲು ಮಕ್ಕಳನ್ನು ಬಿಡಿರಿ. ಬಲೂನ್ ಗಳಿಗೆ ಗಾಳಿ ಊದುವ ಮೊದಲು ಕೌಬಾಯ್ ಸ್ಟಿಕ್ಕರ್ಸ್ ಮತ್ತು ತಾತ್ಕಾಲಿಕ ಟ್ಯಾಟೂಗಳಂತಹ ಬಹುಮಾನಗಳನ್ನು ಒಳಗೆ ಹಾಕಿರಿ. ತುಳಿತವು ಮುಗಿದ ನಂತರ, ಮಕ್ಕಳು ಹಿಂದಕ್ಕೆ ಹೋಗಿ ಬಹುಮಾನಗಳನ್ನು ತೆಗೆದುಕೊಳ್ಳಬೇಕು.



## ಬಲೂನ್ ಒಡೆಯುವದು

ಪ್ರತಿಯೊಂದು ಮಗುವಿನ ಮೊಣಕಾಲಿಗೆ ಬಲೂನ್ ಕಟ್ಟಿರಿ. ತಮ್ಮ ಬಲೂನ್ ಕಾಪಾಡಿಕೊಳ್ಳಬೇಕು ಹಾಗೆಯೇ ಇತರರ ಬಲೂನ್ ಒಡೆದು ಹಾಕಲು ಪ್ರಯತ್ನಿಸುವದು ಅವರ ಗುರಿಯಾಗಿರುವದು. ಯಾರ ಕಾಲಿಗೆ ಕಟ್ಟಿರುವ ಬಲೂನ್ ಒಡೆಯದೆ ಇರುತ್ತದೆಯೋ ಅವನು/ಅವಳು ಗೆಲ್ಲುವನು/ಗೆಲ್ಲುವಳು.



## ಟೋಪಿಯೊಳಗೆ ಕೌಬಾಯ್ ಟೋಪಿಯನ್ನು ಎಸೆಯುವದು

ನೆಲದ ಮೇಲೆ ಹುಲ ಹೂಪ್ (ವೃತ್ತ) ಇಡಿರಿ. ನಿಮ್ಮ ಪುಟ್ಟ ಕೌಬಾಯ್ ಗಳನ್ನು ಗೆರೆಯ ಹಿಂದೆ ಸಾಲಾಗಿ ನಿಲ್ಲಿಸಿರಿ ಮತ್ತು ತಮ್ಮ ಟೋಪಿಯನ್ನು ವೃತ್ತದೊಳಗೆ ಹಾಕಲು ಅವರಿಗೆ ಹೇಳಿರಿ. (ಅಥವಾ ಆಟಕ್ಕೆಂದು ಕೆಲವು ಟೋಪಿಗಳನ್ನು ತರಿಸಿಕೊಳ್ಳಿರಿ). ಹುಲ ಹೂಪ್ ನೊಳಗೆ ತಮ್ಮ ಟೋಪಿಯನ್ನು ಹಾಕುವ ಮಕ್ಕಳಿಗೆ ಬಹುಮಾನವನ್ನು ಕೊಡಿರಿ. ಇದಲ್ಲದೆ ನೀವು ದೊಡ್ಡ ಗುರಿಯ ಮಧ್ಯಭಾಗವನ್ನು ಬರೆಯಿರಿ ಯಾರು ಮಧ್ಯಭಾಗಕ್ಕೆ ಸಮೀಪ ಎಸೆಯುತ್ತಾರೋ ಅವರಿಗೆ ಬಹುಮಾನ ಕೊಡಿರಿ.





# Equip & Grow

“ಕಳ್ಳ ಪೋಲೀಸ್” ಎಂಬ ಈ ಸಾಮಗ್ರಿಯನ್ನು“Equip & Grow – ಮಕ್ಕಳೇ ಪ್ರಮುಖರು” ಸೇವೆಯಿಂದ ಸೃಷ್ಟಿಸಿ ನಿರ್ಮಾಣ ಮಾಡಲಾಗಿದೆ. ಎಲ್ಲಾ ಹಕ್ಕುಗಳು ಕಾಯ್ದಿರಿಸಲಾಗಿದೆ.
ನಿಮ್ಮ ಸೇವೆಯ ಅವಶ್ಯಕತೆಗಳಿಗಾಗಿ ಪ್ರತಿಗಳನ್ನು ತೆಗೆದುಕೊಳ್ಳಲು ಅಥವಾ ಇತರೆ ಸೇವೆಗಳನ್ನು ಆಶೀರ್ವದಿಸಲು ನಾವು ಅನುಮತಿ ನೀಡುತ್ತೇವೆ.
ಹೆಚ್ಚಿನ ಮಾಹಿತಿಗಳಿಗಾಗಿ, ನಮ್ಮನ್ನು ಸಂಪರ್ಕಿಸಬೇಕಾದ ವಿಳಾಸ
Info@ChildrenAreImportant.com
ಎಲ್ಲಾ ವಚನಭಾಗಗಳನ್ನು ಎನ್ ಐ ವಿ ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ.
ಇಡೀ ಕ್ರಿಯಾತ್ಮಕ ತಂಡಕ್ಕೆ ತುಂಬು ಹೃದಯದ ಕೃತಜ್ಞತೆಗಳು!
ಸಂಪಾದಕಿ: Kristina Krauss
ಕ್ರಿಯಾತ್ಮಕ ತಂಡ:  Blessy Jacob, Anupama Wankhede, Angie Kangas, Areli Salinas, Benjamín Gaxiola, Dwight Krauss, Jan Krauss, Jennifer Sanchez, Jon Kangas, Julio Sanchez, Mary Amelia Hernández, Mike Kangas, Vickie Kangas, Rubén Dario, Suki Kangas, and Verónica Toj.